ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆ
ಹಾಗೂ
ಸಾರ್ವಜನಿಕ ಶಿಕ್ಷಣ ಇಲಾಖೆ ವತಿಯಿಂದ

# ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ ಹಾಗೂ ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2014-2015

ಮಾಹಿತಿ ಕೈಪಿಡಿ 2014

ಸಂವ್ಯಶಾಇ 10 ಯು.ಸಂ.ಸ್ಪ 2014

# ಸಂಸದೀಯ ವ್ಯವಹಾರಗಳ ಇಲಾಖೆ
# ಹಾಗೂ
# ಸಾರ್ವಜನಿಕ ಶಿಕ್ಷಣ ಇಲಾಖೆ

## ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ನಡೆಸಲಾಗುತ್ತಿರುವ ಜಿಲ್ಲಾ
## ಹಾಗೂ
## ರಾಜ್ಯ ಮಟ್ಟದ ಯುವ ಸಂಸತ್ ಸ್ಪರ್ಧೆ 2014–2015

**ಮಾಹಿತಿ ಕೈಪಿಡಿ 2014**

**ಸಂವ್ಯಶಾಇ 10 ಯು.ಸಂ.ಸ್ಪ 2014**

## ವಿಷಯಸೂಚಿ


| ಕ್ರಮ ಸಂಖ್ಯೆ | ವಿಷಯಗಳು | ಪುಟ ಸಂಖ್ಯೆ |
|---|---|---|
| 1 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ– ರಾಜ್ಯ ಸರ್ಕಾರದ ಆದೇಶ | 1–2 |
| 2 | ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ – ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದ ಪತ್ರ | 3–4 |
| 3 | ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ ರಾಜ್ಯ ಸರ್ಕಾರಗಳು/ ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ | 5–11 |
| 4 | ಪ್ರಮಾಣ ಪತ್ರಗಳು (ಅನುಬಂಧ I ರಿಂದ III ) | 12–15 |
| 5 | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು | 16–21 |
| 6 | ಮಾದರಿ ಕಾರ್ಯಕ್ರಮಗಳು (ಅನುಬಂಧ–ಎ) | 22 |
| 7 | ಕಡ್ಡಾಯ ಹಾಗೂ ಐಚ್ಛಿಕ ವಿಷಯಗಳ ಪಟ್ಟಿ (ಅನುಬಂಧ–ಬಿ) | 23 |
| 8 | ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ (ಅನುಬಂಧ IV, V) | 24–25 |
| 9 | ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು | 26–28 |
| 10 | ಕರ್ನಾಟಕ ವಿಧಾನ ಸಭೆಯ ಮಾದರಿ ಕಾರ್ಯಕಲಾಪಗಳ ಪಟ್ಟಿ (ಅನುಬಂಧ–VI) | 29–32 |
| 11 | ಕರ್ನಾಟಕ ವಿಧಾನ ಪರಿಷತ್ತಿನ ಮಾದರಿ ಕಾರ್ಯಕಲಾಪಗಳ ಪಟ್ಟಿ | 33–35 |
| 12 | ಮಾದರಿ ಸಂತಾಪ ಸೂಚನೆಗಳು (ಅನುಬಂಧ – VII) | 36–39 |
| 13 | ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು (ಅನುಬಂಧ–VIII) | 40–76 |
| 14 | ಗಮನ ಸೆಳೆಯುವ ಸೂಚನೆಗಳ ಮಾದರಿಗಳು (ಅನುಬಂಧ–IX) | 77–81 |
| 15 | ನಿಯಮ–330ರ ಮೇರೆಗೆ ಚರ್ಚೆ | 82–84 |
| 16 | ಶಾಸನ ರಚನೆ – ಮಾದರಿ ವಿಧೇಯಕ | 85–104 |
| 17 | ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳ ನಿಯಮ 324 ರಿಂದ 351ರ ಉದ್ಧೃತ ಭಾಗ (ಅನುಬಂಧ– X) | 105–115 |
| 18 | ತೀರ್ಪುಗಾರರ ಮಾದರಿ ಅಂಕಪಟ್ಟಿ | 116 |
| 19 | ಜಿಲ್ಲಾ ಮಟ್ಟದಲ್ಲಿ ಭಾಗವಹಿಸಿದ ಸ್ಪರ್ಧೆಗಳ ಪಟ್ಟಿ – (ಶಾಲೆಯ ಹೆಸರು, ಸ್ಪರ್ಧಾರ್ಥಿಗಳ ಹೆಸರು) | 117 |

# ಕರ್ನಾಟಕ ಸರ್ಕಾರದ ನಡವಳಿಗಳು

**ವಿಷಯ:** 2014-15ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಯುವ ಸಂಸತ್ ಸ್ಪರ್ಧೆ ನಡೆಸುವ ಬಗ್ಗೆ.
**ಓದಲಾಗಿದೆ:** (1) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 6 ಸಂವ್ಯವಿ 1997, ದಿನಾಂಕ:09.10.2002
(2) ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 150 ಆಡಳಿತ 2002, ದಿನಾಂಕ: 11.11.2002
(3) ಸರ್ಕಾರದ ಆದೇಶ ಸಂಖ್ಯೆ ಸಂವ್ಯಶಾಇ 15 ಸಂವ್ಯವಿ 2009, ದಿನಾಂಕ: 14.07.2009
(4) ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಟಿಪ್ಪಣಿ ಸಂಖ್ಯೆ: ಸಿಆಸುಇ/21/ಹೆಸಆ/2010, ದಿನಾಂಕ: 27.05.2010
(5) ಆರ್ಥಿಕ ಇಲಾಖೆ ಹಿಂಬರಹ ಸಂಖ್ಯೆ: ಆಇ 320 ವೆಚ್ಚ-2014 ದಿನಾಂಕ: 29.11.2014

**ಪ್ರಸ್ತಾವನೆ:**

ಮೇಲೆ (1)ರಲ್ಲಿ ಓದಲಾಗಿರುವ ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 6 ಸಂವ್ಯವಿ 1997, ದಿನಾಂಕ: 09.10.2002 ಕರ್ನಾಟಕ ರಾಜ್ಯದಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ಯೋಜನೆ 2010ನ್ನು ಜಾರಿಗೊಳಿಸಲಾಗಿದೆ.

ಮೇಲೆ (2) ರಲ್ಲಿ ಓದಲಾಗಿರುವ ಸರ್ಕಾರಿ ಆದೇಶದಲ್ಲಿ ಕರ್ನಾಟಕ ರಾಜ್ಯದಲ್ಲಿ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆ (ತಿದ್ದುಪಡಿ) ನಿಯಮಗಳು, 2002ನ್ನು ಹೊರಡಿಸಲಾಗಿದೆ.

ಮೇಲೆ (3)ರಲ್ಲಿ ಓದಲಾದ ಸರ್ಕಾರದ ಆದೇಶದಲ್ಲಿ ಭಾರತ ಸರ್ಕಾರವು ಪತ್ರ ಸಂಖ್ಯೆ ಈ3(3) 2008 ವೈ.ಪಿ. ದಿನಾಂಕ 12.05.2009 (ವಿವರಗಳು ಅಧಿಕೃತ ವೆಬ್‌ಸೈಟ್ ಎಂದರೆ www. mpa.nic.in ನಲ್ಲಿ ಲಭ್ಯವಿದೆ)ಯಲ್ಲಿ ಹೊರಡಿಸಿರುವ "ಯುವ ಸಂಸತ್ ಸ್ಪರ್ಧೆಗಳನ್ನು ನಡೆಸುವುದಕ್ಕಾಗಿ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸಿನ ನೆರವು ಯೋಜನೆ"ಯನ್ನು ಯಥಾವತ್ತಾಗಿ ಜಾರಿಗೊಳಿಸಿದೆ.

ಮೇಲೆ (4)ರಲ್ಲಿ ಓದಲಾದ ಟಿಪ್ಪಣಿಯಲ್ಲಿ ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯು ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯು ಆಡಳಿತ ಆದೇಶವನ್ನು ಹೊರಡಿಸಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., ಬೆಂಗಳೂರು ಇವರಿಗೆ ಎ.ಸಿ. ಬಿಲ್ ಮೂಲಕ ರೂ. 5,00,000/- ಹಣದ ಮೊತ್ತವನ್ನು 2014-15ರಲ್ಲಿಯ ಯುವ ಸಂಸತ್ ಸ್ಪರ್ಧೆಯ ಖರ್ಚು ವೆಚ್ಚಕ್ಕಾಗಿ ಡ್ರಾ ಮಾಡಿಕೊಳ್ಳಲು ಮಂಜೂರಾತಿ ನೀಡಬೇಕೆಂದು ಸೂಚಿಸಿದೆ.

ಆದ್ದರಿಂದ ಈ ಆದೇಶ.

ಮೇಲೆ (5)ರಲ್ಲಿ ಓದಲಾದ ಹಿಂಬರಹದಲ್ಲಿ ಶಿಕ್ಷಣ ಇಲಾಖೆಯ ಅಡಿಯಲ್ಲಿ ಬರುವ ರಾಜ್ಯ ಶಿಕ್ಷಣ ಸಂಶೋದನೆ ಮತ್ತು ತರಬೇತಿ ನಿರ್ದೇಶನಾಲಯ (DSERT) ಲೆಕ್ಕ ಶಿರ್ಷಿಕೆ 2202-02-001-0-04-051 (ಯೋಜನೆರತ) ಅಡಿಯಲ್ಲಿ 2014-15ನೇ ಸಾಲಿಗೆ ಒದಗಿಸಿರುವ ರೂ.14.23 ಲಕ್ಷಗಳಿಂದ 2014-15ನೇ ಸಾಲಿನ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಜಿಲ್ಲಾ ಮತ್ತು ರಾಜ್ಯ ಮಟ್ಟಡ ಯುವ ಸಂಸತ್ ನಡೆಸಲು ಬೇಕಾಗುವ ರೂ.5.00 ಲಕ್ಷಗಳನ್ನು ಭರಿಸಿಕೊಳ್ಳಲು ಆರ್ಥಿಕ ಇಲಾಖೆ ಸಹಮತಿಸಿದೆ.

ಆದ್ದರಿಂದ ಈ ಆದೇಶ

**ಸರ್ಕಾರದ ಆದೇಶ ಸಂಖ್ಯೆ: ಸಂವ್ಯಶಾಇ 14 ಯುಸಂಸ್ಪ 2014,**
**ಬೆಂಗಳೂರು, ದಿನಾಂಕ: 03.12.2014** **(Unique Serial No. DPAL of 2014)**

ಕರ್ನಾಟಕ ರಾಜ್ಯದಲ್ಲಿ ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ 2014-15ನೇ ಸಾಲಿನ ಯುವ ಸಂಸತ್ ಸ್ಪರ್ಧೆಗಳನ್ನು ನಡೆಸಲು ರೂ. 5,00,000/- (ರೂಪಾಯಿ ಐದು ಲಕ್ಷಗಳು ಮಾತ್ರ) ಈ ಮೂಲಕ ಮಂಜೂರು ಮಾಡಿ, ಪ್ರಸ್ತಾವಿತ ವೆಚ್ಚವನ್ನು ಲೆಕ್ಕ ಶೀರ್ಷಿಕೆ "2202-02-001-0-04-051 ಸಾಮಾನ್ಯ ವೆಚ್ಚಗಳು (ಯೋಜನೇತರ)" ಅಡಿಯಿಂದ ಪ್ರಸಕ್ತ ಸಾಲಿಗೆ ಒದಗಿಸಿರುವ ಅನುದಾನದಲ್ಲಿ ಭರಿಸುವಂತೆ ಮತ್ತು ಮೊಬಲಗನ್ನು ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ನಂ. 4, 100 ಫೀಟ್ ರಿಂಗ್ ರೋಡ್, (ಕೆ.ಎಸ್. ಹಾಸ್ಪಿಟಲ್ ಪಕ್ಕದಲ್ಲಿ) ಹೊಸಕೆರೆಹಳ್ಳಿ, ಬೆಂಗಳೂರು - 560 085 ಇವರು ಎ.ಸಿ. ಬಿಲ್ ಮೂಲಕ ರೂ. 5,00,000/-

(ರೂಪಾಯಿ ಐದು ಲಕ್ಷ) ಹಣವನ್ನು ಡ್ರಾ ಮಾಡಿ ಎನ್.ಡಿ.ಸಿ. ಬಿಲ್ ಮೂಲಕ ಸರಿದೂಗಿಸಲು, ಇವರ ಡ್ರಾಯಿಂಗ್ ಆಫೀಸರ್ ಕೋಡ್ ಆಖ 0001 ಇವರಿಗೆ ವರ್ಗಾಯಿಸಲು ಮುಂದಿನ ಸೂಕ್ತ ಕ್ರಮ ಕೈಗೊಳ್ಳಲು ಆದೇಶಿಸಲಾಗಿದೆ.

(2) ಈ ಆದೇಶವನ್ನು ಸಿಬ್ಬಂದಿ ಮತ್ತು ಆಡಳಿತ ಸುಧಾರಣೆ ಇಲಾಖೆಯ ಟಿಪ್ಪಣಿ ಸಂಖ್ಯೆ:ಸಿಆಸುಇ/21/ಹೆಸಅ/2011 ದಿನಾಂಕ 27.05.2010ರಲ್ಲಿ ನೀಡಿರುವ ಸೂಚನೆ ಹಾಗೂ ಆರ್ಥಿಕ ಇಲಾಖೆಯ ಸರ್ಕಾರದ ಆದೇಶ ಸಂಖ್ಯೆ: ಎಫ್‌ಡಿ 1 ಟಿಎಫ್‌ಪಿ 96, ದಿನಾಂಕ: 10.07.96ರಲ್ಲಿ ನೀಡಿರುವ ಅಧಿಕಾರದನ್ವಯ ಹೊರಡಿಸಲಾಗಿದೆ.

ಕರ್ನಾಟಕ ರಾಜ್ಯಪಾಲರ ಆಜ್ಞಾನುಸಾರ
ಮತ್ತು ಅವರ ಹೆಸರಿನಲ್ಲಿ,

**(ಬಿ.ಜಿ. ಶ್ಯಾಮಲ)**
ಸಹಾಯಕ ಪ್ರಾರೂಪಕಾರ ಮತ್ತು ಪದನಿಮಿತ್ತ
ಸರ್ಕಾರದ ಉಪ ಕಾರ್ಯದರ್ಶಿ
ಸಂಸದೀಯ ವ್ಯವಹಾರಗಳ ಇಲಾಖೆ.
ಫೋನ್ ನಂ. 22033665

**ಗೆ,**

1) ಮಹಾಲೇಖಪಾಲರು, ಎ ಅಂಡ್ ಇ, ಕರ್ನಾಟಕ, ಬೆಂಗಳೂರು.
2) ಸರ್ಕಾರದ ಪ್ರಧಾನ ಕಾರ್ಯದರ್ಶಿ, ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆ, ಬಹುಮಹಡಿಗಳ ಕಟ್ಟಡ, ಬೆಂಗಳೂರು.
3) ಆಯುಕ್ತರು, ಸಾರ್ವಜನಿಕ ಶಿಕ್ಷಣ ಇಲಾಖೆ, ನೃಪತುಂಗ ರಸ್ತೆ, ಬೆಂಗಳೂರು – 1.
4) ನಿರ್ದೇಶಕರು, ರಾಜ್ಯ ಹುಜೂರು ಖಜಾನೆ, ಬೆಂಗಳೂರು.
5) ನಿರ್ದೇಶಕರು, ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆ, ನಂ. 4, 100 ಫೀಟ್ ರಿಂಗ್ ರೋಡ್, (ಕೆ.ಎಸ್. ಹಾಸ್ಪಿಟಲ್ ಪಕ್ಕದಲ್ಲಿ), ಹೊಸಕೆರೆಹಳ್ಳಿ, ಬೆಂಗಳೂರು – 560085.
6) ನಗರಾಭಿವೃದ್ಧಿ, ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರ ಆಪ್ತ ಕಾರ್ಯದರ್ಶಿ, ವಿಧಾನಸೌಧ, ಬೆಂಗಳೂರು.
7) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯ ಎಲ್ಲಾ ಅಧಿಕಾರಿಗಳಿಗೆ.
8) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ, (ಲೆಕ್ಕಪತ್ರ–1) ವಿಧಾನಸೌಧ, ಬೆಂಗಳೂರು.
9) ಸರ್ಕಾರದ ಅಧೀನ ಕಾರ್ಯದರ್ಶಿ, ಸಿಆಸು ಇಲಾಖೆ (ಲೆಕ್ಕಪತ್ರ 2), ಬಹುಮಹಡಿಗಳ ಕಟ್ಟಡ, ಬೆಂಗಳೂರು.
10) ಸರ್ಕಾರದ ಅಧೀನ ಕಾರ್ಯದರ್ಶಿ, ಆರ್ಥಿಕ ಇಲಾಖೆ (ವೆಚ್ಚ 10), ವಿಧಾನಸೌಧ, ಬೆಂಗಳೂರು
11) ರಾಜ್ಯದ ಎಲ್ಲಾ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರಿಗೆ.
12) ಶಾಖಾ ರಕ್ಷಕ ಕಡತ
13) ವಾರ್ಷಿಕ ಸಂಕಲನ
14) ಹೆಚ್ಚುವರಿ ಪ್ರತಿ

**ಸಂಖ್ಯೆ: ಎಫ್ 3(3) 2008–ವೈಪಿ**

**ಭಾರತ ಸರ್ಕಾರ**

**ಸಂಸದೀಯ ವ್ಯವಹಾರಗಳ ಮಂತ್ರಾಲಯ**

92, ಸಂಸತ್ ಭವನ,
ನವದೆಹಲಿ – 110001
ದಿನಾಂಕ 12.05.2009

**ಇವರಿಗೆ,**

ಮಾನ್ಯ ಮುಖ್ಯ ಕಾರ್ಯದರ್ಶಿಗಳು,

ಕರ್ನಾಟಕ ಸರ್ಕಾರ,

ಬೆಂಗಳೂರು.

**ಮಾನ್ಯರೆ,**

ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ 'ಯುವ ಸಂಸತ್ ಸ್ಪರ್ಧೆಗಳನ್ನು' ನಡೆಸುವುದಕ್ಕಾಗಿ ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಹಣಕಾಸು ನೆರವನ್ನು ಒದಗಿಸುತ್ತಾ ಇದೆ ಎಂಬ ಅಂಶವನ್ನು ತಮಗೆ ತಿಳಿಸಲು ನಾನು ನಿರ್ದೇಶಿತನಾಗಿದ್ದೇನೆ. 2008ರ ಫೆಬ್ರವರಿ 4–5ನೇ ದಿನಾಂಕಗಳಂದು ಮುಂಬೈನಲ್ಲಿ ನಡೆದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಇತರೆ ವಿಷಯಗಳ ಜೊತೆಯಲ್ಲಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಒದಗಿಸುತ್ತಿರುವ ಹಣಕಾಸು ನೆರವಿನ ಪ್ರಮಾಣವನ್ನು ಈ ಮುಂದಿನಂತೆ ಹೆಚ್ಚಿಸತಕ್ಕದ್ದೆಂದು ಶಿಫಾರಸ್ಸು ಮಾಡಿದೆ.

| | | |
|---|---|---|
| (ಎ) | 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳಿಗೆ | ವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) | 100ರಿಂದ 200ರ ನಡುವೆ ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) | 200ಕ್ಕೂ ಹೆಚ್ಚು ಸದಸ್ಯರುಗಳನ್ನು ಹೊಂದಿರುವ ವಿಧಾನಮಂಡಲಗಳು | ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಈ ಹಿಂದೆ ಇದ್ದಂತೆಯೇ ಇರತಕ್ಕದ್ದು ಎಂದರೆ, ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 5,00,000/– ರೂಪಾಯಿಗಳು)

ಈ ವಿಷಯವನ್ನು ಭಾರತ ಸರ್ಕಾರವು ಹಣಕಾಸು ಮಂತ್ರಾಲಯದೊಡನೆ ಸಮಾಲೋಚಿಸಿದೆ ಮತ್ತು ಪ್ರಸಕ್ತ ವರ್ಷದಿಂದ ಎಂದರೆ, 2009–2010ರಿಂದ 14ನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ಶಿಫಾರಸ್ಸು ಮಾಡಿರುವಂತೆ ಹಣಕಾಸು ನೆರವನ್ನು ಹೆಚ್ಚಿಸಲು ತೀರ್ಮಾನಿಸಿದೆ.

2. ಹಣಕಾಸು ನೆರವಿನ ಯೋಜನೆಯ ಒಂದು ಪ್ರತಿಯನ್ನು ಇದರೊಂದಿಗೆ ಲಗತ್ತಿಸಲಾಗಿದೆ. ಸ್ಪರ್ಧೆಗಳನ್ನು ನಡೆಸುವಲ್ಲಿ ವಹಿಸಲಾದ ವೆಚ್ಚಗಳನ್ನು ಮರುಸಂದಾಯಕ್ಕಾಗಿ ಪ್ರಸ್ತಾವಗಳನ್ನು ಈ ಮಂತ್ರಾಲಯವು ಕ್ಲೇಮುಗಳ ಬಗ್ಗೆ ಶೀಘ್ರವಾಗಿ ಕ್ರಮ ಕೈಗೊಳ್ಳುವುದು ಸಾಧ್ಯವಾಗುವಂತೆ ಯೋಜನೆಯ ಅನುಬಂಧ–III ರಲ್ಲಿ ನಿರ್ದಿಷ್ಟಪಡಿಸಲಾದ ನಮೂನೆಯಲ್ಲಿ ಮಾತ್ರವೇ ಈ ಮಂತ್ರಾಲಯಕ್ಕೆ ಕಳುಹಿಸಬೇಕೆಂದು ಕೋರಲಾಗಿದೆ. ಮರುಸಂದಾಯದ ಕ್ಲೇಮನ್ನು ಮಾಡುವಾಗ ಮೂಲ ಓಚರುಗಳು/ಬಿಲ್ಲುಗಳನ್ನು ಈ ಮಂತ್ರಾಲಯಕ್ಕೆ ಒದಗಿಸುವ ಅವಶ್ಯಕತೆ ಇರುವುದಿಲ್ಲ.

3. ಪರಿಷ್ಕೃತ ಹಣಕಾಸು ನೆರವು ಯೋಜನೆಯ ವಿವರಗಳು ಅಧಿಕೃತ ವೆಬ್‌ಸೈಟ್ ಎಂದರೆ, www.mpa.nic.in ನಲ್ಲಿಯೂ ಲಭ್ಯವಿದೆ.

4. ಇದನ್ನು ಸಂಸದೀಯ ವ್ಯವಹಾರಗಳ ಮಂತ್ರಾಲಯದ ಕಾರ್ಯದರ್ಶಿಗಳ ಅನುಮೋದನೆಯೊಡನೆ ಹೊರಡಿಸಲಾಗಿದೆ.

ತಮ್ಮ ವಿಶ್ವಾಸಿ,

ಸಹಿ/–

(ಆರ್.ಸಿ. ಮೊಹಂತಿ)
ಭಾರತಸರ್ಕಾರದಅಧೀನಕಾರ್ಯದರ್ಶಿ,
ದೂರವಾಣಿ: 011–23034761
ಫ್ಯಾಕ್ಸ್: 23018220

**ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ಏರ್ಪಡಿಸುವುದಕ್ಕಾಗಿ ರಾಜ್ಯ ಸರ್ಕಾರಗಳು /ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ.**

**ಪೀಠಿಕೆ**

ಶೈಕ್ಷಣಿಕ ಸಂಸ್ಥೆಗಳಲ್ಲಿ ಯುವ ಸಂಸತ್ ಸ್ಪರ್ಧೆಗಳನ್ನು ಏರ್ಪಡಿಸಿ ನಡೆಸುವ ಪರಿಕಲ್ಪನೆ 1962 ರಲ್ಲಿ ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನದಲ್ಲಿ ರೂಪ ತಳೆಯಿತು. ಸದರಿ ಸಮ್ಮೇಳನದಲ್ಲಿ ಇತರೆ ವಿಷಯಗಳ ಜೊತೆಗೆ ಈ ಮುಂದಿನ ಶಿಫಾರಸುಗಳನ್ನು ಮಾಡಲಾಯಿತು:–

"ಈ ಸಮಿತಿಯು, ಅಣಕು ಸಂಸತ್ ಕಾರ್ಯಕ್ರಮಗಳನ್ನು ಶೈಕ್ಷಣಿಕ ಸಂಸ್ಥೆಗಳಲ್ಲಿ ಮತ್ತು ಪಂಚಾಯತಿಗಳ ಮೂಲಕ ಗ್ರಾಮೀಣ ಪ್ರದೇಶಗಳಲ್ಲಿ ನಡೆಸಲು ಸರ್ಕಾರವು ಪ್ರೋತ್ಸಾಹಿಸತಕ್ಕದ್ದೆಂದು ಶಿಫಾರಸು ಮಾಡುತ್ತದೆ".

ಮೇಲ್ಕಂಡ ಶಿಫಾರಸುಗಳನ್ನು 1966 ರಲ್ಲಿ ಬೆಂಗಳೂರಿನಲ್ಲಿ ನಡೆದ ಐದನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಈ ಮುಂದೆ ಹೇಳಿರುವಂತೆ ಪುನರುಚ್ಚರಿಸಿತು:–

"ಮುಂಬಯಿಯಲ್ಲಿ ನಡೆದ ನಾಲ್ಕನೇ ಅಖಿಲ ಭಾರತ ಸಚೇತಕರ ಸಮ್ಮೇಳನವು, ಜನಪ್ರತಿನಿಧಿ ಸಂಸ್ಥೆಗಳ ಪಾತ್ರದ ಬಗ್ಗೆ ಅರಿವು ಮೂಡಿಸಲು ಗ್ರಾಮ ಪಂಚಾಯತಿಗಳಲ್ಲಿ ಅಣಕು ಸಂಸತ್ ಕಾರ್ಯಕ್ರಮಗಳನ್ನು ನಡೆಸಬೇಕೆಂದು ಶಿಫಾರಸು ಮಾಡಿತ್ತು. ಈ ಶಿಫಾರಸುಗಳನ್ನು ಕೆಲವು ರಾಜ್ಯಗಳಲ್ಲಿ ಜಾರಿಗೆ ತಂದಿರುವುದಿಲ್ಲ ಎಂಬುದನ್ನು ಈ ಸಮ್ಮೇಳನವು ಗಮನಿಸಿದೆ. ಸಮ್ಮೇಳನವು, ಸಂಬಂಧಪಟ್ಟ ರಾಜ್ಯ ಸರ್ಕಾರಗಳು ತಮ್ಮ ತೀರ್ಮಾನಗಳನ್ನು ಮರುಪರಿಶೀಲಿಸುವಂತೆ ಅವುಗಳ ಮನವೊಲಿಸಬೇಕೆಂದು ಪುನರುಚ್ಚರಿಸುತ್ತದೆ."

ಮೇಲ್ಕಂಡ ಶಿಫಾರಸುಗಳಿಗನುಸಾರ, ಸಂಸದೀಯ ವ್ಯವಹಾರಗಳ ಮಂತ್ರಾಲಯವು ಅಣಕು ಸಂಸತ್ (ಈಗ "ಯುವ ಸಂಸತ್") ಸ್ಪರ್ಧೆಯ ಯೋಜನೆಯ ವಿವರಗಳನ್ನು ತಯಾರಿಸಿತು ಮತ್ತು ಅದನ್ನು ಪ್ರಾಯೋಗಿಕ ರೂಪದಲ್ಲಿ ನಡೆಸುವ ಉದ್ದೇಶದಿಂದ ದೆಹಲಿಯ ಪ್ರೌಢ ಶಾಲೆಗಳಲ್ಲಿ ಸ್ಪರ್ಧೆಗಳನ್ನು ಪ್ರಾರಂಭಿಸಲು ತೀರ್ಮಾನಿಸಿತು.

1967 ರಲ್ಲಿ ಸಿಮ್ಲಾದಲ್ಲಿ ಮತ್ತು 1969 ರಲ್ಲಿ ಮದ್ರಾಸಿನಲ್ಲಿ ಅನುಕ್ರಮವಾಗಿ ನಡೆದ ಆರು ಮತ್ತು ಏಳನೇ ಅಖಿಲಭಾರತ ಸಚೇತಕರ ಸಮ್ಮೇಳನದಲ್ಲಿ ಈ ಮುಂದಿನ ಶಿಫಾರಸುಗಳನ್ನು ಮಾಡಲಾಯಿತು:-

"ದೆಹಲಿಯ ಶಾಲೆಗಳಲ್ಲಿ "ಯುವ ಸಂಸತ್" ಕಾರ್ಯಕ್ರಮವನ್ನು ಉತ್ತೇಜಿಸುವುದಕ್ಕಾಗಿ ಸಂಸದೀಯ ವ್ಯವಹಾರಗಳ ಮಂತ್ರಾಲಯವು ಮಾಡಿರುವ ಉತ್ತಮ ಕಾರ್ಯವನ್ನು ಪ್ರಶಂಸಿಸುತ್ತಾ, ಉಳಿದ ರಾಜ್ಯಗಳು ಸಹ ತಮ್ಮ ತಮ್ಮ ರಾಜ್ಯಗಳಲ್ಲಿ ಈ ಯೋಜನೆಯನ್ನು ಅಳವಡಿಸಲು ವ್ಯವಸ್ಥೆಯನ್ನು ಮಾಡತಕ್ಕದ್ದೆಂದು ಸಮ್ಮೇಳನವು ಆಗ್ರಹಪೂರ್ವಕವಾಗಿ ಶಿಫಾರಸು ಮಾಡುತ್ತದೆ. [6ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

"ದೆಹಲಿಯ ಶಾಲೆಗಳಲ್ಲಿ 'ಅಣಕು ಸಂಸತ್' ಯೋಜನೆಯ ಯಶಸ್ವಿ ಅನುಷ್ಠಾನವನ್ನು ಹಾಗೂ ಪ್ರಮುಖ ಸಂಸದರು, ಪತ್ರಿಕಾ ಮಾಧ್ಯಮಗಳು ಮತ್ತು ಶಿಕ್ಷಣ ತಜ್ಞರಿಂದ ಆ ಬಗ್ಗೆ ಬಂದ ವ್ಯಾಪಕ ಮೆಚ್ಚುಗೆಯನ್ನು ಗಮನದಲ್ಲಿಟ್ಟುಕೊಂಡು ಮತ್ತು ರಾಷ್ಟ್ರದಲ್ಲಿ ಸುಭದ್ರ ಸಂಸದೀಯ ಪದ್ಧತಿಯನ್ನು ಅನುಷ್ಠಾನಗೊಳಿಸುವ ದೃಷ್ಟಿಯಿಂದ ಸಮ್ಮೇಳನವು ಈ ಮುಂದಿನ ಶಿಫಾರಸ್ಸುಗಳನ್ನು ಮಾಡುತ್ತದೆ.-

(ಎ)ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು ಅನುಸರಿಸಿದ ಮಾದರಿಯನ್ನೇ ಅನುಸರಿಸಿ ಎಲ್ಲಾ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಮ್ಮ ತಮ್ಮ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿ ಈ ಯೋಜನೆಯನ್ನು ಜಾರಿಗೊಳಿಸಲು ಕ್ರಮಕೈಗೊಳ್ಳತಕ್ಕದ್ದು;

(ಬಿ)ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಅಗತ್ಯವಿದ್ದಲ್ಲಿ ಹಣಕಾಸು ನೆರವನ್ನು ನೀಡುವ ಮೂಲಕ ಯೋಜನೆಯನ್ನು ಜಾರಿಗೆ ತರಲು ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಎಲ್ಲಾ ಬಗೆಯ ಪ್ರೋತ್ಸಾಹಗಳನ್ನು ನೀಡತಕ್ಕದ್ದು; ಮತ್ತು

(ಸಿ) ಸಂಸದೀಯ ವ್ಯವಹಾರಗಳ ಕೇಂದ್ರ ಮಂತ್ರಾಲಯವು, ಯೋಜನೆಯನ್ನು ಈಗಾಗಲೇ ಜಾರಿಗೊಳಿಸಿರುವ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳ ನಡುವೆ ಅಂತರ್ ರಾಜ್ಯ ಸ್ಪರ್ಧೆಗಳನ್ನು ಸಹ ವ್ಯವಸ್ಥೆಗೊಳಿಸತಕ್ಕದ್ದು. [7ನೇ ಅಖಿಲ ಭಾರತ ಸಚೇತಕರ ಸಮ್ಮೇಳನ]"

7ನೇ ಅಖಿಲ ಭಾರತ ಸಚೇತಕರ ಸಮ್ಮೇಳನವು ಮಾಡಿದ ಮೇಲ್ಕಂಡ ಶಿಫಾರಸುಗಳ (ಬಿ) ಭಾಗದ ಪಾಲನೆಯಲ್ಲಿ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಮಾನ್ಯತೆ ಪಡೆದ ಪ್ರೌಢ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ವ್ಯವಸ್ಥೆಗೊಳಿಸುವುದಕ್ಕಾಗಿ – ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ನೀಡುವುದಕ್ಕಾಗಿ ಈ ಯೋಜನೆಯನ್ನು ರೂಪಿಸಿದೆ.

1. **ಯೋಜನೆಯ ಉದ್ದೇಶ:–** ಪ್ರಜಾಪ್ರಭುತ್ವದ ಬುನಾದಿಯನ್ನು ಭದ್ರಪಡಿಸುವ, ಶಿಸ್ತು, ಇತರರ ಅಭಿಪ್ರಾಯಗಳ ಬಗ್ಗೆ ತಾಳ್ಮೆ ಮುಂತಾದ ಆರೋಗ್ಯಕರ ಗುಣ ವಿಶೇಷಗಳನ್ನು ಮೈಗೂಡಿಸುವ ಮತ್ತು ವಿದ್ಯಾರ್ಥಿ ಸಮುದಾಯದಲ್ಲಿ ಸಂಸತ್ ಕಾರ್ಯ ಕಲಾಪದ ಬಗ್ಗೆ ಅರಿವು ಮೂಡಿಸುವ ಉದ್ದೇಶದಿಂದ, ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು, ದೆಹಲಿಯಲ್ಲಿರುವ ಮಾನ್ಯತೆ ಪಡೆದ ಶಿಕ್ಷಣ ಸಂಸ್ಥೆಗಳಲ್ಲಿ – "ಯುವ ಸಂಸತ್" ನ ಸ್ಪರ್ಧೆಯಲ್ಲಿ ಭಾಗವಹಿಸಲಿಚ್ಛಿಸುವಂಥ ಮತ್ತು ದೆಹಲಿಯ ಎನ್‌ಸಿಟಿ ಸರ್ಕಾರದ ಶಿಕ್ಷಣ ನಿರ್ದೇಶನಾಲಯವು ಪ್ರಾಯೋಜಿಸಿದಂಥ ಶಾಲೆಗಳ ನಡುವೆ ಪ್ರತಿವರ್ಷ "ಯುವ ಸಂಸತ್ ಸ್ಪರ್ಧೆ" ನಡೆಸುತ್ತಾ ಬಂದಿದೆ. ರಾಜ್ಯ ಸರ್ಕಾರಗಳು/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಗಳು, ಇಂಥವೇ ಸ್ಪರ್ಧೆಗಳನ್ನು ತಮ್ಮ ಮಾನ್ಯತೆ ಪಡೆದ ಶಾಲೆಗಳಲ್ಲಿ ನಡೆಸಲು ಹಣಕಾಸು ನೆರವನ್ನು ನೀಡುವುದೇ ಈ ಯೋಜನೆಯ ಉದ್ದೇಶ.

2. **ಯೋಜನೆಯ ಕಾರ್ಯಾಚರಣೆ:–** ಈ ಯೋಜನೆಯನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳಲ್ಲಿನ ಸಾರ್ವಜನಿಕ ಶಿಕ್ಷಣ ನಿರ್ದೇಶಕರ ಸಹಯೋಗದೊಂದಿಗೆ ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸರ್ಕಾರದ ಸಂಸದೀಯ ವ್ಯವಹಾರಗಳ ಇಲಾಖೆಯ ಮೂಲಕ ನಿರ್ವಹಿಸಲಾಗುವುದು. ಸಂಸದೀಯ ವ್ಯವಹಾರಗಳ ಇಲಾಖೆಯು ಇಲ್ಲದಿರುವ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ, ಯೋಜನೆಯನ್ನು ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನೇರವಾಗಿ ಕಾರ್ಯಗತಗೊಳಿಸುತ್ತದೆ.

3. **ಸ್ಪರ್ಧೆಯಲ್ಲಿ ಭಾಗವಹಿಸುವುದಕ್ಕೆ ಅರ್ಹತೆ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಮಾನ್ಯತೆ ಪಡೆದ ಎಲ್ಲಾ ಹೈಯರ್ ಸೆಕೆಂಡರಿ ಸಂಸ್ಥೆಗಳು/ಪ್ರೌಢ ಶಾಲೆಗಳು ಸ್ಪರ್ಧೆಯಲ್ಲಿ ಭಾಗವಹಿಸಲು ಅರ್ಹತೆ ಹೊಂದಿವೆಯೆಂದು ಪರಿಗಣಿಸಬಹುದು. ಭಾಗವಹಿಸುವ ಶಾಲೆಗಳ ಪಟ್ಟಿಯನ್ನು, ಪ್ರತಿವರ್ಷದ ಮಾರ್ಚ್ 31ರೊಳಗೆ ಸಂದರ್ಭಾನುಸಾರ, ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ

ಸಂಸದೀಯ ವ್ಯವಹಾರಗಳ ಇಲಾಖೆ ಅಥವಾ ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಅಂತಿಮಗೊಳಿಸುತ್ತವೆ.

4. **ಯುವ ಸಂಸತ್ ಸ್ಪರ್ಧೆಯನ್ನು ನಡೆಸುವ ಅವಧಿ:–** "ಯುವ ಸಂಸತ್ ಸ್ಪರ್ಧೆ" ಯನ್ನು, ಪ್ರತಿವರ್ಷವು ನಡೆಸಲಾಗುವುದು. ಈ ಬಗ್ಗೆ ಸವಿವರ ಕಾರ್ಯಕ್ರಮವನ್ನು ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರೂಪಿಸತಕ್ಕದ್ದು ಮತ್ತು ವಾರ್ಷಿಕ ಸ್ಪರ್ಧೆಯಲ್ಲಿ ಭಾಗವಹಿಸಲಿರುವ ಸಂಸ್ಥೆಗಳಿಗೆ ಸುತ್ತೋಲೆ ಮೂಲಕ ತಿಳಿಸತಕ್ಕದ್ದು. ಸದರಿ ವಿಷಯವನ್ನು ನವದೆಹಲಿಯ ಭಾರತ ಸರ್ಕಾರದ ಸಂಸದೀಯ ವ್ಯವಹಾರ ಮಂತ್ರಾಲಯಕ್ಕೂ ತಿಳಿಸತಕ್ಕದ್ದು.

5. **ಯುವ ಸಂಸತ್ತಿನಲ್ಲಿ ಭಾಗವಹಿಸುವವರ ಸಂಖ್ಯೆ:–** ಪ್ರತಿಯೊಂದು ಶಾಲೆಯಲ್ಲಿ "ಯುವ ಸಂಸತ್ ಸ್ಪರ್ಧೆಯನ್ನು" ನಡೆಸುವುದಕ್ಕಾಗಿ ಬೇಕಾಗುವ ವಿದ್ಯಾರ್ಥಿಗಳ ಸಂಖ್ಯೆಗೆ ಯಾವುದೇ ಮಿತಿ ಇಲ್ಲ. ಆದಾಗ್ಯೂ, ಅಧಿವೇಶನದ ಅವಧಿಯನ್ನು ಸೀಮಿತಗೊಳಿಸುವುದು ಅಪೇಕ್ಷಣೀಯವಾಗಿರುವ ಕಾರಣ, ಭಾಗವಹಿಸಿರುವ ವಿದ್ಯಾರ್ಥಿಗಳಲ್ಲಿ ಹಲವರು ಸಂಸತ್ತಿನ ಅಧಿವೇಶನದ ಒಂದು ಚಿತ್ರಣವನ್ನು ಮೂಡಿಸುವುದಕ್ಕೆ ಮಾತ್ರವೇ ಸುಮ್ಮನೆ ಕುಳಿತುಕೊಂಡಿರಬೇಕಾಗುತ್ತದೆ ಮಾತ್ರವಲ್ಲದೆ ಅವರಿಗೆ ಮಾತನಾಡುವ ಅಗತ್ಯವಿರುವುದಿಲ್ಲ.

6. **ಯುವ ಸಂಸತ್ತಿನ ಅಧಿವೇಶನದ ಅವಧಿ:–** ಯುವ ಸಂಸತ್ತಿನ ಅಧಿವೇಶನದ ಅವಧಿಯು ಒಂದು ಗಂಟೆ ಅವಧಿಯನ್ನು ಮೀರತಕ್ಕದಲ್ಲ ಮತ್ತು ಇದರಲ್ಲಿ ಸುಮಾರು 20 ನಿಮಿಷಗಳ ಅವಧಿಯನ್ನು ಪ್ರಶ್ನೆಗಳಿಗೆ ಕಾಯ್ದಿರಿಸತಕ್ಕದ್ದು.

7. **ಯುವ ಸಂಸತ್ತಿನ ಅಧಿವೇಶನದಲ್ಲಿಯ ಚರ್ಚೆಯ ವಿಷಯ:–** ಪ್ರಶ್ನೋತ್ತರಗಳಿಗೆ ಅಥವಾ ಇತರ ಚರ್ಚೆಗೆ ಯಾವುದೇ ನಿರ್ದಿಷ್ಟ ವಿಷಯಗಳನ್ನು ಗೊತ್ತುಪಡಿಸಿರುವುದಿಲ್ಲ. ಆದಾಗ್ಯೂ, ಯುವ ಸಂಸತ್ತಿನಲ್ಲಿ ಕೇಳಲಾಗುವ ಪ್ರಶ್ನೆಗಳು, ಕ್ಷೇಮಾಭ್ಯುದಯ ಕಾರ್ಯ ಚಟುವಟಿಕೆಗಳು, ರಾಷ್ಟ್ರದ ರಕ್ಷಣೆ, ಸಾಮಾಜಿಕ ನ್ಯಾಯ, ಸಮಾಜ ಸುಧಾರಣೆಗಳು, ಆರ್ಥಿಕ ಅಭಿವೃದ್ಧಿ, ಮತೀಯ ಸಾಮರಸ್ಯ, ಆರೋಗ್ಯ, ವಿದ್ಯಾರ್ಥಿಗಳಲ್ಲಿ ಶಿಸ್ತು ಮುಂತಾದವುಗಳಿಗೆ ಸಂಬಂಧಿಸಿದ ವಿಷಯಗಳಾಗಿರುವುದು ಅಪೇಕ್ಷಣೀಯ.

8. **ಭಾಷೆ:–** ಭಾಗವಹಿಸುವವರು, ಕನ್ನಡ, ಹಿಂದಿ ಅಥವಾ ಇಂಗ್ಲಿಷ್ ಅಥವಾ ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ದಿಷ್ಟಪಡಿಸಬಹುದಾದಂಥ ಪ್ರಾದೇಶಿಕ ಭಾಷೆಯಲ್ಲಿ ಮಾತನಾಡಬಹುದು.

9. **ಯುವ ಸಂಸತ್ ನಡೆಯುವ ಸ್ಥಳ:–** ಪ್ರತಿಯೊಂದು ಸಂಸ್ಥೆಯು, ಯುವ ಸಂಸತ್ ಸ್ಪರ್ಧೆಯನ್ನು ಸಾಧ್ಯವಾದಷ್ಟು ಮಟ್ಟಿಗೆ ತನ್ನದೇ ಆದ ಕಟ್ಟಡದಲ್ಲಿ ಅಥವಾ ತಾನು ಇಚ್ಛಿಸುವಂಥ ಯಾವುದೇ ಇತರ ಸ್ಥಳದಲ್ಲಿ ನಡೆಸತಕ್ಕದ್ದು. ಸ್ಪರ್ಧೆಯಲ್ಲಿ ಭಾಗವಹಿಸುವ ಸಂಸ್ಥೆಗಳು, ಸಂಬಂಧಪಟ್ಟ ರಾಜ್ಯದ ಸಂಸದೀಯ ವ್ಯವಹಾರಗಳ ಇಲಾಖೆಗೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯಕ್ಕೆ ಚರ್ಚೆಯ ವಿಷಯಗಳ ಮಾಹಿತಿಯೊಂದಿಗೆ ಸ್ಪರ್ಧೆ ನಡಸುವ ಸ್ಥಳದ ವಿವರಗಳನ್ನು ಸ್ಪರ್ಧೆಯ ದಿನಾಂಕಕ್ಕಿಂತ ಹತ್ತು ದಿನಗಳ ಮೊದಲೇ ತಿಳಿಸತಕ್ಕದ್ದು.

10. **ಬಹುಮಾನಗಳು:–** ಈ ಮುಂದಿನ ಬಹುಮಾನಗಳನ್ನು ಇರಿಸಲಾಗಿದೆ:–

(i) ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಗೆ ಪಾರಿತೋಷಕ (ಸಂಸದೀಯ ಪಾರಿತೋಷಕ).

(ii) ಅರ್ಹತೆಯ ಆಧಾರದ ಮೇಲೆ ಸ್ಪರ್ಧೆಯಲ್ಲಿನ ಉತ್ತಮ ಗುಣಮಟ್ಟದ ಪ್ರದರ್ಶನಕ್ಕಾಗಿ ಮೊದಲ ಐದು ಸ್ಥಾನ ಪಡೆದ ಸಂಸ್ಥೆಗಳಿಗೆ ಟ್ರೋಫಿಗಳು.

(iii) ಪ್ರತಿಯೊಂದು ಸಂಸ್ಥೆಯಿಂದ ಭಾಗವಹಿಸಿರುವ ವಿದ್ಯಾರ್ಥಿಗಳಿಂದ ಆಯ್ಕೆ ಮಾಡಲಾದವರಿಗೆ ಪದಕಗಳು / ಕಪ್ಪುಗಳು/ಪುಸ್ತಕಗಳ ರೂಪದಲ್ಲಿ ವೈಯಕ್ತಿಕ ಬಹುಮಾನಗಳು. ಬಹುಮಾನಗಳ ಒಟ್ಟು ಸಂಖ್ಯೆಯು 80ನ್ನು ಮೀರತಕ್ಕದ್ದಲ್ಲ.

(iv) ಇತರೆ ವೆಚ್ಚಗಳು.

**ಸೂಚನೆ:–** ಸಂಬಂಧಪಟ್ಟ ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಥಳೀಯ ಪರಿಸ್ಥಿತಿಗಳಿಗೆ ಅನುಸಾರವಾಗಿ ಮೇಲಿನ ನಾಲ್ಕು ಬಾಬುಗಳಿಗೆ ಸಂಬಂಧಿಸಿದ ವೆಚ್ಚವನ್ನು ವ್ಯತ್ಯಾಸಗೊಳಿಸಬಹುದು. ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯದಿಂದ ಮರುಸಂದಾಯವಾಗುವ ಗರಿಷ್ಠ ಮೊಬಲಗು ವಾರ್ಷಿಕವಾಗಿ, ಯೋಜನೆಯ 15ನೇ ಕಂಡಿಕೆಯಲ್ಲಿ ಹೇಳಿರುವುದನ್ನು ಮೀರತಕ್ಕದ್ದಲ್ಲ.

ಪಾರಿತೋಷಕವು ಪರ್ಯಾಯ ಪಾರಿತೋಷಕವಾಗಿದ್ದು ಅದನ್ನು ಸ್ಪರ್ಧೆಯಲ್ಲಿ ಪ್ರಥಮ ಸ್ಥಾನವನ್ನು ಹೊಂದಿದ ಸಂಸ್ಥೆಯು ಒಂದು ವರ್ಷದವರೆಗೆ ಉಳಿಸಿಕೊಳ್ಳಬಹುದಾಗಿದೆ. ಆದಾಗ್ಯೂ, ಒಂದೇ ಸಂಸ್ಥೆಯು ಮೂರು ನಿರಂತರ ವರ್ಷಗಳು ಪಾರಿತೋಷಕವನ್ನು ಗೆದ್ದರೆ ಆ ಸಂಸ್ಥೆಯೇ ಅದನ್ನು ಖಾಯಂ ಆಗಿ ಇಟ್ಟುಕೊಳ್ಳುವುದು.

ಅನುಬಂಧ–I ರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ಭಾಗವಹಿಸಿದ ಎಲ್ಲ ಸಂಸ್ಥೆಗಳಿಗೆ ನೀಡತಕ್ಕದ್ದು.

ಅನುಬಂಧ–ಋಋರಲ್ಲಿ ಇದ್ದಂತೆ ಒಂದು ಪ್ರಮಾಣ ಪತ್ರವನ್ನು ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನವನ್ನು ಪಡೆದ ಎಲ್ಲಾ ವಿದ್ಯಾರ್ಥಿಗಳಿಗೆ ನೀಡತಕ್ಕದ್ದು.

11. **ತೀರ್ಪುಗಾರರ ಸಮಿತಿ:–** ಪ್ರತಿಯೊಂದು ಸಂಸ್ಥೆಗಳ ಮೌಲ್ಯ ಮಾಪನಕ್ಕಾಗಿ ತೀರ್ಪುಗಾರರ ಸಮಿತಿಯನ್ನು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ರಚಿಸತಕ್ಕದ್ದು ಹಾಗೂ ಅದರಲ್ಲಿ ಶಿಕ್ಷಣ ತಜ್ಞರು ವಿಧಾನಸಭೆ/ಪರಿಷತ್ತಿನ ಸದಸ್ಯರು ಮತ್ತು ಸಂಸದೀಯ ಸಂಸ್ಥೆಗಳನ್ನು ನಡೆಸುವುದಕ್ಕೆ ಸಂಬಂಧಪಟ್ಟ ಇತರರನ್ನು ಒಳಗೊಂಡಿರಬಹದು. ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯದ ಒಬ್ಬ ಅಧಿಕಾರಿಯು ಸಮಿತಿಯ ಪದನಿಮಿತ್ತ ಸದಸ್ಯರಾಗಿರತಕ್ಕದ್ದು.

12. **ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವಾಗ ಪರಿಗಣಿಸಬೇಕಾದ ಅಂಶಗಳು.–** ಸ್ಪರ್ಧೆಯಲ್ಲಿ ಸಾಧನೆಯನ್ನು ನಿರ್ಧರಿಸುವಾಗ ಸಮಿತಿಯು, ಈ ಮುಂದಿನ ಅಂಶಗಳನ್ನು ಗಮನದಲ್ಲಿಟ್ಟು ಕೊಂಡಿರತಕ್ಕದ್ದು.

13. **ಮರು ಪ್ರದರ್ಶನ:–** ಪ್ರತಿ ವರ್ಷದ ಸ್ಪರ್ಧೆಗಳ ಮುಕ್ತಾಯದ ಸಂದರ್ಭದಲ್ಲಿ ಸಂಬಂಧಿಸಿದ ರಾಜ್ಯ/ ಕೇಂದ್ರಾಡಳಿತ ಪ್ರದೇಶದ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ನಿರ್ಧರಿಸಬಹುದಾದ ಸ್ಥಳ ಮತ್ತು ದಿನಾಂಕದಂದು ಸ್ಪರ್ಧೆಯ ಬಹುಮಾನ ವಿತರಣೆಯ ಸಮಾರಂಭದಲ್ಲಿ, ಸ್ಪರ್ಧೆಯಲ್ಲಿ ಪ್ರಥಮ ಸ್ಥಾನ ಗಳಿಸಿದ ಸಂಸ್ಥೆಯು ಮತ್ತೊಮ್ಮೆ ಪ್ರದರ್ಶನ ಮಾಡುವಂತೆ ಅಗತ್ಯಪಡಿಸಬಹುದು.

14. **ವರದಿ:–** ಸಂಬಂಧಪಟ್ಟ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸಂಸದೀಯ ವ್ಯವಹಾರಗಳ ಇಲಾಖೆ, ಸಾರ್ವಜನಿಕ ಶಿಕ್ಷಣ ನಿರ್ದೇಶನಾಲಯ ಸ್ಪರ್ಧೆಯು ಮುಗಿದ ಮೇಲೆ ಅನುಬಂಧ–ಋಋಋರಲ್ಲಿ ನಿಯಮಿಸಲಾದ ನಮೂನೆಯಲ್ಲಿ, ಅದರಲ್ಲಿ ಮೆರಿಟ್ ಆಧಾರದ ಮೇಲೆ, ಮೊದಲನೇ ಐದು ಸ್ಥಾನ ಪಡೆದ ಶಾಲೆಗಳೂ ಸೇರಿದಂತೆ ಭಾಗವಹಿಸಿದ ಎಲ್ಲಾ ಶಾಲೆಗಳ ಸಂಖ್ಯೆಯನ್ನು ಸೂಚಿಸಿ

ವೈಯಕ್ತಿಕ ಬಹುಮಾನಗಳ ಸಂಖ್ಯೆ ಮುಂತಾದವುಗಳನ್ನು ಒಳಗೊಂಡ ಒಂದು ವರದಿಯನ್ನು ತಯಾರಿಸತಕ್ಕದ್ದು. ವರದಿಯಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯವು ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರಕ್ಕೆ ಮರುಸಂದಾಯ ಮಾಡಬೇಕಾದ ಮೊಬಲಗನ್ನು ಸ್ಪಷ್ಟವಾಗಿ ಮತ್ತು ಪ್ರತ್ಯೇಕವಾಗಿ ಸೂಚಿಸತಕ್ಕದ್ದು. ವರದಿಯನ್ನು ಸಂಬಂಧಿಸಿದ ರಾಜ್ಯ/ಕೇಂದ್ರಾಡಳಿತ ಪ್ರದೇಶದಲ್ಲಿ ಯೋಜನೆಯ ಪ್ರಭಾರವನ್ನು ಹೊಂದಿರುವ ಇಲಾಖೆಯ ಉಪ ಕಾರ್ಯದರ್ಶಿಯ ದರ್ಜೆಗಿಂತ ಕಡಿಮೆಯಲ್ಲದ ಪ್ರತಿನಿಧಿಯು ಸಹಿ ಮಾಡತಕ್ಕದ್ದು. ಚೆಕ್ಕನ್ನು ಯಾರಿಗೆ ಸಂದಾಯ ಮಾಡಲು ಬರೆಯಬೇಕು ಮತ್ತು ಲೆಕ್ಕ ಶೀರ್ಷಿಕೆ ಮುಂತಾದ ವಿವರಗಳನ್ನು ಸ್ಪಷ್ಟವಾಗಿ ನಮೂದಿಸತಕ್ಕದ್ದು.

ನಿಯಮಿಸಲಾದ ನಮೂನೆಯಲ್ಲಿನ ವರದಿಯನ್ನು ಯೋಜನೆಯ ಅಡಿಯಲ್ಲಿ ಹಣಕಾಸಿನ ನೆರವಿನ ಕೋರಿಕೆಯೊಂದಿಗೆ ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರ, ನವದೆಹಲಿ ಇವರಿಗೆ ಕಳುಹಿಸತಕ್ಕದ್ದು.

15. **ವೆಚ್ಚದ ಮರುಸಂದಾಯದ ಪರಿಮಿತಿ**:– ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರಗಳು ಮಾಡಿದ ವಾಸ್ತವಿಕ ವೆಚ್ಚವನ್ನು, ವರದಿಯನ್ನು ಆಧರಿಸಿ ಈ ಮುಂದಿನ ಮಿತಿಗೊಳಪಟ್ಟು ಸಂಸದೀಯ ವ್ಯವಹಾರಗಳ ಮಂತ್ರಾಲಯ, ಭಾರತ ಸರ್ಕಾರದಿಂದ ಮರುಸಂದಾಯ ಮಾಡಲಾಗುವುದು:

| | |
|---|---|
| (ಎ) 100ರವರೆಗೆ ಸದಸ್ಯರುಗಳನ್ನು ಹೊಂದಿರುವ ವಿಧಾನ ಮಂಡಲಗಳು | ಪ್ರತಿವರ್ಷಕ್ಕೆ 3 ಲಕ್ಷ ರೂಪಾಯಿಗಳು |
| (ಬಿ) 100ರಿಂದ 200ರ ನಡುವೆ ಸದಸ್ಯರುಗಳನ್ನುಹೊಂದಿರುವ ವಿಧಾನಮಂಡಲಗಳು | ಪ್ರತಿವರ್ಷಕ್ಕೆ 4 ಲಕ್ಷ ರೂಪಾಯಿಗಳು |
| (ಸಿ) 200ಕ್ಕೂ ಹೆಚ್ಚಿನ ಸದಸ್ಯರುಗಳನ್ನು ಹೊಂದಿರುವ ವಿಧಾನ ಮಂಡಲಗಳು | ಪ್ರತಿ ವರ್ಷಕ್ಕೆ 5 ಲಕ್ಷ ರೂಪಾಯಿಗಳು |

(ವಿಧಾನಮಂಡಲಗಳನ್ನು ಹೊಂದಿರದ ಕೇಂದ್ರಾಡಳಿತ ಪ್ರದೇಶಗಳ ಸಂಬಂಧದಲ್ಲಿ ಮಿತಿಯು ಪ್ರತಿಯೊಂದು ಕೇಂದ್ರಾಡಳಿತ ಪ್ರದೇಶಕ್ಕೆ ಪ್ರತಿವರ್ಷಕ್ಕೆ 2,00,000/– ರೂಪಾಯಿಗಳು ಆಗಿರುತ್ತದೆ)

* * *

**ಕೇಂದ್ರ ಸರ್ಕಾರದ ಮಾದರಿ ಪ್ರಮಾಣ ಪತ್ರಗಳು ಮತ್ತು ಹಣಕಾಸು ನೆರವಿನ ಕೋರಿಕೆ**

**ಅನುಬಂಧ – I**

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ**

**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ**

**"ಯುವ ಸಂಸತ್ ಸ್ಪರ್ಧೆ"**

--------------------------------ಶಾಲೆಯ -------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ --------------------------------ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರು -------ನೇ ವರ್ಷದಲ್ಲಿ ನಡೆಸಿದ "ಯುವ ಸಂಸತ್" ಸ್ಪರ್ಧೆಯಲ್ಲಿ ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**
**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/**
**ನಿರ್ದೇಶನಾಲಯ.**

# ಅನುಬಂಧ–II

## ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರ

## ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/ನಿರ್ದೇಶನಾಲಯ

....

"ಯುವ ಸಂಸತ್ ಸ್ಪರ್ಧೆ"

---------------------------------ಶಾಲೆಯ --------------------- ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ---------------------------------ಅವರಿಗೆ ---------------- ವರ್ಷದಲ್ಲಿ ಭಾರತ ಸರ್ಕಾರದ ಸಂಸದೀಯ ವ್ಯವಹಾರಗಳ ಮಂತ್ರಾಲಯ, ನವದೆಹಲಿ ಇವರ ನೇತೃತ್ವದಲ್ಲಿ ನಡೆಸಲಾದ "ಯುವ ಸಂಸತ್ ಸ್ಪರ್ಧೆ" ಯಲ್ಲಿನ ಅತ್ಯುತ್ತಮ ಸಾಧನೆಗೆ ------------------------------ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

**ಸಕ್ಷಮ ಪ್ರಾಧಿಕಾರಿ**
**ಸಂಸದೀಯ ವ್ಯವಹಾರಗಳ ಇಲಾಖೆ/ನೋಡಲ್ ಕಚೇರಿ/**
**ನಿರ್ದೇಶನಾಲಯ.**

**ಅನುಬಂಧ–III**

**ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ *ಸರ್ಕಾರವು --------ವರ್ಷದಲ್ಲಿ ನಡೆಸಿದ ಯುವ ಸಂಸತ್ ಸ್ಪರ್ಧೆಯ ವರದಿ–ಹಣಕಾಸು ನೆರವಿನ ಕೋರಿಕೆ.**

| | | | |
|---|---|---|---|
| 1. | ರಾಜ್ಯದ/ಕೇಂದ್ರಾಡಳಿತ ಪ್ರದೇಶದ ಹೆಸರು: | | |
| 2. | ಯುವ ಸಂಸತ್ ಸ್ಪರ್ಧೆಯನ್ನು ನಡೆಸಿದ ಮತ್ತು ಮರು ಸಂದಾಯದ ಕ್ಲೇಮನ್ನು ಮಾಡಿದ ಹಣಕಾಸಿನ ವರ್ಷ: | | |
| 3. | ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗಳ ಸಂಖ್ಯೆ: | | |
| 4. | ಸ್ಪರ್ಧೆಯಲ್ಲಿ ಭಾಗವಹಿಸಿದ ವಿದ್ಯಾರ್ಥಿಗಳ ಒಟ್ಟು ಸಂಖ್ಯೆ: | | |
| 5. | ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನಗಳನ್ನು ಪಡೆದ ವಿದ್ಯಾರ್ಥಿಗಳ ಸಂಖ್ಯೆ: | | |
| 6. | ರಾಜ್ಯ ಮಟ್ಟದ ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನಗಳನ್ನು ಗಳಿಸಿದ ಶಾಲೆಗಳ, ಮೆರಿಟ್ ಆಧಾರದ ಮೇಲೆ, ಹೆಸರು ಮತ್ತು ವಿಳಾಸ: | | |
| 7. | ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ಸರ್ಕಾರವು ಕ್ಲೇಮು ಮಾಡಿದ ಮೊಬಲಗು: | | |
| | **ವೆಚ್ಚಗಳ ಬಾಬು** | **ವೆಚ್ಚ ಮಾಡಿದ ಒಟ್ಟು ಮೊಬಲಗು** | **ಕ್ಲೇಮು ಮಾಡಿದ ಮೊಬಲಗು** |
| | **ವಿಷಯಾಭಿಮುಖ ಶಿಕ್ಷಣಕ್ಕಾಗಿ**<br>1.<br>2. | | |
| | ಯುವಸಂಸತ್ ಸ್ಪರ್ಧೆಯ ವ್ಯವಸ್ಥೆಗಾಗಿ<br>1.<br>2. | | |
| | **ಬಹುಮಾನ ವಿತರಣೆ ಸಮಾರಂಭಕ್ಕಾಗಿ**<br>1.<br>2. | | |
| 8. | ಚೆಕ್ಕನ್ನು ಯಾರ ಹೆಸರಿಗೆ ನೀಡಬೇಕೋ ಅವರ ಹೆಸರು/ವಿಳಾಸ/ದೂರವಾಣಿ ಸಂಖ್ಯೆ ಮತ್ತು ಲೆಕ್ಕ ಶೀರ್ಷಿಕೆಯ ವಿವರ. | | |

1. ಮೇಲೆ ಸೂಚಿಸಿದಂತೆ ಶಾಲೆಗಳಲ್ಲಿ ಯುವ ಸಂಸತ್ ಸ್ಪರ್ಧೆಯನ್ನು ನಡೆಸಲಾಯಿತು.
2. ವೆಚ್ಚದ ಮರುಸಂದಾಯದ ಕ್ಲೇಮುಗಳನ್ನು ಮೂಲ ಓಚರುಗಳೊಂದಿಗೆ ತಾಳೆ ನೋಡಲಾಗಿದ್ದು ಅವುಗಳು ಸರಿಯಾಗಿದೆ ಎಂದು ಕಂಡುಬಂದಿದೆ.

– ಎಂದು ಈ ಮೂಲಕ ಪ್ರಮಾಣೀಕರಿಸಲಾಗಿದೆ:

**(ಹೆಸರು)**

**ಪದನಾಮದ**

(ಉಪಕಾರ್ಯದರ್ಶಿಗಳ ದರ್ಜೆಗಿಂತ ಕಡಿಮೆಯಲ್ಲದ ದರ್ಜೆಯ ಅಧಿಕಾರಿಗಳು ಸಹಿಮಾಡುವುದು)

**ರಾಜ್ಯ/ಕೇಂದ್ರಾಡಳಿತ ಪ್ರದೇಶ ಸರ್ಕಾರದ ವಿಳಾಸ,**

**ದೂರವಾಣಿ ಸಂಖ್ಯೆ/ ಇಮೇಲ್ ಐ.ಡಿ.**

**ಸೂಚನೆ:-**

**ವಿಷಯಾಭಿಮುಖ ಶಿಕ್ಷಣ** ಎಂದರೆ ಯುವ ಸಂಸತ್ತನ್ನು ನಡೆಸುವುದರ ಪ್ರಭಾರದಲ್ಲಿರುವ ಶಿಕ್ಷಕರ/ಶಿಕ್ಷಣ ಅಧಿಕಾರಿಗಳ ಪ್ರಯೋಜನಕ್ಕಾಗಿ ರಾಜ್ಯ/ಕೇಂದ್ರಾಡಳಿತ ಪ್ರದೇಶಗಳ ನೋಡಲ್ ಪ್ರಾಧಿಕಾರಿಗಳು ನಡೆಸುವ ಒಂದು ಕೋರ್ಸು. ಭಾಗವಹಿಸುವವರಿಗೆ ಹಂಚುವ ಸಾಹಿತ್ಯ/ಲೇಖನ ಸಾಮಗ್ರಿಗಳ ರೂಪದಲ್ಲಿ ವೆಚ್ಚಗಳುಂಟಾಗುತ್ತವೆ.

**ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ** ಎಂದರೆ, ಸ್ಪರ್ಧೆಯನ್ನು ನಡೆಸುವುದಕ್ಕೆ ವಹಿಸಿದ ವೆಚ್ಚ, ಇದು ಉಪಹಾರಕ್ಕೆ, ಭಾಗವಹಿಸುವ ವಿದ್ಯಾರ್ಥಿಗಳ ಸಾರಿಗೆ ವ್ಯವಸ್ಥೆಗೆ, ಬಹುಮಾನ/ಪಾರಿತೋಷಕ ಮುಂತಾದವುಗಳಿಗೆ ತಗಲಿದ ವೆಚ್ಚವನ್ನು ಒಳಗೊಳ್ಳುತ್ತದೆ.

**ಬಹುಮಾನ ವಿತರಣೆ ಸಮಾರಂಭ** ಎಂದರೆ, ರಾಜ್ಯ ಮಟ್ಟದ ಬಹುಮಾನ ವಿಜೇತರು ಮುಂತಾದವರಿಗೆ ಬಹುಮಾನಗಳು/ಷೀಲ್ಡ್‌ಗಳನ್ನು (ಪಾರಿತೋಷಕಗಳನ್ನು) ವಿತರಣೆ ಮಾಡುವುದಕ್ಕಾಗಿ ನಡೆಸಿದ ಸಮಾರಂಭ, ಇದು ಪ್ರತಿಭಾನ್ವಿತ ಶಾಲೆಗಳು ಮತ್ತು ವಿದ್ಯಾರ್ಥಿಗಳಿಗೆ ಪುಸ್ತಕಗಳು, ನೆನಪಿನ ಕಾಣಿಕೆಗಳು, ಪ್ರಮಾಣ ಪತ್ರಗಳು, ಷೀಲ್ಡ್‌ಗಳ (ಪಾರಿತೋಷಕಗಳು) ರೂಪದಲ್ಲಿ ಬಹುಮಾನ ಮುಂತಾದವುಗಳಿಗಾಗಿ ವಹಿಸಿದ ವೆಚ್ಚವನ್ನು ಒಳಗೊಳ್ಳುತ್ತದೆ.

(ಮರುಸಂದಾಯದ ಕ್ಲೇಮಿನಲ್ಲಿ, ಶಿಕ್ಷಕರಿಗೆ/ಅಧಿಕಾರಿಗಳಿಗೆ, ಪ್ರಯಾಣಭತ್ಯೆ/ದಿನಭತ್ಯೆಗಳ ವೆಚ್ಚಗಳನ್ನು ಸೇರಿಸತಕ್ಕದ್ದಲ್ಲ)

*ಸ್ಪರ್ಧೆಗಾಗಿ ವಹಿಸಿದ ವೆಚ್ಚಗಳ ಮರುಸಂದಾಯಕ್ಕಾಗಿ "ರಾಜ್ಯಗಳಿಗೆ/ಕೇಂದ್ರಾಡಳಿತ ಪ್ರದೇಶಗಳಿಗೆ ಹಣಕಾಸು ನೆರವು ಯೋಜನೆ"ಯ 14ನೇ ಕಂಡಿಕೆಯಲ್ಲಿ ಹೇಳಿರುವಂತೆ, ಯುವ ಸಂಸತ್ ಸ್ಪರ್ಧೆಗಳು ಮುಕ್ತಾಯವಾದ ಮೇಲೆ, ರಾಜ್ಯ/ಕೇಂದ್ರಾಡಳಿತ ಸರ್ಕಾರಗಳು ಭರ್ತಿ ಮಾಡಿ ಕಳುಹಿಸಬೇಕು.

## ಜಿಲ್ಲಾಮಟ್ಟದ ಯುವ ಸಂಸತ್ ಸ್ಪರ್ಧೆಯ ಮಾರ್ಗಸೂಚಿಗಳು

**1. ಯುವ ಸಂಸತ್ ಸ್ಪರ್ಧೆಯ ವ್ಯವಸ್ಥೆ:-** (ಎ) ಸಂಬಂಧಪಟ್ಟ ಶೈಕ್ಷಣಿಕ ಜಿಲ್ಲೆಗಳ ಸಾರ್ವಜನಿಕ ಶಿಕ್ಷಣ ಇಲಾಖೆಯ ಉಪನಿರ್ದೇಶಕರು ತಮ್ಮ ಜಿಲ್ಲೆಯ ನೋಡಲ್ ಅಧಿಕಾರಿ ಹಾಗೂ ಇತರ ಸಿಬ್ಬಂದಿಯ ಸಮನ್ವಯದೊಂದಿಗೆ ಯುವಸಂಸತ್ ಸ್ಪರ್ಧೆಯನ್ನು ಸರ್ಕಾರ ನಿಗದಿಪಡಿಸಿದ ಕಾಲಮಿತಿಯೊಳಗೆ ವ್ಯವಸ್ಥಿತವಾಗಿ ನಡೆಸತಕ್ಕದ್ದು. ಸ್ಪರ್ಧೆಗಾಗಿ ಉತ್ತಮ ವೇದಿಕೆ, ಧ್ವನಿವರ್ಧಕ, ಹಾಗೂ ಸ್ಪರ್ಧೆಯಲ್ಲಿ ಭಾಗವಹಿಸುವ ವಿದ್ಯಾರ್ಥಿಗಳಿಗೆ ಉಪಹಾರ, ಸ್ಪರ್ಧಾವಿಜೇತರಿಗೆ ಬಹುಮಾನ, ಮುಂತಾದವನ್ನು ಪ್ರತಿ ಜಿಲ್ಲೆಗೆ ನೀಡಲಾಗುವ ಅನುದಾನದಿಂದ ಏರ್ಪಾಡು ಮಾಡತಕ್ಕದ್ದು.

(ಬಿ) ಜಿಲ್ಲಾ ಮಟ್ಟದ ಸ್ಪರ್ಧೆಗೆ 2011-12ನೇ ಸಾಲಿನ ಶೈಕ್ಷಣಿಕ ವರ್ಷದಲ್ಲಿ ಪ್ರತಿಯೊಂದು ಜಿಲ್ಲೆಗೆ ರೂ. 6,000/- (ಆರು ಸಾವಿರ ರೂಪಾಯಿಗಳು ಮಾತ್ರ) ಅಥವಾ ಸ್ಪರ್ಧೆಯ ವಾಸ್ತವ ವೆಚ್ಚ ಇವುಗಳಲ್ಲಿ ಯಾವುದು ಕಡಿಮೆಯೋ ಅದನ್ನು ರಾಜ್ಯ ಶಿಕ್ಷಣ ಸಂಶೋಧನೆ ಮತ್ತು ತರಬೇತಿ ಇಲಾಖೆಯ ಮೂಲಕ ನೀಡಲಾಗುವುದು.

**2. ಯುವ ಸಂಸತ್ ಸ್ಪರ್ಧೆಗಳಿಗೆ ವಿಧ್ಯಾರ್ಥಿಗಳನ್ನು ಆಯ್ಕೆ ಮಾಡುವ ವಿಧಾನ.-** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳಿಗೆ ಕರ್ನಾಟಕ ರಾಜ್ಯದ ಮಾನ್ಯತೆ ಪಡೆದ ಎಲ್ಲಾ ಪ್ರೌಢ ಶಾಲೆಗಳ ವಿದ್ಯಾರ್ಥಿಗಳು ಸ್ಪರ್ಧೆಯಲ್ಲಿ ಭಾಗವಹಿಸುವ ಅರ್ಹತೆ ಹೊಂದಿರುವುದರಿಂದ ಸುಮಾರು 60 ರಿಂದ 90 ವಿದ್ಯಾರ್ಥಿಗಳು ಜಿಲ್ಲಾ ಮಟ್ಟದ ಸ್ಪರ್ಧೆಯಲ್ಲಿ ಭಾಗವಹಿಸುವಂತೆ ಅವಕಾಶ ನೀಡಬೇಕು. ಇದಕ್ಕಾಗಿ ವಿದ್ಯಾರ್ಥಿಗಳನ್ನು ಆಯ್ಕೆ ಮಾಡುವಾಗ ಈ ಮುಂದೆ ಹೇಳಿದ ಅರ್ಹತೆಗಳನ್ನು ಸಾಮಾನ್ಯವಾಗಿ ಪರಿಗಣಿಸಬೇಕು.

(1) ಚರ್ಚಿಸುವ ಸಾಮರ್ಥ್ಯವಿರುವ ವಿದ್ಯಾರ್ಥಿಗಳು.

(2) ನಮ್ಮ ದೇಶದ ಸಾಮಾಜಿಕ, ಆರ್ಥಿಕ ಮತ್ತು ರಾಜಕೀಯ ಸಮಸ್ಯೆಗಳ ಬಗ್ಗೆ ಸಾಕಷ್ಟು ಚೆನ್ನಾಗಿ ತಿಳಿದುಕೊಂಡ ವಿದ್ಯಾರ್ಥಿಗಳು.

(3) ತಮ್ಮ ತಮ್ಮ ತರಗತಿಗಳಲ್ಲಿ ಉತ್ತಮ ಮೆರಿಟ್ ಪಡೆದಿರುವ ವಿದ್ಯಾರ್ಥಿಗಳು.

(4) ಮುಖಂಡತ್ವದ ಗುಣಗಳಿರುವ ಮತ್ತು ಪಠ್ಯೇತರ ಚಟುವಟಿಕೆಗಳಲ್ಲಿ ಆಸಕ್ತಿ ಇರುವ ವಿದ್ಯಾರ್ಥಿಗಳು.

(5) ಮಾಧ್ಯಮಿಕ ಶಾಲೆಗಳು ಮತ್ತು ಪ್ರೌಢಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳು.

ಪ್ರತಿ ವರ್ಷವೂ ಹೊಸ ವಿದ್ಯಾರ್ಥಿಗಳ ಗುಂಪುಗಳಿಗೆ ಆದ್ಯತೆ ನೀಡಿ, ಹೆಚ್ಚಿನ ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಭಾಗವಹಿಸುವಂತೆ ನೋಡಿಕೊಳ್ಳಬೇಕೆಂದು ಮತ್ತು ಪ್ರಶ್ನೋತ್ತರ ಅವಧಿಯಲ್ಲಿ ಮತ್ತು ಇತರ ಶಾಸನ-ಕಲಾಪಗಳ ಅವಧಿಯಲ್ಲಿ ಆಯ್ಕೆ ಮಾಡಿದ ವಿಷಯಗಳಿಗೆ ಸಂಬಂಧಪಟ್ಟ ಅಂಕಿ

ಅಂಶಗಳನ್ನು ಸಂಗ್ರಹಿಸುವಂತೆ ಅವರಿಗೆ ಸೂಚಿಸಬೇಕು. ವಿದ್ಯಾರ್ಥಿನಿಯರಿಗೂ ಯುವ ಸಂಸತ್ತಿನಲ್ಲಿ ಭಾಗವಹಿಸಲು ಸಮಾನ ಅವಕಾಶ ನೀಡತಕ್ಕದ್ದು.

3. **ಯುವ ಸಂಸತ್ ರಚನೆ.–** (ಎ) ಪ್ರತಿ ಜಿಲ್ಲೆಯಲ್ಲಿ, ನಿಗದಿತ ದಿನಾಂಕ ಹಾಗೂ ಸ್ಥಳದಲ್ಲಿ ಅಧಿವೇಶನದಲ್ಲಿ ಪಾಲ್ಗೊಳ್ಳುವ ವಿದ್ಯಾರ್ಥಿಗಳು ಹತ್ತು ಗಂಟೆಗೆ ತಮ್ಮ ಹೆಸರನ್ನು ನೋಂದಾಯಿಸುವರು.

(ಬಿ) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆಯಿಂದ ನಿಯೋಜಿತ ತೀರ್ಪುಗಾರರ ಸಮಿತಿಯ ಸದಸ್ಯರು ವಿದ್ಯಾರ್ಥಿಗಳನ್ನು,–

ಶೇಕಡ 60 – ಆಡಳಿತ ಪಕ್ಷದ ಸದಸ್ಯರು.

ಶೇಕಡ 40 – ವಿರೋಧ ಪಕ್ಷದ ಸದಸ್ಯರನ್ನಾಗಿ ವಿಂಗಡಿಸುವರು.

(ಸಿ) ಆಡಳಿತ ಪಕ್ಷದ ಸದಸ್ಯರು ತಮ್ಮೊಳಗೆ ಇಬ್ಬರನ್ನು ಆರಿಸುವರು. ಇವರಲ್ಲಿ ಒಬ್ಬರನ್ನು "ಮುಖ್ಯಮಂತ್ರಿ" ಎಂದು ಕರೆಯಲಾಗುವುದು. ಹಾಗೂ ಇನ್ನೊಬ್ಬರನ್ನು ಸಭಾಧ್ಯಕ್ಷರು (ಠಿಜಚಿಞಜಡಿ) ಎಂದು ಕರೆಯಲಾಗುವುದು. ಮುಖ್ಯಮಂತ್ರಿಯವರು ಆಡಳಿತ ಪಕ್ಷದ 5 ಸದಸ್ಯರನ್ನು ಮಂತ್ರಿಗಳನ್ನಾಗಿ ಆರಿಸುವರು. ಇವರನ್ನು

(ಅ) ಶಿಕ್ಷಣ ಸಚಿವರು.

(ಆ) ಗೃಹ ಸಚಿವರು.

(ಇ) ಕಾನೂನು ಮತ್ತು ಸಂಸದೀಯ ವ್ಯವಹಾರಗಳ ಸಚಿವರು.

(ಈ) ಆರೋಗ್ಯ ಸಚಿವರು; ಹಾಗೂ

(ಉ) ಸಮಾಜ ಕಲ್ಯಾಣ ಸಚಿವರು.

ಎಂದು ನಾಮಕರಣ ಮಾಡಲಾಗುವುದು.

(ಡಿ) ವಿರೋಧ ಪಕ್ಷದ ಸದಸ್ಯರು ಸಮನಾದ ಮೂರು ಪಂಗಡಗಳಲ್ಲಿ ವಿಭಜಿಸಿ ಕೊಳ್ಳುವರು, ಪ್ರತಿಯೊಂದು ವಿರೋಧ ಪಕ್ಷವನ್ನು

(ಅ) ವಿರೋಧ ಪಕ್ಷ–1

(ಆ) ವಿರೋಧ ಪಕ್ಷ–2

(ಇ) ವಿರೋಧ ಪಕ್ಷ–3

ಎಂದು ಕರೆಯಲಾಗುವುದು. ವಿರೋಧ ಪಕ್ಷದ ಸದಸ್ಯರು ತಮ್ಮೊಳಗೆ ಒಬ್ಬ ನಾಯಕನನ್ನು ಆರಿಸುವರು. ಅವರನ್ನು ಆಯಾ ವಿರೋಧ ಪಕ್ಷದ ಹೆಸರಿನ ನಾಯಕರೆಂದು ಕರೆಯಲಾಗುವುದು.

4. **ಆಸನಗಳ ವ್ಯವಸ್ಥೆ.–** (ಎ) ಆಡಳಿತ ಪಕ್ಷದ ಸದಸ್ಯರು ಕೊಠಡಿಯ (ಇನ್ನು ಮುಂದೆ ಸದನ ಎಂದು ಕರೆಯಲಾಗುವುದು) ಬಲ ಭಾಗದಲ್ಲಿ, ವಿರೋಧ ಪಕ್ಷದ ಸದಸ್ಯರು ಸದನದ ಎಡಭಾಗದಲ್ಲಿ

ಕುಳಿತು ಕೊಳ್ಳುವರು. ಸಭಾಧ್ಯಕ್ಷರ ಆಸನವು ಸದನದ ವೇದಿಕೆಯಲ್ಲಿ ಇರುವುದು. ಮುಖ್ಯಮಂತ್ರಿ ಹಾಗೂ ಇತರ ಸಚಿವರು ಆಡಳಿತ ಪಕ್ಷದ ಆಸನಗಳಲ್ಲಿ ಮುಂದಿನ ಸ್ಥಾನಗಳನ್ನು, ವಿರೋಧ ಪಕ್ಷದ ಮುಖಂಡರು ತಮ್ಮ ಪಕ್ಷದ ವಿಭಾಗದಲ್ಲಿ ಮುಂದಿನ ಸ್ಥಳಗಳಲ್ಲಿ ಆಸೀನರಾಗುವರು.

(ಬಿ) ತೀರ್ಪುಗಾರರ ಸಮಿತಿಯ ಸದಸ್ಯರು ಎಲ್ಲಾ ಸದಸ್ಯರನ್ನು ವೀಕ್ಷಿಸಲು ಹಾಗೂ ಆಲಿಸಲು ಸಾಧ್ಯವಾಗುವಂತಹ ಸೂಕ್ತ ಸ್ಥಳದಲ್ಲಿ ಆಸೀನರಾಗುವರು.

5. **ಸ್ಪರ್ಧೆಗಳನ್ನು ನಡೆಸುವ ವಿಧಾನ.**–(ಎ) ಮೊದಲಿಗೆ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ತಮ್ಮ ತಮ್ಮ ನಾಯಕರನ್ನು ಆಯ್ಕೆ ಮಾಡಲು ವಿಫಲರಾದಲ್ಲಿ ತೀರ್ಪುಗಾರರ ಸಮಿತಿಯ ಸದಸ್ಯರು ಅವರಿಗೆ ಮಾರ್ಗದರ್ಶನ ನೀಡುವರು ಅಥವಾ ಸೂಕ್ತ ವಿದ್ಯಾರ್ಥಿಯನ್ನು ನಾಮನಿರ್ದೇಶನ ಮಾಡುವರು. ಮೇಲಿನ ಪ್ರಕ್ರಿಯೆಗಳು 10–00 ಗಂಟೆಯಿಂದ 10–55 ರೊಳಗೆ ಮುಕ್ತಾಯಗೊಳ್ಳಬೇಕಾಗಿದೆ.

(ಬಿ) 11–00 ಗಂಟೆಗೆ "ಸಭಾಧ್ಯಕ್ಷರು ಸದನಕ್ಕೆ ಆಗಮಿಸುತ್ತಿದ್ದಾರೆ" ಯೆಂಬುದಾಗಿ ಶಾಲಾ ಸಿಬ್ಬಂದಿಯೊಬ್ಬರು ಘೋಷಿಸುವರು.

(ಸಿ) ಸದನದ ಸದಸ್ಯರು ತಮ್ಮ ಆಸನಗಳಿಂದ ಎದ್ದು ನಿಲ್ಲುವರು. ಸಭಾಧ್ಯಕ್ಷರು ತಮ್ಮ ಸ್ಥಾನದಲ್ಲಿ ಕುಳಿತ ನಂತರ ಸದಸ್ಯರು ಆಸೀನರಾಗುವರು.

(ಡಿ) ಸಭಾಧ್ಯಕ್ಷರು.– 1. ಪ್ರಶ್ನೋತ್ತರ

ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು

ಪ್ರಶ್ನೆ ಸಂಖ್ಯೆ–1

ಸಚಿವರು – ಉತ್ತರ ಒದಗಿಸಲಾಗಿದೆ.

ಸಭಾಧ್ಯಕ್ಷರು – ಪ್ರಶ್ನೆ ಸಂಖ್ಯೆ –2

ಸಚಿವರು – ಉತ್ತರ ಒದಗಿಸಲಾಗಿದೆ.

(ಇದೇ ಕ್ರಮವನ್ನು ಅನುಬಂಧ–3 ರ ಪ್ರಶ್ನೆಗಳ ಬಗ್ಗೆ ಅನುಸರಿಸಲಾಗುವುದು)

ಸಭಾಧ್ಯಕ್ಷರು – ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು ಮುಗಿದಿವೆ.

ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು

ಸಚಿವರು – ಉತ್ತರಗಳನ್ನು ಕಳುಹಿಸಲಾಗಿದೆ.

ಪ್ರಶ್ನೆ ಕೇಳುವ ಸದಸ್ಯರು – (ಅ) ಉತ್ತರಗಳು ತೃಪ್ತಿಕರವಿಲ್ಲ;

(ಆ) ಉತ್ತರಗಳು ಸತ್ಯಕ್ಕೆ ದೂರವಾಗಿದೆ.

(ಇ) ಮಾನ್ಯ ಸಚಿವರು ಆಶ್ವಾಸನೆ ಕೊಡಬೇಕು.

(ಮುಂತಾದ ವಿಷಯಗಳ ಬಗ್ಗೆ ಮಾತಾಡುವರು)

ಇತರೆ ಸದಸ್ಯರು – ಅಧ್ಯಕ್ಷರ ಅನುಮತಿಯೊಂದಿಗೆ ಉತ್ತರಗಳ ಬಗ್ಗೆ ಮಾತಾಡಬಹುದು.

(ಇದೇ ಕ್ರಮವನ್ನು ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಬಗ್ಗೆ ಜರುಗಿಸುವುದು)

(ಇ) **ಶೂನ್ಯ ವೇಳೆ.**– ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯಲ್ಲಿ ನಿಗದಿಪಡಿಸಿರುವ ಒಂದು ಕಾರ್ಯಕಲಾಪವನ್ನು ಪೂರೈಸಿದನಂತರ ಇನ್ನೊಂದು ಕಾರ್ಯಕಲಾಪ ಪ್ರಾರಂಭಿಸುವ ಅವಧಿಯನ್ನು "ಶೂನ್ಯ ವೇಳೆ" ಯೆಂದು ಕರೆಯಲಾಗುವುದು. ಪ್ರಸ್ತುತ ಅಧಿವೇಶನದಲ್ಲಿ ಪ್ರಶ್ನೋತ್ತರ ಮುಗಿದಿದೆ. "ಗಮನ ಸೆಳೆಯುವ ಸೂಚನೆ" ಗಳನ್ನು ತೆಗೆದು ಕೊಳ್ಳಬೇಕಾಗಿದೆ. ಈ ಶೂನ್ಯ ವೇಳೆಯಲ್ಲಿ ಅನೇಕ ಶಾಸಕರು ಪ್ರಸ್ತುತ ನಡೆಯುತ್ತಿರುವ ಎಸ್. ಎಸ್. ಎಲ್. ಸಿ. ಪರೀಕ್ಷೆಯಲ್ಲಿ "ವಿಜ್ಞಾನ" ವಿಷಯಕ್ಕೆ ಸಂಬಂಧಪಟ್ಟ ಪ್ರಶ್ನೆ ಪತ್ರಿಕೆಗಳು ಬಯಲಾಗಿರುವ ವಿಷಯದ ಬಗ್ಗೆ ಪ್ರಸ್ತಾಪಿಸಲು ಎದ್ದು ನಿಂತು ಅಧ್ಯಕ್ಷರ ಅನುಮತಿ ಕೋರುವರು.

ಸದಸ್ಯರು: ಪ್ರಸ್ತುತ ನಡೆಯುತ್ತಿರುವ ಎಸ್. ಎಸ್. ಎಲ್. ಸಿ. ಪರೀಕ್ಷೆಯ ವಿಜ್ಞಾನ ವಿಷಯದ ಪ್ರಶ್ನೆ ಪತ್ರಿಕೆ ನೂರು ರೂಪಾಯಿಗೆ ದೊರೆಯುತ್ತಿದೆ. ಇದರ ಬಗ್ಗೆ ಪ್ರಸ್ತಾಪಿಸಲು ನಮಗೆ ಅನುಮತಿ ಕೊಡಬೇಕು ಇತ್ಯಾದಿ.

ಸಭಾಧ್ಯಕ್ಷರು: ತಾವು ಎತ್ತ ಬೇಕೆಂದಿರುವ ವಿಷಯದ ಬಗ್ಗೆ ಸೂಚನಾ ಪತ್ರ ಕೊಡಿ. ಮಾನ್ಯ ಸಚಿವರು ಅದಕ್ಕೆ ಉತ್ತರಿಸಲು ಕಾಲಾವಕಾಶ ಬೇಕು. ನಂತರ ತೆಗೆದುಕೊಳ್ಳೋಣ.

ಸದಸ್ಯರು: ಇದು ಅತ್ಯಂತ ಗಂಭೀರವಾದ ತುರ್ತು ವಿಷಯ ನಡೆಯುತ್ತಿರುವ ಪರೀಕ್ಷೆಗಳು ತುರ್ತಾಗಿ ನಿಲ್ಲಬೇಕು. ಉಳಿದ ಕಲಾಪಗಳನ್ನು ನಂತರ ತೆಗೆದುಕೊಳ್ಳಬಹುದು.

ಸಂಬಂಧಪಟ್ಟ ಸಚಿವರು: ಈಗಾಗಲೇ ನಾನು ಎಸ್. ಎಸ್. ಎಲ್. ಸಿ. ಪರೀಕ್ಷಾ ಮಂಡಳಿಯಿಂದ ವರದಿ ಕೋರಿದ್ದೇನೆ. ಇಂದು ಸಂಜೆ ವರದಿ ತಲುಪುವ ನಿರೀಕ್ಷೆಯಿದೆ. ನಾಳೆ ವಿಷಯವನ್ನು ಚರ್ಚೆಗೆ ತೆಗೆದುಕೊಳ್ಳಬಹುದು.

ಸಭಾಧ್ಯಕ್ಷರು: ವಿಷಯವನ್ನು ನಾಳಿನ ಕಾರ್ಯಕಲಾಪಗಳ ಪಟ್ಟಿಯಲ್ಲಿ "ಗಮನ ಸೆಳೆಯುವ ಸೂಚನೆಗಳಡಿಯಲ್ಲಿ ತೆಗೆದುಕೊಳ್ಳಲಾಗುವುದು" ಮುಂದಿನ ಕಾರ್ಯಕಲಾಪ "ಗಮನ ಸೆಳೆಯುವ ಸೂಚನೆ".

(ಎಫ್) **ಗಮನ ಸೆಳೆಯುವ ಸೂಚನೆ.–** ಪುಟ ಸಂಖ್ಯೆ 75–79 ರಲ್ಲಿರುವ ವಿಷಯದ ಬಗ್ಗೆ ಸಂಬಂಧಪಟ್ಟ ಸಚಿವರು ವಿವರಣೆಯನ್ನು ನೀಡುವರು. ಪುಟ 75 ರಿಂದ 79ರ ಮಾದರಿಗಳನ್ನು ನೋಡಿ.

ಗಮನ ಸೆಳೆಯುವ ಸೂಚನೆ ನೀಡಿರುವ ಶಾಸಕರು "ವಿವರಣೆ ತೃಪ್ತಿಕರವಾಗಿಲ್ಲ". ವಾಸ್ತವಿಕತೆ ದೂರವಾಗಿದೆ, ಸರ್ಕಾರವು ತಮ್ಮ ಅಸಮರ್ಥತೆಯನ್ನು ಒಪ್ಪಿಕೊಳ್ಳಬೇಕು. ಸದನ ಸಮಿತಿ ರಚಿಸಬೇಕು ಇತ್ಯಾದಿ ವಿಷಯಗಳ ಬಗ್ಗೆ ಮಾತಾಡುವರು.

ಉಳಿದ ಶಾಸಕರು ಅಧ್ಯಕ್ಷರ ಅನುಮತಿಯ ಮೇರೆಗೆ ಚರ್ಚೆಯಲ್ಲಿ ಭಾಗವಹಿಸಬಹುದು. ನಂತರ ಸಚಿವರು ಉತ್ತರ/ ಆಶ್ವಾಸನೆ ನೀಡುವರು.

(ಜಿ) **ಅಲ್ಪ ಕಾಲಾವಧಿ ಚರ್ಚೆ.–** ಪುಟ ಸಂಖ್ಯೆ 71ರ ಮಾದರಿಗಳನ್ವಯ ಸೂಚನೆಯನ್ನು ಕೊಟ್ಟಿರುವ ಸದಸ್ಯರು ಒಂದು ಸಂಕ್ಷಿಪ್ತ ಹೇಳಿಕೆಯನ್ನು ಕೊಡುವರು. ಸಂಬಂಧಪಟ್ಟ ಮಂತ್ರಿಯವರು ಸಂಕ್ಷಿಪ್ತ ಉತ್ತರ ನೀಡುವರು. ಕೆಲವು ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಚರ್ಚೆಯಲ್ಲಿ ಭಾಗವಹಿಸುವರು.

(ಹೆಚ್) **ವಿಧೇಯಕದ ಮಂಡನೆ.–** ಪುಟ ಸಂಖ್ಯೆ 83–101ರ ಮಾದರಿಗಳನ್ವಯ ವಿಧೇಯಕವನ್ನು ಮಂಡಿಸುವಂತೆ ಸಂಬಂಧಪಟ್ಟ ಸಚಿವರಿಗೆ ಸಭಾಧ್ಯಕ್ಷರು ಸೂಚಿಸುವರು.

ಸಂಬಂಧಪಟ್ಟ ಸಚಿವರು (ಮಾನ್ಯ ಕಂದಾಯ ಸಚಿವರು) ಎದ್ದು ನಿಂತು.– ನಾನು ಕರ್ನಾಟಕ ಭೂಕಬಳಿಕೆ ನಿಷೇಧ ವಿಧೇಯಕ, 2011 ನ್ನು ಮಂಡಿಸುತ್ತಿದ್ದೇನೆ.

ಸಭಾಧ್ಯಕ್ಷರು – ವಿಧೇಯಕವನ್ನು ಮಂಡಿಸಲಾಗಿದೆ.

(ಐ) **ವಿಧೇಯಕದ ಪರ್ಯಾಲೋಚನೆ.–** ಸಂಬಂಧಪಟ್ಟ ಸಚಿವರು ವಿಧೇಯಕದ ಉದ್ದೇಶವನ್ನು ವಿವರಿಸುವರು ಹಾಗೂ ಮುಗಿಸಿದನಂತರ ಕುಳಿತು ಕೊಳ್ಳುವರು.

ಸಭಾಧ್ಯಕ್ಷರು: ವಿಧೇಯಕದ ಬಗ್ಗೆ ಚರ್ಚೆಯಲ್ಲಿ ಪಾಲ್ಗೊಳ್ಳಲು ಸೂಚನೆ ನೀಡಿರುವ ಶಾಸಕರ ಹೆಸರನ್ನು ಕರೆಯುವರು– ತಮ್ಮ ತಮ್ಮ ಸರದಿಯನ್ವಯ ಶಾಸಕರು ಚರ್ಚೆಯಲ್ಲಿ ಭಾಗವಹಿಸಿ ಸಲಹೆ/ಸೂಚನೆ ನೀಡುವರು.

ಸಂಬಂಧಪಟ್ಟ ಸಚಿವರು: ಸಲಹೆಗಳ ಬಗ್ಗೆ ಉತ್ತರಿಸುವರು. ಇದಾದ ನಂತರ

ಸಭಾಧ್ಯಕ್ಷರು: ವಿಧೇಯಕವನ್ನು ಖಂಡ ಖಂಡವಾಗಿ ಮತಕ್ಕೆ ಹಾಕಲಾಗಿದೆ. ವಿಧೇಯಕದ ಪರವಾಗಿರುವವರು "ಹೌದು" ಎಂದು ಉತ್ತರಿಸಬೇಕು. ವಿಧೇಯಕಕ್ಕೆ ವಿರುದ್ಧವಾಗಿರುವವರು "ಇಲ್ಲ" ಎಂದು ಉತ್ತರಿಸಬೇಕು ಎಂದು ಹೇಳುವರು.

(ಸದಸ್ಯರು ತಮ್ಮ ತಮ್ಮ ನಿರ್ಣಯಗಳನ್ನು "ಹೌದು" ಅಥವಾ "ಇಲ್ಲ" ಎಂದು ಉತ್ತರಿಸುವರು.)

ಸಭಾಧ್ಯಕ್ಷರು – ವಿಧೇಯಕ ಅಂಗೀಕಾರವಾಗಿದೆ.

ಸಭಾಧ್ಯಕ್ಷರು – ಇಂದಿನ ಕಾರ್ಯಕಲಾಪಗಳು ಮುಗಿದಿವೆ. ನಾಳೆ ಪೂರ್ವಾಹ್ನ 11–00 ಗಂಟೆಗೆ ಸೇರಲಾಗುವುದು.

ಎಂದು ತಿಳಿಸುವರು. ಸದಸ್ಯರೆಲ್ಲರೂ ಎದ್ದು ನಿಲ್ಲುವರು. ಸಭಾ ಸದಸ್ಯರು ನಿರ್ಗಮಿಸಿದ ನಂತರ ಸದಸ್ಯರು ತಮ್ಮ ಆಸನಗಳಿಂದ ನಿರ್ಗಮಿಸುವರು.

ಮಾದರಿ ಕಾರ್ಯಕ್ರಮ ಹಾಗೂ ಕಡ್ಡಾಯ ವಿಷಯಗಳ ಪಟ್ಟಿಯನ್ನು ಕ್ರಮವಾಗಿ ಅನುಬಂಧ–ಎ ಮತ್ತು ಅನುಬಂಧ–ಬಿ ಯಲ್ಲಿ ಒದಗಿಸಲಾಗಿದೆ.

**(ಜೆ) ಶಿಷ್ಟಾಚಾರ ಸಂಹಿತೆ** – ಸ್ಪರ್ಧೆಗೆ ಭಾಗವಹಿಸುವ ವಿದ್ಯಾರ್ಥಿಗಳು ನಿಯಮಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು.–

(1) ವಿದ್ಯಾರ್ಥಿಗಳು ಕೊಟ್ಟ ವಿಷಯವನ್ನು ಮಾತನಾಡಬೇಕಾಗುತ್ತದೆ. ವಿಷಯವನ್ನು ಮೀರಿ ಮಾಡನಾಡಲು ಅವಕಾಶವಿರುವುದಿಲ್ಲ.

(2) ಶಿಸ್ತು ಸಂಯಮಗಳು, ನಿಯಮಗಳು ಸ್ಪರ್ಧೆಯ ಎಲ್ಲಾ ವಿದ್ಯಾರ್ಥಿಗಳಿಗೆ ಮೀಸಲಾಗಿರುತ್ತದೆ.

6. **ತೀರ್ಪುಗಾರರ ಸಮಿತಿಯ ರಚನೆ:–** ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ತೀರ್ಪುಗಾರರ ಸಮಿತಿಯಲ್ಲಿ,–

(1) ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನಾ ಇಲಾಖೆಯ ನಿಯೋಜಿತ ಅಧಿಕಾರಿ;

(2) ಸಾರ್ವಜನಿಕ ಶಿಕ್ಷಣ ಇಲಾಖೆಯ ಕ್ಷೇತ್ರ ಶಿಕ್ಷಣಾಧಿಕಾರಿಯ ದರ್ಜೆಗಿಂತ ಕಡಿಮೆ ಇಲ್ಲದ ಅಧಿಕಾರಿ;

(3) ಸ್ಥಳೀಯ ಶಾಸಕರು/ಜಿಲ್ಲಾ ಪಂಚಾಯತ್/ ತಾಲ್ಲೂಕ್ ಪಂಚಾಯತ್ ಸದಸ್ಯರು. ಇರತಕ್ಕದ್ದು.

7. **ಮೆರಿಟ್ ಪಟ್ಟಿಯನ್ನು ಸಿದ್ಧಪಡಿಸುವುದು ಹಾಗೂ ಬಹುಮಾನ:–** ಮೆರಿಟ್ ಪಟ್ಟಿ ಹಾಗೂ ವರದಿಯನ್ನು ರಾಜ್ಯಮಟ್ಟದ ಯುವ ಸಂಸತ್ ಸ್ಪರ್ಧೆಗೆ ನಿಗದಿ ಪಡಿಸಿರುವ ಮಾದರಿಯಲ್ಲೇ ಸಿದ್ದಪಡಿಸತಕ್ಕದ್ದು. ಬಹುಮಾನಗಳನ್ನು ಸ್ಥಳೀಯ ಅಗತ್ಯತೆಗಳಿಗನುಗುಣವಾಗಿ ಮೊದಲ 5 ಸ್ಥಾನ ಗಳಿಸಿದವರಿಗೆ ಉತ್ತಮ ನಿರ್ವಹಣೆಗಾಗಿ ಬಹುಮಾನಗಳನ್ನು ನೀಡುವುದರೊಂದಿಗೆ, ಸ್ಪರ್ಧಿಗಳಿಗೆ ಬಹುಮಾನ ನೀಡುವುದನ್ನು ತೀರ್ಪುಗಾರರ ಸಮಿತಿಯು ನಿರ್ಧರಿಸಬಹುದು. ಜಿಲ್ಲಾ ಮಟ್ಟದ ಸ್ಪರ್ಧಿಗಳಿಗೆ/ಶಾಲೆಗಳಿಗೆ ಅನುಬಂಧ iv (ಪುಟ 24 ನೋಡಿ) ಮತ್ತು v (ಪುಟ 25 ನೋಡಿ)ರಲ್ಲಿ ನಿಗದಿ ಪಡಿಸಿದ ರೀತ್ಯಾ ಪ್ರಮಾಣ ಪತ್ರಗಳನ್ನು ಸ್ಪರ್ಧೆಯ ಸ್ಥಳದಲ್ಲೇ ನೀಡಲಾಗುವುದು.

# ಅನುಬಂಧ – ಎ

## ಮಾದರಿ ಕಾರ್ಯಕ್ರಮಗಳು

| | | |
|---|---|---|
| ಪೂರ್ವಾಹ್ನ | 11.00 ರಿಂದ 11.30 ರವರೆಗೆ | ಉದ್ಘಾಟನೆ |
| | 11.30 ರಿಂದ 11.45 ರವರೆಗೆ | ಆಸನಗಳ ಜೋಡಣೆ ಇತ್ಯಾದಿ |
| | 11.45 ರಿಂದ ಅ. 1.00 ರವರೆಗೆ | ಮೊದಲನೆ ತಂಡದ ಪ್ರದರ್ಶನ |
| ಅಪರಾಹ್ನ | 1.00 ರಿಂದ 2.00 ರವರೆಗೆ | ಊಟದ ವಿರಾಮ |
| | 2.00 ರಿಂದ 3.15 ರವರೆಗೆ | ಎರಡನೆ ತಂಡದ ಪ್ರದರ್ಶನ |
| | 3.15 ರಿಂದ 3.45 ರವರೆಗೆ | ಫಲಿತಾಂಶ ನಿರ್ಣಯ |
| | 3.45 ರಿಂದ 4.14 ರವರೆಗೆ | ಮುಕ್ತಾಯ |

## ಅನುಬಂಧ – ಬಿ

## ಭಾಗ – 1 – ಕಡ್ಡಾಯ ವಿಷಯಗಳ ಪಟ್ಟಿ

1. ಸಭಾಧ್ಯಕ್ಷರ ಆಗಮನ
2. ಪ್ರಶ್ನೋತ್ತರ ವೇಳೆ
3. ಗಮನ ಸೆಳೆಯುವ ಸೂಚನೆಗಳು
4. ವಿಧೇಯಕಗಳ ಮಂಡನೆ
5. ಅಲ್ಪ ಕಾಲಾವಧಿ ಚರ್ಚೆ

## ಭಾಗ –2 ಐಚ್ಛಿಕ ವಿಷಯಗಳ ಪಟ್ಟಿ

1. ಸಂತಾಪ ಸೂಚನೆಗಳು
2. ಶೂನ್ಯ ವೇಳೆ
3. ವಿಧೇಯಕಗಳ ಪರಿಶೀಲನೆ / ಅಂಗೀಕಾರ
4. ಇಲಾಖಾ ಬೇಡಿಕೆಗಳ ಮೇಲಿನ ಚರ್ಚೆ
5. ಖಾಸಗೀ ಕಲಾಪಗಳು (ನಿರ್ಣಯ ಅಥವಾ ಖಾಸಗೀ ವಿಧೇಯಕದ ಮಂಡನೆ ಇತ್ಯಾದಿ)

ಸ್ಪರ್ಧೆಯ ಬಗ್ಗೆ ಸ್ಪಷ್ಟೀಕರಣ ಅಗತ್ಯತೆ ಇದ್ದಲ್ಲಿ ನಿರ್ದೇಶಕರು, ಡಿ.ಎಸ್.ಇ.ಆರ್.ಟಿ., 100 ಅಡಿ ರಿಂಗ್‌ರಸ್ತೆ, ಹೊಸಕೆರೆ ಹಳ್ಳಿ, ಬೆಂಗಳೂರು ಅಥವಾ ಕಾರ್ಯದರ್ಶಿ, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ, ವಿಧಾನಸೌಧ, ಬೆಂಗಳೂರು ಇವರನ್ನು ಸಂಪರ್ಕಿಸಬಹುದು.

# ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ ಭಾಗವಹಿಸಿದ ಶಾಲೆಗೆ ಹಾಗೂ ಬಹುಮಾನಿತರಿಗೆ ನೀಡುವ ಪ್ರಮಾಣ ಪತ್ರಗಳ ನಮೂನೆ

ಅನುಬಂಧ- IV

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ

**ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ 2014 –2015**

-------------------------------ಶಾಲೆಯ ---------------------

ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ ------------------------------ಕರ್ನಾಟಕ ಸರ್ಕಾರದ ಸಂಸದೀಚು ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆಯ ಸಹಭಾಗಿತ್ವದಲ್ಲಿ 2014 – 2015 ನೇ ಶೈಕ್ಷಣಿಕ ವರ್ಷದಲ್ಲಿ ನಡೆಸಿದ **"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯಲ್ಲಿ"** ಭಾಗವಹಿಸಿದ್ದಾರೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಸ್ಥಳ:__________ | ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ದಿನಾಂಕ:__________ | ಸಾರ್ವಜನಿಕ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳು ಮತ್ತು |
| | ________________ ಜಿಲ್ಲೆ | ಶಾಸನ ರಚನೆ ಇಲಾಖೆ |

ಅನುಬಂಧ–V

ಕರ್ನಾಟಕ ಸರ್ಕಾರ

ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಹಾಗೂ ಸಾರ್ವಜನಿಕ ಶಿಕ್ಷಣ ಇಲಾಖೆ

**"ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ" 2014 –2015**

------------------------------ಶಾಲೆಯ-----------------------

---ತರಗತಿಯ ವಿದ್ಯಾರ್ಥಿ/ವಿದ್ಯಾರ್ಥಿನಿಯಾದ------------------------------------- –ಅವರಿಗೆ 2014 – 2015 ನೇ ಶೈಕ್ಷಣಿಕ ವರ್ಷದಲ್ಲಿ ಕರ್ನಾಟಕ ಸರ್ಕಾರದ ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಇಲಾಖೆ ಮತ್ತು ಸಾರ್ವಜನಿಕ ಶಿಕ್ಷಣ ಇಲಾಖೆ ಇವರ ಸಹಭಾಗಿತ್ವದಲ್ಲಿ ನಡೆಸಲಾದ "ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆ"ಯಲ್ಲಿ ಅತ್ಯುತ್ತಮ ಸಾಧನೆಗೆ –---------------------------- ಬಹುಮಾನವನ್ನು ನೀಡಲಾಗಿದೆಯೆಂದು ಪ್ರಮಾಣೀಕರಿಸಲಾಗಿದೆ.

| | | |
|---|---|---|
| ಸ್ಥಳ:__________ | ಉಪ ನಿರ್ದೇಶಕರು | ಸಕ್ಷಮ ಪ್ರಾಧಿಕಾರಿ |
| ದಿನಾಂಕ:__________ | ಸಾರ್ವಜನಿಕ ಶಿಕ್ಷಣ ಇಲಾಖೆ | ಸಂಸದೀಯ ವ್ಯವಹಾರಗಳು ಮತ್ತು |
| | ________________ ಜಿಲ್ಲೆ | ಶಾಸನ ರಚನೆ ಇಲಾಖೆ |

## ಕರ್ನಾಟಕ ರಾಜ್ಯದ ಪ್ರೌಢ ಶಾಲೆಗಳಲ್ಲಿ ವ್ಯಾಸಂಗ ಮಾಡುತ್ತಿರುವ ವಿದ್ಯಾರ್ಥಿಗಳಿಗೆ ನಡೆಸುವ ಯುವ ಸಂಸತ್ ಸ್ಪರ್ಧೆಗೆ ಪೂರಕವಾಗಿ ಸಂಸತ್ ಕಾರ್ಯಕಲಾಪಗಳ ಬಗೆಗೆ ಕೆಲವು ವಿಶೇಷ ಮಾಹಿತಿಗಳು:

ಅಖಿಲ ಭಾರತ ಮುಖ್ಯ ಸಚೇತಕರ ಸಮ್ಮೇಳನವು ಮಾಡಿರುವ ಶಿಫಾರಸ್ಸುಗಳನ್ವಯ ಪ್ರಜಾಸತ್ತಾತ್ಮಕ ವ್ಯವಸ್ಥೆಯ ಬಗ್ಗೆ ಸಂಸತ್ತು, ವಿಧಾನ ಮಂಡಲದ ಅಧಿವೇಶನಗಳ ಬಗ್ಗೆ ಪ್ರೌಢ ಶಾಲಾ ವಿದ್ಯಾರ್ಥಿಗಳಿಗೆ ಮಾಹಿತಿ ನೀಡುವ ಉದ್ದೇಶದಿಂದ ಕರ್ನಾಟಕ ರಾಜ್ಯದಲ್ಲಿ "ಯುವ ಸಂಸತ್" ಸ್ಪರ್ಧೆಗಳನ್ನು ಜಿಲ್ಲಾ ಹಾಗೂ ರಾಜ್ಯ ಮಟ್ಟದಲ್ಲಿ ನಡೆಸಲಾಗುತ್ತಿದೆ. ಪ್ರಸ್ತುತ ಶೈಕ್ಷಣಿಕ ವರ್ಷದಲ್ಲಿ "ವಿಧಾನ ಸಭೆಯ" ಮಾದರಿ ಅಧಿವೇಶನವನ್ನು ನಡೆಸುವ ಕಾರ್ಯಕ್ರಮವನ್ನು ರೂಪಿಸಲಾಗಿದೆ.

**2. ವಿಧಾನ ಸಭೆಯ ರಚನೆ.–** ಭಾರತ ಸಂವಿಧಾನದ 170ನೇ ಅನುಚ್ಛೇದದ ಅನ್ವಯ ಕರ್ನಾಟಕ ರಾಜ್ಯದ ವಿಧಾನ ಸಭೆಯಲ್ಲಿ 224 ಚುನಾಯಿತ ಸದಸ್ಯರು ಹಾಗೂ ನಾಮನಿರ್ದೇಶಿತ ಒಬ್ಬ ಆಂಗ್ಲೋ ಇಂಡಿಯನ್ ಸದಸ್ಯರಿದ್ದಾರೆ.

**3. ವಿಧಾನ ಸಭೆಯ ಕಾರ್ಯಕಲಾಪಗಳು.–** ವಿಧಾನ ಸಭೆಯ ಕಾರ್ಯಕಲಾಪಗಳ ಪಟ್ಟಿಯನ್ನು ವಿಧಾನ ಸಭಾಧ್ಯಕ್ಷರ ಅನುಮೋದನೆಯೊಂದಿಗೆ ವಿಧಾನ ಸಭಾ ಸಚಿವಾಲಯದ ಕಾರ್ಯದರ್ಶಿಯವರು ಹೊರಡಿಸುವರು. ಕಾರ್ಯಕಲಾಪಗಳ ಪಟ್ಟಿಯಲ್ಲಿ,–

(ಅ) ಸಂತಾಪ ಸೂಚನೆ

(ಆ) ಪ್ರಶ್ನೋತ್ತರ

(ಇ) ವರದಿಗಳನ್ನು ಒಪ್ಪಿಸುವುದು

(ಈ) ಗಮನ ಸೆಳೆಯುವ ಸೂಚನೆಗಳು

(ಉ) ವಿತ್ತೀಯ ಕಾರ್ಯಕಲಾಪಗಳು

(ಊ) ಪೂರಕ ಕಾರ್ಯಕಲಾಪಗಳ ಪಟ್ಟಿ

(ಋ) ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವಗಳ ಜರೂರು ವಿಷಯದ ಚರ್ಚೆ.

(ಎ) ಶಾಸನ ರಚನೆ.

ಹಾಗೂ ಇನ್ನಿತರೆ ವಿಷಯಗಳನ್ನು ಸೇರಿಸಬಹುದು. ಪ್ರಸ್ತುತ ಅಧಿವೇಶನದ ಮಾದರಿ ಕಾರ್ಯಕಲಾಪಗಳ ಪಟ್ಟಿಯನ್ನು ಅನುಬಂಧ –vi ರಲ್ಲಿ ಒದಗಿಸಲಾಗಿದೆ.

**4. ಸಂತಾಪ ಸೂಚನೆಗಳು:** ಅಧಿವೇಶನ ಪ್ರಾರಂಭವಾದ ದಿನದ ಮೊದಲಿಗೆ ಅಗಲಿದ ಗಣ್ಯ ವ್ಯಕ್ತಿಗಳಿಗೆ ಸಭಾಧ್ಯಕ್ಷರಿಂದ ಸಂತಾಪ ಸೂಚನೆ. ಸಂತಾಪ ಸೂಚನೆಯನ್ನು ಪುಟ ಸಂಖ್ಯೆ 36–39ರಲ್ಲಿ ಒದಗಿಸಲಾಗಿದೆ.

**5. ಪ್ರಶ್ನೋತ್ತರಗಳು.–** (1) ಪ್ರತಿಯೊಂದು ದಿನದ ಅಧಿವೇಶನದ ಮೊದಲನೆಯ ಒಂದು ಗಂಟೆಯ ಅವಧಿಯನ್ನು ಪ್ರಶ್ನೆ ಕೇಳುವುದಕ್ಕೆ ಮತ್ತು ಉತ್ತರಿಸುವುದಕ್ಕೆ ಮೀಸಲಿಡಲಾಗುವುದು. ಸದರಿ ವಿಷಯದಲ್ಲಿ ಒಂದು ಉಪ ಪ್ರಶ್ನೆಗೆ ಅವಕಾಶವಿರುತ್ತದೆ.

(2) ಪ್ರಶ್ನೆಯನ್ನು ಕೇಳಲಿಚ್ಛಿಸುವ ಸದಸ್ಯರು 15 ದಿನಗಳಿಗೆ ಕಡಿಮೆ ಇಲ್ಲದೆ ಪ್ರಶ್ನೆಯ ಬಗ್ಗೆ ಸೂಚನಾ ಪತ್ರವನ್ನು ವಿಧಾನ ಸಭೆಯ ಕಾರ್ಯದರ್ಶಿಯವರಿಗೆ ಕೊಡಬೇಕು. ಪ್ರಶ್ನೆಯು ಲಿಖಿತ ರೂಪದಲ್ಲಿರಬೇಕು ಹಾಗೂ ಅದರಲ್ಲಿ ಯಾರಿಗೆ ಪ್ರಶ್ನೆ ಕೇಳಲಾಗಿದೆಯೋ ಆ ಸಚಿವರ ಪದನಾಮವನ್ನು ನಮೂದಿಸಬೇಕು.

(3) ಪ್ರಶ್ನೆಗಳನ್ನು,–

(ಅ) ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳು; ಹಾಗೂ

(ಆ) ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳು

ಎಂದು ವಿಂಗಡಿಸಲಾಗಿದೆ.

(4) ಪ್ರಶ್ನೆ ಕೇಳುವ ಬಗ್ಗೆ ಕೆಳಕಂಡ ಕೆಲವು ಪ್ರಮುಖ ಷರತ್ತುಗಳಿವೆ,–

(ಎ) ಒಂದು ಪ್ರಶ್ನೆಯು ಒಂದೇ ವಿಚಾರಕ್ಕೆ ಸಂಬಂಧ ಪಟ್ಟಿರಬೇಕು.

(ಬಿ) ಪ್ರಶ್ನೆಯು ಅರ್ಥವಾಗುವಂತೆ ಇರಬೇಕು.

(ಸಿ) ಪ್ರಶ್ನೆಯು ಸಾಮಾನ್ಯವಾಗಿ 150 ಪದಗಳನ್ನು ಮೀರತಕ್ಕುದ್ದಲ್ಲ.

(ಡಿ) ಸರ್ಕಾರಕ್ಕೆ ಸಂಬಂಧಪಡದ ಯಾವುದೇ ವಿಷಯಗಳ ಬಗ್ಗೆ ಪ್ರಶ್ನೆ ಕೇಳತಕ್ಕದ್ದಲ್ಲ.

(ಇ) ಕ್ಷುಲ್ಲಕ, ಸುಲಭವಾಗಿ ದೊರೆಯುವ ಮಾಹಿತಿಗಳನ್ನು ಕೇಳತಕ್ಕದ್ದಲ್ಲ.

(ಎಫ್) ನ್ಯಾಯಾಲಯದಲ್ಲಿ ವಿಚಾರಣೆಯಲ್ಲಿರುವ ವಿಷಯವನ್ನು ಪ್ರಶ್ನಿಸುವಂತಿಲ್ಲ. ಇತ್ಯಾದಿ.

(5) ವಿದ್ಯಾರ್ಥಿಗಳ ಉಪಯೋಗಕ್ಕಾಗಿ, ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಕೆಲವು ಮಾದರಿಗಳನ್ನು ಪುಟ ಸಂಖ್ಯೆ 50–74ರಲ್ಲಿ ಒದಗಿಸಲಾಗಿದೆ.

**6. ಗಮನ ಸೆಳೆಯುವ ಸೂಚನೆಗಳು.–** (1) ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಮಂತ್ರಿಯವರ ಗಮನಕ್ಕೆ ತರಬಹುದು. ಮಂತ್ರಿಯವರು ಸಂಕ್ಷಿಪ್ತವಾಗಿ ಒಂದು ಹೇಳಿಕೆಯನ್ನು ಕೊಡಬಹುದು ಅಥವಾ ಇನ್ನೊಂದು ದಿನ ತಮ್ಮ ಹೇಳಿಕೆ ನೀಡಲು ಕಾಲಾವಕಾಶ ಕೋರಬಹುದು.

(2) (ಅ) ಗಮನ ಸೆಳೆಯುವ ಸೂಚನೆಯನ್ನು ಒಂದಕ್ಕಿಂತ ಹೆಚ್ಚು ಸದಸ್ಯರು ಸಹಿ ಮಾಡಿದ್ದಲ್ಲಿ, ಕಾರ್ಯಕಲಾಪಗಳ ಪಟ್ಟಿಯಲ್ಲಿ ನಮೂದಿಸಿರುವ ಸದಸ್ಯರು ಗಮನ ಸೆಳೆಯಬಹುದು.

(ಆ) ಗಮನ ಸೆಳೆಯುವ ಕಾರ್ಯಕಲಾಪದಲ್ಲಿ ಚರ್ಚೆಗೆ ಅವಕಾಶವಿಲ್ಲ. ಆದರೆ ಸಭಾಧ್ಯಕ್ಷರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೋರಬಹುದು. ಗಮನ ಸೆಳೆಯುವ ಸೂಚನೆಗಳ ಮಾದರಿಗಳನ್ನು ಪುಟ ಸಂಖ್ಯೆ 75–79ರಲ್ಲಿ ನೀಡಲಾಗಿದೆ.

7. **ಸಾರ್ವಜನಿಕ ಮಹತ್ವದ ಜರೂರು ವಿಷಯದ ಅಲ್ಪ ಕಾಲಾವಧಿ ಚರ್ಚೆ.–** ನಿಯಮ 69ರ ಅಡಿಯಲ್ಲಿ ಸಾರ್ವಜನಿಕ ಮಹತ್ವದ ಒಂದು ಜರೂರು ವಿಷಯದ ಮೇಲೆ ಚರ್ಚೆ ನಡೆಸಲು ಅಪೇಕ್ಷಿಸುವ ಸದಸ್ಯರು ಬರಹದ ಮೂಲಕ ಸೂಚನೆಯನ್ನು ವಿವರಣಾತ್ಮಕ ಟಿಪ್ಪಣಿಯೊಂದಿಗೆ ಕಾರ್ಯದರ್ಶಿಯವರಿಗೆ ಕೊಡಬಹುದು. ಆ ಸೂಚನೆಗೆ ಕನಿಷ್ಟ ಬೇರೆ ಇಬ್ಬರು ಸದಸ್ಯರು ತಮ್ಮ ಸಹಿಗಳನ್ನು ಹಾಕುವುದರ ಮೂಲಕ ಬೆಂಬಲಿಸಲ್ಪಟ್ಟಿರಬೇಕು. ನಿಯಮದ ಅಡಿಯಲ್ಲಿ ಸೂಚನೆಯನ್ನು ಕೊಟ್ಟಿರುವ ಸದಸ್ಯನು ಒಂದು ಸಂಕ್ಷಿಪ್ತ ಹೇಳಿಕೆಯನ್ನು ನೀಡಬಹುದು ಮತ್ತು ಮಂತ್ರಿಗಳು ಸಂಕ್ಷಿಪ್ತವಾಗಿ ಉತ್ತರ ನೀಡಬೇಕು. ಅಧ್ಯಕ್ಷರ ಅನುಮತಿ ಪಡೆದ ಸದಸ್ಯರು ಚರ್ಚೆಯಲ್ಲಿ ಭಾಗವಹಿಸಬಹುದು. ಈ ನಿಯಮದಡಿ ನೀಡುವ ಮಾದರಿ ಸೂಚನೆಯನ್ನು ಪುಟ ಸಂಖ್ಯೆ 82–83 ರಲ್ಲಿ ಒದಗಿಸಿದೆ.

8. **ಶಾಸನ ರಚನೆ.–** (1) ಶಾಸನ ರಚನೆಯು ಶಾಸಕರ ಪ್ರಮುಖ ಅಧಿಕಾರ ಮತ್ತು ಕರ್ತವ್ಯಗಳಲ್ಲಿ ಒಂದು. ಭಾರತ ಸಂವಿಧಾನದ ಏಳನೇ ಅನುಸೂಚಿಯ ಎರಡನೇ ಪಟ್ಟಿ (ರಾಜ್ಯ ಪಟ್ಟಿ) ಹಾಗೂ ಮೂರನೇ ಪಟ್ಟಿ (ಸಂಯುಕ್ತ ಪಟ್ಟಿ) ಯಲ್ಲಿರುವ ವಿಷಯಗಳ ಬಗ್ಗೆ, ವಿಧಾನ ಸಭೆಯು ಶಾಸನಗಳನ್ನು ರಚಿಸಲು ಅಧಿಕಾರ ಹೊಂದಿದೆ.

(2) ಶಾಸನ ರಚನೆಯಲ್ಲಿ,–

(ಅ) ವಿಧೇಯಕವನ್ನು ಮಂಡಿಸುವುದು;

(ಆ) ವಿಧೇಯಕವನ್ನು ಪರ್ಯಾಲೋಚಿಸುವುದು; ಹಾಗೂ

(ಇ) ವಿಧೇಯಕವನ್ನು ಅಂಗೀಕರಿಸುವುದು.

ಈ ರೀತಿ ಮೂರು ಹಂತಗಳಿವೆ.

(3) ವಿಧೇಯಕಗಳನ್ನು ಸರ್ಕಾರವು ಸಂಬಂಧಪಟ್ಟ ಸಚಿವರ ಮುಖಾಂತರ ವಿಧಾನ ಸಭೆಯಲ್ಲಿ ಮಂಡಿಸುವುದು. ವಿಧೇಯಕದ ಪರ್ಯಾಲೋಚನೆಯಲ್ಲಿ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರು ಸಲಹೆಗಳನ್ನು ನೀಡಬಹುದು ಹಾಗೂ ತಿದ್ದುಪಡಿಗಳನ್ನು ಸೂಚಿಸಬಹುದು.

ಪರ್ಯಾಲೋಚನೆಯ ನಂತರ ವಿಧೇಯಕವನ್ನು ಖಂಡ ಖಂಡವಾಗಿ (clause by clause) ಮತಕ್ಕೆ ಹಾಕಲಾಗುವುದು ಹಾಗೂ ಅಂಗೀಕರಿಸಲಾಗುವುದು.

(4) ವಿಧೇಯಕದ ಮಾದರಿಯನ್ನು ಪುಟ ಸಂಖ್ಯೆ 83–101ರಲ್ಲಿ ಕೊಡಲಾಗಿದೆ.

## ಅನುಬಂಧ – VI

**ಕರ್ನಾಟಕ ವಿಧಾನ ಸಭೆಯ ಮಾದರಿ ಕಾರ್ಯಕಲಾಪಗಳ ಪಟ್ಟಿ**

**ಮಾದರಿ – 1**

**ಕರ್ನಾಟಕ ವಿಧಾನಸಭೆ**
ಹದಿನಾಲ್ಕನೇ ವಿಧಾನಸಭೆ
(ಮೂರನೇ ಅಧಿವೇಶನ)
**ಕಾರ್ಯಕಲಾಪಗಳ ಪಟ್ಟಿ**
(ಸಮಯ: ಬೆಳಿಗ್ಗೆ 11.00 ಗಂಟೆಗೆ)
----

**01. ಪ್ರಶ್ನೋತ್ತರ**

**ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಎರಡನೇ ಪಟ್ಟಿ**

**ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಎರಡನೇ ಪಟ್ಟಿ**

**02.ಚುನಾವಣಾ ಪ್ರಸ್ತಾವ**

**ಶ್ರೀ.ಟಿ.ಬಿ.ಜಯಚಂದ್ರ (ಕಾನೂನು, ನ್ಯಾಯ ಮತ್ತು ಮಾನವ ಹಕ್ಕುಗಳು, ಸಂಸದೀಯ ವ್ಯವಹಾರಗಳು ಮತ್ತು ಶಾಸನ ರಚನೆ ಹಾಗೂ ಪಶುಸಂಗೋಪನಡೆ ಸಚಿವರು) ಅವರು :-**

ಕರ್ನಾಟಕ ರಾಜ್ಯ ಡಾ|| ಗಂಗೂಬಾಯಿ ಹಾನಗಲ್ ಸಂಗೀತ ಮತ್ತು ಪ್ರದರ್ಶಕ ಕಲೆಗಳ ವಿಶ್ವವಿದ್ಯಾಲಯದ ಪ್ರಶಾಸನ ಸಭೆಗೆ ಒಬ್ಬರು ಸದಸ್ಯರನ್ನು ಚುನಾಯಿಸಬೇಕೆಂದು ಸೂಚಿಸುವುದು.

**03.ಶಾಸನ ರಚನೆ**

<u>ವಿಧೇಯಕಗಳನ್ನು ಮಂಡಿಸುವುದು</u>

**1. ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ) ವಿಧೇಯಕ, 2014 ಶ್ರೀ.ಆರ್.ವಿ ದೇಶಪಾಂಡೆ (ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು) ಅವರು:-**

ಅ) 2014ನೇ ಸಾಲಿನ ಕರ್ನಾಟಕ ಖಾಸಗಿ ಅನುದಾನಿತ ಶೈಕ್ಷಣಿಕ ಸಂಸ್ಥೆಗಳ ಸಿಬ್ಬಂದಿಗಳ (ವೇತನ, ನಿವೃತ್ತಿ ವೇತನ ಮತ್ತು ಇತರ ಸೌಲಭ್ಯಗಳ ನಿಯಂತ್ರಣ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು;

ಆ) ಹಾಗೂ ವಿಧೇಯಕವನ್ನು ಮಂಡಿಸುವುದು.

**2. ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕ, 2014 ಶ್ರೀ.ಎಸ್.ಆರ್.ಪಾಟೀಲ್ (ಯೋಜನೆ ಮತ್ತು ಸಾಂಖ್ಯಿಕ, ಮಾಹಿತಿ ತಂತ್ರಜ್ಞಾನ ಮತ್ತು ಜೈವಿಕ ತಂತ್ರಜ್ಞಾನ ಹಾಗೂ ವಿಜ್ಞಾನ ಮತ್ತು ತಂತ್ರಜ್ಞಾನ ಸಚಿವರು) ಅವರು:-**

ಅ) 2014ನೇ ಸಾಲಿನ ಹೈದರಾಬಾದ್-ಕರ್ನಾಟಕ ಪ್ರದೇಶ ಅಭಿವೃದ್ಧಿ ಮಂಡಳಿ ನಿರಸನ ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು;

ಆ) ಹಾಗೂ ವಿಧೇಯಕವನ್ನು ಮಂಡಿಸುವುದು.

**3. ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕ, 2014**
**ಶ್ರೀ ಸತೀಶ್ ಲಕ್ಷ್ಮಣರಾವ್ ಜಾರಕಿಹೊಳಿ (ಅಬಕಾರಿ ಸಚಿವರು) ಅವರು:-**

ಅ) 2014ನೇ ಸಾಲಿನ ಕರ್ನಾಟಕ ಅಬಕಾರಿ (ತಿದ್ದುಪಡಿ) ವಿಧೇಯಕವನ್ನು ಮಂಡಿಸಲು ಅನುಮತಿ ಕೋರುವುದು;

ಆ) ಹಾಗೂ ವಿಧೇಯಕವನ್ನು ಮಂಡಿಸುವುದು.

## 4. ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವ

ಶ್ರೀ ಬಸವರಾಜ ರಾಯರೆಡ್ಡಿಯವರು "2014ರ ಜನವರಿ 22ರಂದು ವಿಧಾನಮಂಡಲದ ಉಭಯ ಸದನಗಳ ಸದಸ್ಯರನ್ನುದ್ದೇಶಿಸಿ ದಯಪಾಲಿಸಿದ ಭಾಷಣಕ್ಕಾಗಿ ಈ ಅಧಿವೇಶನದಲ್ಲಿ ಸೇರಿರುವ ವಿಧಾನಸಭೆಯ ಸದಸ್ಯರಾದ ನಾವು ಘನತೆವೆತ್ತ ರಾಜ್ಯಪಾಲರಿಗೆ ಕೃತಜ್ಞತಾಪೂರ್ವಕವಾದ ವಂದನೆಗಳನ್ನು ಸಮರ್ಪಿಸಲು ಅಪ್ಪಣೆ ಕೋರುತ್ತೇವೆ" ಎಂದು ಸೂಚಿಸಿದ ಪ್ರಸ್ತಾಪದ ಮೇಲೆ ಚರ್ಚೆ.

## 5. ಗಮನ ಸೆಳೆಯುವ ಸೂಚನೆಗಳು

1. ಶ್ರೀ ಹೆಚ್.ಡಿ.ರೇವಣ್ಣ ಅವರು ಹೊಳೆನರಸೀಪುರ ತಾಲ್ಲೂಕು ಕಸಬಾ ಹೋಬಳಿ ದೊಡ್ಡಕಾಡನೂರು ವೃತ್ತದಲ್ಲಿ ಕಾರ್ಯನಿರ್ವಹಿಸುತ್ತದ್ದ ಗ್ರಾಮಲೆಕ್ಕಾಧಿಕಾರಿ ಭೂ ದಾಖಲೆಗಳನ್ನು ತಿದ್ದಿ ಕಾನೂನು ಬಾಹಿರವಾಗಿ ಬೇನಾಮಿ ಹೆಸರಿನಲ್ಲಿ ಸುಣ್ಣಕಲ್ಲು ಗ್ರಾಮದಲ್ಲಿ ಜಮೀನುಗಳನ್ನು ಅಕ್ರಮವಾಗಿ ಖರೀದಿಸಿರುವ ಬಗ್ಗೆ ಮಾನ್ಯ ಕಂದಾಯ ಸಚಿವರ ಗಮನ ಸೆಳೆಯುವುದು.
2. ಶ್ರೀ ಎನ್.ಚಲುವರಾಯಸ್ವಾಮಿ ಮತ್ತು ಶ್ರೀ ಹೆಚ್.ಡಿ.ರೇವಣ್ಣ ಅವರುಗಳು ಹೊಳೆನರಸೀಪುರ ತಾಲ್ಲೂಕಿನ ಪಡುವಲಹಿಪ್ಪೆ ಸಮುದಾಯ ಆಸ್ಪತ್ರೆ ಮತ್ತು ಹರದನಹಳ್ಳಿ ಪ್ರಾಥಮಿಕ ಆರೋಗ್ಯ ಕೇಂದ್ರಗಳಲ್ಲಿ ವೈದ್ಯರ ಕೊರತೆಯಿಂದ ಸಾರ್ವಜನಿಕರಿಗೆ ತೊಂದರೆಯುಂಟಾಗುತ್ತಿರುವ ಬಗ್ಗೆ ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರ ಗಮನ ಸೆಳೆಯುವುದು.
3. ಶ್ರೀ. ಹೆಚ್.ಆರ್.ಅಲಗೂರ (ರಾಜು) ಅವರು ಟಿಪ್ಪು ಸುಲ್ತಾನರ ಜನ್ಮ ದಿನೋತ್ಸವವನ್ನು ಸರ್ಕಾರಿ ರಜೆಯನ್ನಾಗಿ ಘೋಷಣೆ ಮಾಡಿ ಸರ್ಕಾರದ ವತಿಯಿಂದ ಆಚರಿಸುವ ಬಗ್ಗೆ ಮಾನ್ಯ ಮುಖ್ಯಮಂತ್ರಿಯವರ ಗಮನ ಸೆಳೆಯುವುದು.

**6. ನಿಯಮ 69ರ ಮೇರೆಗೆ ಸಾರ್ವಜನಿಕ ಮಹತ್ವದ ಜರೂರು ವಿಷಯದ ಬಗ್ಗೆ ಅಲ್ಪ ಕಾಲಾವಧಿ ಚರ್ಚೆ**

ಶ್ರೀಯುತರುಗಳಾದ ಕೆ.ಎಸ್.ಪುಟ್ಟಣ್ಣಯ್ಯ, ಬಿ.ಆರ್.ಪಾಟೀಲ್ ಮತ್ತು ಅಶೋಕ ಖೇಣಿ ಅವರುಗಳು ವಂಶವಾಹಿ ತಳಿಗಳ ಬೆರಕೆಯಿಂದಾಗಿ ಆಗುತ್ತಿರುವ ಅನಾಹುತವನ್ನು ತಪ್ಪಿಸಿ ನೈಸರ್ಗಿಕ ದೇಶಿ ತಳಿಗಳನ್ನು ಉಳಿಸಿಕೊಳ್ಳಲು ಅಗತ್ಯ ಕ್ರಮ ಕೈಗೊಳ್ಳುವ ವಿಷಯದ ಬಗ್ಗೆ ಚರ್ಚೆ.

**ಕರ್ನಾಟಕ ವಿಧಾನ ಪರಿಷತ್ತು**

**ನೂರ ಇಪ್ಪತ್ತೈದನೆಯ ಅಧಿವೇಶನ**

ಕಾರ್ಯಕಲಾಪಗಳ ಪಟ್ಟಿ

**(ಸಮಯ: ಮಧ್ಯಾಹ್ನ 12.00 ಗಂಟೆಗೆ)**

******

**01. ಸಂತಾಪ ಸೂಚನೆಗಳು**

**(15 ನಿಮಿಷಗಳ ನಂತರ ಸದನವು ಪುನ: ಸಮಾವೇಶಗೊಳ್ಳುವುದು)**

**02. ಪ್ರಶ್ನೋತ್ತರ**

ಅ) ಸದನದಲ್ಲಿ ಉತ್ತರಿಸುವ ಪ್ರಶ್ನೆಗಳು : ಒಂದನೆಯ ಪಟ್ಟಿ

ಆ) ಲಿಖಿತ ಮೂಲಕ ಉತ್ತರಿಸುವ ಪ್ರಶ್ನೆಗಳು : ಒಂದನೆಯ ಪಟ್ಟಿ

**03. ಕಾರ್ಯದರ್ಶಿಯವರ ವರದಿ**

**ಕಾರ್ಯದರ್ಶಿಯವರು: –**

ಕಳೆದ ಅಧಿವೇಶನದಲ್ಲಿ ವರದಿಯನ್ನು ಒಪ್ಪಿಸಿದ ನಂತರ ರಾಜ್ಯಪಾಲರಿಂದ ಒಪ್ಪಿಗೆ ಪಡೆದ ವಿಧೇಯಕಗಳ ಪಟ್ಟಿಯನ್ನು ಸಭೆಯಲ್ಲಿ ಮಂಡಿಸುವುದು.

**04. ಗಮನ ಸೆಳೆಯುವ ಸೂಚನೆಗಳು**

**ಅ) ಶ್ರೀಮತಿ ಮೋಟಮ್ಮ** ಅವರು ಮೂಡಿಗೆರೆ ತಾಲ್ಲೂಕಿನ ಕಳಸದಲ್ಲಿ ಕಂದಾಯ ಇಲಾಖೆಯಿಂದ ಹಕ್ಕು ಪತ್ರ ಪಡೆದು ಇನಾಂ ಜಮೀನಿನಲ್ಲಿ ಹತ್ತಾರು ವರ್ಷಗಳಿಂದ ಕೃಷಿ ಮಾಡಿಕೊಂಡು ಬಂದಿರುವ ರೈತರನ್ನು ಅರಣ್ಯ ಇಲಾಖೆಯವರು ಕೋರ್ಟ್ ಆದೇಶವಿರುವುದಾಗಿ ಒಕ್ಕಲೆಬ್ಬಿಸುತ್ತಿರುವ ಬಗ್ಗೆ **ಮಾನ್ಯ ಕಂದಾಯ ಸಚಿವರ** ಗಮನ ಸೆಳೆಯುವುದು.

ಆ) **ಶ್ರೀ ಯಂ.ಸಿ. ನಾಣಯ್ಯ** ಅವರು ಪೊಲೀಸ್ ಇಲಾಖೆಯಲ್ಲಿ ಕೆಲಸ ನಿರ್ವಹಿಸುತ್ತಿರುವ ಎಲ್ಲಾ ಸಿಬ್ಬಂದಿಗಳ ಪೈಕಿ ವಸತಿ ಗೃಹಗಳಲ್ಲಿ ವಾಸವಿರುವ ಸಿಬ್ಬಂದಿಯವರ ವೇತನ ಪಟ್ಟಿಯಲ್ಲಿ ಬಾಡಿಗೆ ಭತ್ಯೆಯನ್ನು ನಮೂದಿಸಿರುವುದಿಲ್ಲ ಹಾಗೂ ಸಾರ್ವತ್ರಿಕ ರಜಾ ದಿನಗಳ ಬದಲಿಗೆ 15/30 ದಿನಗಳ ವೇತನ ಹಾಗೂ ಪ್ರತಿ ವರ್ಷ ನೀಡುವ ಗಳಿಕೆ ರಜೆಯನ್ನು ಅರ್ಧ್ಯಪಿಸಿ ಪಡೆಯುವ ವೇತನದಲ್ಲಿಯೂ ಸಹ ಬಾಡಿಗೆ ಭತ್ಯೆಯನ್ನು ಕಟಾವು ಮಾಡುತ್ತಿರುವ ಬಗ್ಗೆ **ಮಾನ್ಯ ಗೃಹ ಸಚಿವರ** ಗಮನ ಸೆಳೆಯುವುದು.

ಇ) **ಶ್ರೀ ಕವಟಗಿಮಠ ಮಹಾಂತೇಶ ಮಲ್ಲಿಕಾರ್ಜುನ** ಅವರು ಉತ್ತರ ಕರ್ನಾಟಕದ ಪ್ರಮುಖ ನದಿಯಾಗಿರುವ ಮಲಪ್ರಭಾ ನದಿಗೆ ಕಳಸಾ ಬಂಡೂರಿ ನಾಲೆಗಳನ್ನು ಜೋಡಿಸುವ ವಿಚಾರದಲ್ಲಿ ಸಾಧಿಸಿರುವ ಪ್ರಗತಿಯ ಬಗ್ಗೆ **ಮಾನ್ಯ ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರ** ಗಮನ ಸೆಳೆಯುವುದು.

## 05. ನಿಯಮ 330ರ ಮೇರೆಗೆ

**ಶ್ರೀ ಗೋ. ಮಧುಸೂದನ್** ಅವರು ಚಾಮರಾಜನಗರ ಜಿಲ್ಲೆ ಕೊಳ್ಳೇಗಾಲ ತಾಲ್ಲೂಕು ಸತ್ತೇಗಾಲ ಇನಾಂಗ್ರಾಮದ ಸರ್ವೆ ನಂ. 1 ಮತ್ತು ಸರ್ವೆ ನಂ. 174ರ ಅರಣ್ಯ ಜಮೀನಿಗೆ ಸಂಬಂಧಿಸಿದಂತೆ ಕಾನೂನು ಬಾಹಿರ ಆದೇಶವನ್ನು ಹೊರಡಿಸಿರುವ ಬಗ್ಗೆ ಹಾಗೂ ಸಾವಿರಾರು ಎಕರೆ ಅರಣ್ಯ ಭೂಮಿ ಒತ್ತುವರಿ ಆಗಿರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ಕಂದಾಯ ಸಚಿವರು)**

## 06. ಗಮನ ಸೆಳೆಯುವ ಸೂಚನೆಗಳು

ಅ) **ಶ್ರೀ ರಾಮಚಂದ್ರಗೌಡ** ಅವರು ರಾಜ್ಯದಲ್ಲಿ ಸಣ್ಣ ಮತ್ತು ಇತರ ಎಲ್ಲಾ ಕೈಗಾರಿಕೆಗಳು ವ್ಯಾಪಾರ ಪರವಾನಗಿ ಕಾಯ್ದೆಯಡಿಯಲ್ಲಿ ಕಡ್ಡಾಯವಾಗಿ ನೋಂದಾವಣಿ ಮಾಡಬೇಕಾಗಿದ್ದು, ಈ ವ್ಯವಸ್ಥೆಯಿಂದ ಸಣ್ಣ ಕೈಗಾರಿಕೆಗಳಿಗೆ ಆಗುತ್ತಿರುವ ತೊಂದರೆಗಳ ಬಗ್ಗೆ **ಮಾನ್ಯ ಮುಖ್ಯಮಂತ್ರಿಯವರ** ಗಮನ ಸೆಳೆಯುವುದು.

ಆ) **ಶ್ರೀಮತಿ ತಾರಾ ಅನೂರಾಧ** ಅವರು ಮಹಾರಾಷ್ಟ್ರ ಸರ್ಕಾರವು ಆಡಳಿತದಲ್ಲಿ ಮರಾಠಿ ಭಾಷೆಯನ್ನು ಕಡ್ಡಾಯವಾಗಿ ಅನುಷ್ಠಾನಗೊಳಿಸಿರುವ ರೀತ್ಯಾ ರಾಜ್ಯದಲ್ಲಿ ಕನ್ನಡ ಭಾಷೆಯನ್ನು ಕಡ್ಡಾಯಗೊಳಿಸುವ ಬಗ್ಗೆ **ಮಾನ್ಯ ಮುಖ್ಯಮಂತ್ರಿಯವರ** ಗಮನ ಸೆಳೆಯುವುದು.

**03. ನಿಯಮ 330ರ ಮೇರೆಗೆ**

**ಶ್ರೀ ಡಿ.ಎಸ್. ವೀರಯ್ಯ** ಅವರು ಬೆಂಗಳೂರು ಉತ್ತರ ತಾಲ್ಲೂಕು, ಯಲಹಂಕ ಉಪನಗರ, ಡಾ:ಬಿ.ಆರ್. ಅಂಬೇಡ್ಕರ್ ನಗರದ ಕರ್ನಾಟಕ ಗೃಹ ಮಂಡಳಿಯ ಜಾಗದಲ್ಲಿ ಸುಮಾರು 35 ವರ್ಷಗಳಿಂದ ವಾಸಿಸುತ್ತಿರುವ ದಲಿತ ಕುಟುಂಬಗಳಿಗೆ ಸರ್ಕಾರವು ಹಕ್ಕುಪತ್ರಗಳನ್ನು ವಿತರಿಸದಿರುವ ಬಗ್ಗೆ ಪ್ರಸ್ತಾಪಿಸುವುದು. **(ಮಾನ್ಯ ವಸತಿ ಸಚಿವರು)**

**07. ನಿಯಮ 68ರಡಿಯಲ್ಲಿ ಸಾರ್ವಜನಿಕ ಮಹತ್ವದ ಜರೂರು ವಿಷಯದ ಮೇಲೆ ಚರ್ಚೆ**

| | |
|---|---|
| **ಶ್ರೀಯುತರುಗಳಾದ:**<br>**ಯಂ.ಸಿ.ನಾಣಯ್ಯ ಮತ್ತು**<br>**ಮರಿತಿಬ್ಬೇಗೌಡ** | ಭಾಷೆ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ಶಿಕ್ಷಣ ಸಂಸ್ಥೆಗಳಲ್ಲಿ ವಿದ್ಯಾರ್ಥಿಗಳ ಪ್ರವೇಶವನ್ನು ಶೇ% 75 ರಿಂದ 25ಕ್ಕೆ ಇಳಿಕೆ ಮಾಡಿರುವುದರಿಂದ ಭಾಷೆ ಮತ್ತು ಧಾರ್ಮಿಕ ಅಲ್ಪಸಂಖ್ಯಾತ ವರ್ಗದ ವಿದ್ಯಾರ್ಥಿಗಳ ಮತ್ತು ಆರ್.ಟಿ.ಇ. ಕಡ್ಡಾಯ ಶಿಕ್ಷಣ ಕಾಯಿದೆಯಡಿ ಪ್ರವೇಶ ಪಡೆಯುವ ವಿದ್ಯಾರ್ಥಿಗಳಿಗೆ ಅನ್ಯಾಯವುಂಟಾಗಿರುವ ಬಗ್ಗೆ ಪ್ರಸ್ತಾಪಿಸುವುದು. |

**ವಿ. ಶ್ರೀಶ್**

**ಕಾರ್ಯದರ್ಶಿ**

# ಅನುಬಂಧ-VII

## ಮಾದರಿ ಸಂತಾಪ ಸೂಚನೆಗಳು

## ಕರ್ನಾಟಕ ವಿಧಾನ ಪರಿಷತ್ತು

## 125ನೇ ಅಧಿವೇಶನ

## ಸಂತಾಪ ಸೂಚನೆ

ಮಾನ್ಯ ಸಭಾಪರಿಯವರು:-

**ಕರ್ನಾಟಕ ವಿಧಾನ ಪರಿಷತ್ತಿನ ಮಾಜಿ ಉಪ ಸಭಾಪತಿಗಳು ಹಾಗೂ ಲೋಕಸಭೆಯ ಮಾಜಿ ಉಪ ಸಭಾಧ್ಯಕ್ಷರಾದ ಶ್ರೀ ಎಸ್.ಮಲ್ಲಿಕಾರ್ಜುನಯ್ಯ, ಮಾಜಿ ಸಚಿವರು ಹಾಗೂ ಮಾಜಿ ವಿಧಾನ ಸಭಾ ಸದಸ್ಯರಾದ ಶ್ರೀ ಎ.ಕೃಷ್ಣಪ್ಪ, ನಟ, ನಿರ್ದೇಶಕರಾದ ಶ್ರೀ ಸಿ.ಆರ್.ಸಿಂಹ, ನೀರಾವರಿ ತಜ್ಞರಾದ ಡಾ:ಜಿ.ಎಸ್.ಪರಮಶಿವಯ್ಯ ಹಾಗೂ ಸಿನಿಮಾ ಛಾಯಾಗ್ರಾಹಕ ದಾದಾ ಸಾಹೇಬ್ ಪಾಲ್ಕೆ ಪುರಸ್ಕೃತ್ ಶ್ರೀ ವಿ.ಕೆ ಮೂರ್ತಿ ಅವರುಗಳು ನಿಧನರಾದುದನ್ನು ಈ ಸದನಕ್ಕೆ ತಿಳಿಸಲು ವಿಷಾದಿಸುತ್ತೇನೆ.**

<u>1. ಶ್ರೀ ಸಿ.ಆರ್.ಸಿಂಹ</u>

**ಕನ್ನಡ ಚಲನಚಿತ್ರರಂಗದ ಖ್ಯಾತ ನಟ, ನಿರ್ದೇಶಕ ಹಾಗೂ ರಂಗಭೂಮಿ ಕಲಾವಿದ ಶ್ರೀ.ಸಿ.ಆರ್. ಸಿಂಹ ಅವರು ದಿನಾಂಕ:28.02.2014ರಂದು ನಿಧನ ಹೊಂದಿರುತ್ತಾರೆ.**

1942ನೇ ಜೂನ್, 16ರಂದು ರಾಮನಗರ ಜಿಲ್ಲೆಯ ಚನ್ನಪಟ್ಟಣ ತಾಲ್ಲೂಕಿನಲ್ಲಿ ಜನಿಸಿದ ಶ್ರೀಯುತರು ಬಿ.ಎಸ್ಸಿ. ಪದವೀಧರರು. ನ್ಯಾಷನಲ್ ಕಾಲೇಜಿನಲ್ಲಿ ವಿಧ್ಯಾರ್ಥಿಯಾಗಿದ್ದಾಗಲೇ "ಮನವೆಂಬ ಮರ್ಕಟ" ನಾಟಕದ ಅಭಿನಯದಿಂದ ಗಮನ ಸೆಳೆದಿದ್ದರು. ಕಾಕನಕೋಟೆ, ತುಘಲಕ್, ಸಂಕ್ರಾತಿ ನಾಟಕಗಳಲ್ಲಿ ಅಭಿನಯಿಸಿದ್ದರು. ಶೇಕ್ಸ್‌ಪಿಯರ್‌ನ 'ಮಿಡ್ ಸಮ್ಮರ್ ನೈಟ್ಸ್ ಡ್ರೀಮ್' ಹಾಗೂ 'ಒಥೆಲೋ' ನಾಟಕಗಳನ್ನು ಕನ್ನಡಕ್ಕೆ ರೂಪಾಂತರಿಸಿದ್ದರು. 1983ರಲ್ಲಿ "ವೇದಿಕೆ" ರಂಗ ತಂಡವನ್ನು ಕಟ್ಟಿದ ಇವರು " ಟಿಪಿಕಲ್ ಟಿ.ಪಿ.ಕೈಲಾಸಂ " ಎಂಬ ನಾಟಕದಲ್ಲಿ ಏಕವ್ಯಕ್ತಿ ಪಾತ್ರವನ್ನು ನಿರ್ವಹಿಸಿದ್ದರು. ಕೈಲಾಸಂ ನಾಟಕ ಅಮೆರಿಕಾ, ಕೆನಡಾ ಹಾಗೂ ಇಂಗ್ಲೆಂಡ್‌ಗಳಲ್ಲೂ ಪ್ರದರ್ಶನ ಕಂಡು ವಿದೇಶದಲ್ಲಿ ಪ್ರದರ್ಶಿತಗೊಂಡ ಹವ್ಯಾಸಿ ತಂಡದ ಮೊದಲ ನಾಟಕ ಎಂಬ ಹೆಗ್ಗಳಿಕೆಗೆ ಪಾತ್ರವಾಯಿತು. 2010ರಲ್ಲಿ "ರಸ ಋಷಿ ಕುವೆಂಪು" ಎಂಬ ನಾಟಕವನ್ನು ಚಲನಚಿತ್ರ ತೆರೆಗೆ ತಂದು ಕುವೆಂಪು ಪಾತ್ರದಲ್ಲಿ ನಟಿಸಿದ್ದರು. ಆ ಚಿತ್ರಕ್ಕೆ ರಾಜ್ಯ ಪ್ರಶಸ್ತಿಯೂ ಸಂದಿರುತ್ತದೆ. ಶ್ರೀಯುತರು 150ಕ್ಕೂ ಹೆಚ್ಚು

ಚಲನಚಿತ್ರಗಳಲ್ಲಿ ಅಭಿನಯಿಸಿದ್ದು 'ಸಂಸ್ಕಾರ', 'ಸಂಕಲ್ಪ' 'ಬರ' ಇವುಗಳು ಪ್ರಶಸ್ತಿ ವಿಜೇತ ಚಿತ್ರಗಳು. 'ಕಾಕನಕೋಟೆ', 'ಶಿಕಾರಿ' 'ಅಶ್ವಮೇಧ', 'ಅಂಗೈಯಲ್ಲಿ ಅಪ್ಸರೆ' ಚಲನಚಿತ್ರಗಳನ್ನು ನಿರ್ದೇಶಿಸಿದ ಇವರಿಗೆ 'ಕಾಕನಕೋಟೆ' ಚಿತ್ರ ನಿರ್ದೇಶನಕ್ಕೆ ರಾಜ್ಯ ಚಲನಚಿತ್ರ ಪ್ರಶಸ್ತಿ ಲಭಿಸಿದೆ. ನಾಟಕ ಕ್ಷೇತ್ರದಲ್ಲಿನ ಜೀವಮಾನ ಸಾಧನೆಗೆ 1993ರಲ್ಲಿ ಕೇಂದ್ರ ಸಂಗೀತ ನಾಟಕ ಅಕಾಡೆಮಿ ವತಿಯಿಂದ ರಾಷ್ಟ್ರ ಪ್ರಶಸ್ತಿಯನ್ನು ಪಡೆದಿದ್ದರು. ಪತ್ರಿಕಾ ಅಂಕಣಕಾರರಾಗಿಯೂ ಜನಪ್ರಿಯರಾಗಿದ್ದ ಶ್ರೀಯುತರ ಅಂಕಣ ಬರಹಗಳು "ನಿಮ್ಮ ಸಿಮ್ಮ" ಕೃತಿ ರೂಪದಲ್ಲಿ ಪ್ರಕಟಗೊಂಡಿವೆ.

ಶ್ರೀಯುತರು ನಿಧನದಿಂದಾಗಿ ರಾಜ್ಯವು ಒಬ್ಬ ಹಿರಿಯ ರಂಗಭೂಮಿ ಕಲಾವಿದ ಹಾಗೂ ಚಲನಚಿತ್ರ ರಂಗದ ದಿಗ್ಗಜರೊಬ್ಬರನ್ನು ಕಳೆದುಕೊಂಡಂತಾಗಿದೆ.

## 2. ಡಾ:ಬಿ.ಎಸ್.ಪರಮಶಿವಯ್ಯ

ರಾಜ್ಯದ ಉನ್ನತ ಮಟ್ಟದ ನೀರಾವರಿ ತಾಂತ್ರಿಕ ಸಲಹಾ ಸಮಿತಿಯ ಅಧ್ಯಕ್ಷರು ಹಾಗೂ ನೀರಾವರಿ ತಜ್ಞ, ಬಯಲು ಸೀಮೆ ಭಗೀರಥ ಎಂದೇ ಖ್ಯಾತರಾಗಿದ್ದ ಡಾ:ಬಿ.ಎಸ್.ಪರಮಶಿವಯ್ಯ ಅವರು ದಿನಾಂಕ:11.03.2014ರಂದು ನಿಧನ ಹೊಂದಿರುತ್ತಾರೆ.

1919 ಫೆಬ್ರವರಿ, 12ರಂದು ತುಮಕೂರು ಜಿಲ್ಲೆಯ ಗುಬ್ಬಿಯಲ್ಲಿ ಜನಿಸಿದ ಶ್ರೀಯುತರು ಸಿವಿಲ್ ಇಂಜಿನಿಯರಿಂಗ್‌ನಲ್ಲಿ ಪದವೀಧರರಾಗಿದ್ದು, ನೀರಾವರಿ ಇಲಾಖೆಯಲ್ಲಿ ಕಾರ್ಯಪಾಲಕ ಎಂಜಿನಿಯರ್ ಆಗಿ ಸೇವೆ ಆರಂಭಿಸಿದ್ದರು. 1944ರಲ್ಲಿ ಸ್ವಂತ ಊರಿನಲ್ಲಿ ಸರ್ವೇಯರ್ ಆಗಿ ವೃತ್ತಿ ಆರಂಬಿಸಿ ರಾಜ್ಯದ ನಾನಾ ಭಾಗಗಳಲ್ಲಿ ಸೇವೆಯನ್ನು ಸಲ್ಲಿಸಿ 1974ರಲ್ಲಿ ಸೂಪರಿಂಟೆಂಡೆಂಟ್ ಇಂಜಿನಿಯರ್ ಆಗಿ ನಿವೃತ್ತರಾಗಿದ್ದರು. ಶ್ರೀಯುತರು ರಾಜ್ಯದ 41 ನಾನಾ ನೀರಾವರಿ ಯೋಜನೆಗಳ ಅಂದಾಜು ವರದಿಗಳನ್ನು ತಯಾರಿಸಿದ ಹೆಗ್ಗಳಿಕೆಗೆ ಪಾತ್ರರಾಗಿದ್ದರು.

ಒಂದು ಲಕ್ಷ ಎಕರೆಗೆ ನೀರುಣಿಸಿದ ಹೇಮಾವತಿ ನೀರಾವರಿ ಯೋಜನೆಯನ್ನು 7.20 ಲಕ್ಷ ಎಕರೆಗೆ ವಿಸ್ತರಿಸುವ ಯೋಜನೆ ರೂಪಿಸಿದ್ದ ಶ್ರೀಯುತರು ಪಶ್ಚಿಮಕ್ಕೆ ಹರಿದು ಸಮುದ್ರ ಸೇರುವ ಕುಮಾರಧಾರ, ನೇತ್ರಾವತಿ, ವರಾಹಿ, ಚಕ್ರ, ಕಾವೇಹಕ್ಲು, ಬೇಡ್ತಿ, ಅಘಶಾಶಿನಿ, ಶೀತಾ, ಎತ್ತಿನಹೊಳೆ ಮುಂತಾದ ನದಿಗಳ ನೀರನ್ನು ಪೂರ್ವಕ್ಕೆ ಹರಿಸುವ ಯೋಜನೆಗಳ ಬಗ್ಗೆ ಅಧ್ಯಯನ ನಡೆಸಿ ಸಮಗ್ರ

ವರದಿಯನ್ನು ಸಲ್ಲಿಸಿದ್ದರು. ಅಲ್ಲದೇ, ವರುಣಾ ನಾಲೆ, ಭದ್ರಾ ಮೇಲ್ದಂಡೆ, ತುಂಗಾ ಮೇಲ್ದಂಡೆ, ದೇವರ ಬೆಳಕೆರೆ, ಯಗಚಿ ವಾಟೆಹೊಳೆ ಸೇರಿದಂತೆ ವರದಾ ನದಿ ಪಾತ್ರದಲ್ಲೂ ಹಲವು ಮಧ್ಯಮ ನೀರಾವರಿ ಯೋಜನೆಗಳನ್ನು ರೂಪಿಸಿದ್ದರು. ಅರ್ಕಾವತಿ, ಶಿಂಶಾ, ಗೋಗರೆ ನದಿ ಪಾತ್ರದ ಹಲವು ಯೋಜನೆಗಳು, ಕಾವೇರಿ ಪಾತ್ರದಲ್ಲಿ ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗಳಲ್ಲಿ ಹಲವು ಯೋಜನೆಗಳ ಕಾರ್ಯಸಾಧು ವರದಿಗಳನ್ನು ಸರ್ಕಾರಕ್ಕೆ ಸಲ್ಲಿಸಿದರು. ಎತ್ತಿನಹೊಳೆ ಯೋಜನೆಯ ಪರಮಶಿವಯ್ಯ ವರದಿಯನ್ನು ಸರ್ಕಾರ ಒಪ್ಪಿ ಈಗಾಗಲೇ ಅದಕ್ಕೆ ಚಾಲನೆ ನೀಡಿದೆ. ರಾಜ್ಯ ಶ್ರೇಷ್ಠ ನೀರಾವರಿ ತಜ್ಞರಾಗಿದ್ದ ಶ್ರೀಯುತರಿಗೆ ರಾಜ್ಯೋತ್ಸವ ಪ್ರಶಸ್ತಿಯಲ್ಲದೆ ಇತರೆ ಹತ್ತು ಹಲವಾರು ಪ್ರಶಸ್ತಿ ಪುರಸ್ಕಾರಗಳಿಗೆ ಭಾಜನರಾಗಿದ್ದ ಶ್ರೀಯುತರು "ಬಯಲು ಸೀಮೆ ಭಗೀರಥ" ಎಂದೇ ಜನಜನಿತರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ರಾಜ್ಯ ಒಬ್ಬ ನೀರಾವರಿ ತಜ್ಞರನ್ನು ಕಳೆದುಕೊಂಡಂತಾಗಿದೆ.

## 3. ಶ್ರೀ.ವಿ.ಕೆ.ಮೂರ್ತಿ

ದಾದಾ ಸಾಹೇವ್ ಪಾಲ್ಕೆ ಪ್ರಶಸ್ತಿ ಪುರಸ್ಕೃತ ಪ್ರಸಿದ್ಧ ಛಾಯಾಗ್ರಾಹಕ ಶ್ರೀ ವಿ.ಕೆ.ಮೂರ್ತಿ ಅವರು ದಿನಾಂಕ:07.04.2014ರಂದು ನಿಧನ ಹೊಂದಿರುತ್ತಾರೆ.

1923ರ ನವೆಂಬರ್, 26ರಂದು ಮೈಸೂರಿನಲ್ಲಿ ಜನಿಸಿದ ಶ್ರೀಯುತರು ಸಿನಿಮಾಟೋಗ್ರಫಿ ಡಿಪ್ಲೋಮಾ ಪದವೀಧರರಾಗಿದ್ದು, ಅನೇಕ ನಾಟಕಗಳನ್ನು ನಿರ್ದೇಶಿಸಿ ರಂಗಪ್ರದರ್ಶನ ಮಾಡಿದ ಕೀರ್ತಿಗೆ ಭಾಜನರಾಗಿದ್ದರು. 20ನೇ ಶತಮಾನದಲ್ಲಿ ನೆರಳು ಬೆಳಕಿನ ಛಾಯಾಗ್ರಹಣಕ್ಕೆ ಹೊಸ ಭಾಷ್ಯ ಬರೆದ ಶ್ರೀಯುತರು ತಾಂತ್ರಿಕ ಕೌಶಲ್ಯವನ್ನು ಕಲೆಯ ಮಟ್ಟಕ್ಕೆ ಏರಿಸಿ ತಮ್ಮದೇ ಆದ ಪರಂಪರೆಯನ್ನು ನಿರ್ಮಿಸಿದ್ದರು. 1943ರಲ್ಲಿ ಸ್ವಾತಂತ್ರ್ಯ ಸಂಗ್ರಾಮದಲ್ಲಿ ಭಾಗವಹಿಸಿ ಸೆರೆಮನೆ ವಾಸವನ್ನು ಅನುಭವಿಸಿದ್ದರು. ಶ್ರೀಯುತರು ಹಿಂದಿಯಲ್ಲಿ ಬಾಜಿ, ಜಾಲ್, ಚೌದನಿ ಕಾ ಚಾಂದ್, ಪ್ಯಾಸಾ, ಕಾಗಜ್ ಕೀ ಪೂಲ್, ಸಾಹೇವ್ ಬೀಬಿ ಔರ್ ಗುಲಾಮ್, ಸಿಐಡಿ, ಆರ್‌ಪಾರ್, 12ಓ ಕ್ಲಾಕ್ ಹಾಗೂ ಜಿದ್ದಿ ಮುಂತಾದ ಹತ್ತು ಹಲವಾರು ಚಿತ್ರಗಳನ್ನೊಳಗೊಂಡಂತೆ ಕನ್ನಡದ ಹೂವು ಹಣ್ಣು ಚಿತ್ರಕ್ಕೆ ಛಾಯಾಗ್ರಾಹಕರಾಗಿ ಸೇವೆಯನ್ನು ಸಲ್ಲಿಸಿದ್ದ ಶ್ರೀಯುತರು ದಾದಾ ಸಾಹೇಬ್ ಪಾಲ್ಕೆ ಪ್ರಶಸ್ತಿ ಸೇರಿದಂತೆ ಇತರೆ ಹತ್ತು ಹಲವಾರು ಪ್ರಶಸ್ತಿಗಳಿಗೆ ಭಾಜನರಾಗಿದ್ದರು.

ಶ್ರೀಯುತರ ನಿಧನದಿಂದಾಗಿ ದೇಶವು ಒಬ್ಬ ಹಿರಿಯ ಛಾಯಾಗ್ರಾಹಕರನ್ನು ಕಳೆದುಕೊಂಡಂತಾಗಿದೆ.

**<u>ಸಭಾನಾಯಕರು ಮಾತನಾಡಿದ ನಂತರ:–</u>**

ಮೃತರುಗಳ ಆತ್ಮಕ್ಕೆ ಸದ್ಗತಿಯನ್ನು ಕೋರುತ್ತಾ, ಅವರ ಅಗಲಿಕೆಯ ನೋವನ್ನು ಸಹಿಸುವ ಶಕ್ತಿಯನ್ನು ಅವರ ಕುಟುಂಬ ವರ್ಗಕ್ಕೆ ಪರಮಾತ್ಮನು ಕರುಣಿಸಲೆಂದು ಪ್ರಾರ್ಥಿಸುತ್ತೇನೆ.

ಮೃತರುಗಳ ಗೌರವಾರ್ಥ ಮಾನ್ಯ ಸದಸ್ಯರುಗಳು ಎದ್ದು ನಿಂತು ಒಂದು ನಿಮಿಷ ಮೌನವನ್ನು ಆಚರಿಸಬೇಕೆಂದು ಕೇಳಿಕೊಳ್ಳುತ್ತೇನೆ.

(ಮೌನ ಆಚರಿಸಿದ ನಂತರ)

ಸದನದಲ್ಲಿ ಪ್ರಸ್ತಾಪಿಸಿದ ಸಂತಾಪ ಸೂಚನೆಯನ್ನು ಮೃತ ಗಣ್ಯರು ಕುಟುಂಬ ವರ್ಗದವರಿಗೆ ಕಳುಹಿಸಲಾಗುವುದು.

ಅನುಬಂಧ-VIII

# ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಹಾಗೂ ಲಿಖಿತ ಮೂಲಕ ಉತ್ತರಿಸುವ (ಚುಕ್ಕೆ ಗುರುತಿಲ್ಲದ) ಪ್ರಶ್ನೆಗಳ ಹಾಗೂ ಉತ್ತರಗಳ ಕೆಲವು ಮಾದರಿಗಳು, ವಿಧಾನ ಸಭೆ ಮತ್ತು ವಿಧಾನ ಪರಿಷತ್ತು

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 4380 |
| ಸದಸ್ಯರ ಹೆಸರು | : | ಶ್ರೀ.ಯೋಗೇಶ್ವರ್ .ಪಿ.(ಚನ್ನಪಟ್ಟಣ) |
| ಉತ್ತರಿಸುವ ದಿನಾಂಕ | : | |
| ಉತ್ತರಿಸುವ ಸಚಿವರು | : | ಮಾನ್ಯ ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಎಲ್ಲೆಲ್ಲಿ ಟೆಕ್ಸ್‌ಟೈಲ್ ಪಾರ್ಕ್‌ನ್ನು ನಿರ್ಮಿಸಲಾಗಿದೆ. (ಜಿಲ್ಲಾವಾರು ಮಾಹಿತಿ ನೀಡುವುದು); | ರಾಜ್ಯದ ಎರಡು ಜಿಲ್ಲೆಗಳಲ್ಲಿ ಜವಳಿ ಪಾರ್ಕ್ ನಿರ್ಮಿಸಲಾಗಿದೆ.<br>1. ದೊಡ್ಡಬಳ್ಳಾಪುರ ಇಂಟರಿಗ್ರೇಟೆಡ್ ಟೆಕ್ಸ್‌ಟೈಲ್ ಪಾರ್ಕ್, ಬೆಂಗಳೂರು ಗ್ರಾಮಾಂತರ ಜಿಲ್ಲೆ.<br>2. ಗುಲಬರ್ಗಾ ಟೆಕ್ಸ್‌ಟೈಲ್ ಪಾರ್ಕ್, ಗುಲ್ಬರ್ಗಾ ಜಿಲ್ಲೆ – ಪ್ರಗತಿಯಲ್ಲಿದೆ. |

| | | |
|---|---|---|
| ಆ) | ಟೆಕ್ಸ್‌ಟೈಲ್ ಪಾರ್ಕ್‌ನ್ನು ನಿರ್ಮಿಸಲು ಅಗತ್ಯವಿರುವ ನಿರ್ದಿಷ್ಟ ಮಾನದಂಡಗಳೇನು; | • ಟೆಕ್ಸ್‌ಟೈಲ್ ಪಾರ್ಕ್ ನಿರ್ಮಿಸಲು ಜವಳಿ – ಉದ್ದಿಮೆದಾರರು ಕಂಪನಿ ಆಕ್ಟ್ ಅನ್ವಯ ಎಸ್.ಪಿ.ವಿ. ರಚಿಸಬೇಕು.<br>• ಎಸ್.ಪಿ.ವಿ.ಕಂಪನಿ ಹೆಸರಿನಲ್ಲಿ ಕನಿಷ್ಠ 15 ಎಕರೆ ಕೆ.ಐ.ಎ.ಡಿ.ಬಿ/ ಕೆ.ಎಸ್.ಎಸ್.ಐ.ಡಿ.ಸಿ ಜಮೀನು ಅಥವಾ ಕೈಗಾರಿಕಾ ಭೂಮಿಯನ್ನು ಹೊಂದಿರಬೇಕು.<br>• ಎಸ್.ಪಿ.ವಿ. ರಚಿಸಲು ಕನಿಷ್ಠ 5 ಉದ್ಯಮಶೀಲ ಸದಸ್ಯರಿರಬೇಕು. |
| ಇ) | ರಾಮನಗರ ಜಿಲ್ಲೆಯ ವಿದ್ಯಾವಂತ ನಿರುದ್ಯೋಗಿಗಳಿಗೆ ಅನುಕೂಲವಾಗುವಂತೆ ಟೆಕ್ಸ್‌ಟೈಲ್ ಪಾರ್ಕ್ ನಿರ್ಮಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | ರಾಮನಗರ ಜಿಲ್ಲೆ ಕನಕಪುರ ತಾಲ್ಲೂಕಿನ ಸಾತನೂರು ಸಮೀಪ ಅಪೆರೆಲ್ ಪಾರ್ಕ್ ನಿರ್ಮಿಸಲು ಕೋರಿಕೆ ಬಂದಿರುತ್ತದೆ. ಆದರೆ ಕಂಪನಿ ಆಕ್ಟ್ ಅನ್ವಯ ಎಸ್.ಪಿ.ವಿ. ರಚಿಸಿಕೊಂಡು ಕಂಪನಿ ಹೆಸರಿನಲ್ಲಿ ಜಮೀನನ್ನು ಹೊಂದಿ, ಜವಳಿ ಪಾರ್ಕ್ ಸ್ಥಾಪಿಸಲು ಯಾವುದೇ ನಿರ್ದಿಷ್ಠ ಪ್ರಸ್ತಾವನೆ ಬಂದಿರುವುದಿಲ್ಲ. |
| ಈ) | ಹಾಗಿದ್ದಲ್ಲಿ, ಯಾವ ಸ್ಥಳದಲ್ಲಿ ನಿರ್ಮಿಸಲಾಗುವುದು? | ಅನ್ವಯಿಸುವುದಿಲ್ಲ. |

ಸಂ.ವಾಕೈ 161 ಜಕೈಇ 2014

**(ಬಾಬುರಾವ್ ಚಿಂಚಸೂರ)**

ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 3036 |
| ಸದಸ್ಯರ ಹೆಸರು | : | ಶ್ರೀ. ರಾಜೀವ್.ಪಿ. |
| ಉತ್ತರಿಸುವ ದಿನಾಂಕ | : | |
| ಉತ್ತರಿಸುವ ಸಚಿವರು | : | ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಕಳೆದ ಹತ್ತು ವರ್ಷಗಳಿಂದ ಕ್ಯಾನ್ಸರ್‌ಗೆ ತುತ್ತಾಗದವರ ಸಂಖ್ಯೆ ಎಷ್ಟು (ಜಿಲ್ಲಾವಾರು ಮಾಹಿತಿ ನೀಡುವುದು): | ಕಳೆದ ಹತ್ತು ವರ್ಷಗಳಲ್ಲಿ ಕ್ಯಾನ್ಸರ್‌ಗೆ ತುತ್ತಾದವರ ಸಂಖ್ಯೆಯನ್ನು ಅನುಬಂಧದಲ್ಲಿ ತಿಳಿಸಿದೆ. |
| ಆ) | ರಾಜ್ಯದಲ್ಲಿ ಚಿಕಿತ್ಸೆ ಪಡೆಯುತ್ತಿರುವವರ ಸಂಖ್ಯೆ ಎಷ್ಟು; ಗಡಿ ಭಾಗದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮತ್ತು ಪಡೆದಿರುವವರ ಸಂಖ್ಯೆ ಎಷ್ಟು | ಕರ್ನಾಟಕದಲ್ಲಿ ಸುಮಾರು 55,000 ಹೊಸ ಕ್ಯಾನ್ಸರ್ ರೋಗಿಗಳು ಹಾಗೂ 2,00,000ಕ್ಕೂ ಹೆಚ್ಚು (ಹೊಸ+ಹಳೆಯ ರೋಗಿಗಳನ್ನು ಸೇರಿ) ರೋಗಿಗಳು ಚಿಕಿತ್ಸೆ ಪಡೆಯುತ್ತಿದ್ದಾರೆಂದು ಅಂದಾಜಿಸಲಾಗಿದೆ.<br>ಗಡಿ ಭಾಗದ ಮಹಾರಾಷ್ಟ್ರ ಮತ್ತು ಆಂಧ್ರಪ್ರದೇಶದಲ್ಲಿ ಖಾಸಗಿ ಆಸ್ಪತ್ರೆಗಳಲ್ಲಿ ಚಿಕಿತ್ಸೆ ಪಡೆಯುತ್ತಿರುವ ಮತ್ತು ಪಡೆದಿರುವವರ ಸಂಖ್ಯೆಯ ಬಗ್ಗೆ ಮಾಹಿತಿ ಇರುವುದಿಲ್ಲ. |

| | | |
|---|---|---|
| ಇ) | ಈ ಪ್ರಮಾಣದಲ್ಲಿ ಜನರು ಕ್ಯಾನ್ಸರ್‌ಗೆ ಬಲಿಯಾಗಲು ಕಾರಣವೇನು; | ನಮ್ಮ ರಾಜ್ಯದಲ್ಲಿ ಶೇ.40ಕ್ಕೂ ಹೆಚ್ಚು ಕ್ಯಾನ್ಸರ್ ಪ್ರಕರಣಗಳು ತಂಬಾಕು ಉಪಯೋಗಿಸುವವರಲ್ಲಿ ಉಂಟಾಗಿರುತ್ತದೆ. ಒಟ್ಟಿನಲ್ಲಿ ಶೇ.70ರಷ್ಟು ಕ್ಯಾನ್ಸರ್ ಖಾಯಿಲೆಗಳು ಜೀವನ ಶೈಲಿಯನ್ನು ಅವಲಂಬಿಸಿರುತ್ತದೆ. ಸ್ತ್ರೀಯರಲ್ಲಿ ಶೇ.70ರಷ್ಟು ತಂಬಾಕು ಸೇವನೆ ಹಾಗೂ ಜನನಾಂಗಗಳಿಗೆ ಸಂಬಂಧಪಟ್ಟಿರುತ್ತದೆ. ಇದಲ್ಲದೇ ಆಹಾರ ಕ್ರಮ, ಕೆಲವು ನಿರ್ದಿಷ್ಟ ಉದ್ಯೋಗ, ದೇಹ ಶುಚಿತ್ವ, ಲೈಂಗಿಕ ಜೀವನ ಶೈಲಿಯಿಂದ ಬರಬಹುದೆಂದು ಸಂಶೋಧನೆಗಳಿಂದ ತಿಳಿದುಬಂದಿದೆ. |
| ಈ) | ಸಕ್ಕರೆ ಕಾರ್ಖಾನೆಗೆ ತ್ಯಾಜ್ಯ ವಸ್ತು ಮನುಷ್ಯ ದೇಹಕ್ಕೆ ಪ್ರವೇಶವಾದರೆ ಕ್ಯಾನ್ಸರ್ ಬರುವ ಸಾಧ್ಯತೆ ಇದೆಯೆ? | ಸಕ್ಕರೆ ಕಾರ್ಖಾನೆಯಿಂದ ಉತ್ಪಾದಿಸುವ ತ್ಯಾಜ್ಯ ವಸ್ತುಗಳಿಂದ ಕ್ಯಾನ್ಸರ್ ಬರುವ ಬಗ್ಗೆ ಇದುವರೆವಿಗೂ ಯಾವುದೇ ನಿರ್ದಿಷ್ಟವಾದ ಮಾಹಿತಿ ಲಭ್ಯವಿರುವುದಿಲ್ಲ. |

ಸಂ.ಆಕುಕ 185 ಕೆವಿಎಂ 2014

**(ಡಾ:ಶರಣಪ್ರಕಾಶ ಆರ್.ಪಾಟೀಲ)**

ವೈದ್ಯಕೀಯ ಶಿಕ್ಷಣ ರಾಜ್ಯ ಸಚಿವರು

**<u>ಕರ್ನಾಟಕ ವಿಧಾನ ಸಭೆ</u>**

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 2185 |
| ಸದಸ್ಯರ ಹೆಸರು | : | ಶ್ರೀ.ಅರವಿಂದ ಚಂದ್ರಕಾಂತ್ ಬೆಲ್ಲದ (ಹುಬ್ಬಳ್ಳಿ – ಧಾರವಾಡ ಪಶ್ಚಿಮ) |
| ಉತ್ತರಿಸುವ ದಿನಾಂಕ | : | |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಸಾರ್ವಜನಿಕ ಉದ್ದಿಮೆಗಳು ಯಾವ ಯಾವ ವರ್ಷಗಳಲ್ಲಿ ಪ್ರಾರಂಭವಾಗಿವೆ; ವಿವರಗಳನ್ನು ನೀಡುವುದು; ಇವುಗಳಿಗೆ ಸಂಬಂಧಿಸಿದ ಉದ್ದಿಮೆಗಳ ಭೂ ವಿಸ್ತಾರವೆಷ್ಟು; | ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. ಆಜಣಚುಟ ಚಿಡಿಜ ಜಿಣಡಿಟ್ಛುಜಜ ಂಟಿ ಣುಜ ಂಟಿಟಿಜಥಣಡಿಜ. |
| ಆ) | ಇಲ್ಲಿಯ ತನಕ ಪ್ರಾರಂಭವಾದ ಉದ್ದಿಮೆಗಳಲ್ಲಿ ಬೆಳವಣಿಗೆಯಾಗಿರುವ ಉದ್ದಿಮೆಗಳೆಷ್ಟು ಮತ್ತು ಸ್ಥಗಿತವಾಗಿರುವ ಉದ್ದಿಮೆಗಳೆಷ್ಟು; | ಇಲ್ಲಿಯ ತನಕ ಪ್ರಾರಂಭವಾದ ಉದ್ದಿಮೆಗಳಲ್ಲಿ 60 ಉದ್ದಿಮೆಗಳು ಬೆಳವಣಿಗೆಯಾಗಿವೆ ಮತ್ತು 14 ಉದ್ದಿಮೆಗಳು ಸ್ಥಗಿತವಾಗಿವೆ. Among the PSEs established till now, 60 are functioning as on hold and 14 have been closed. |
| ಇ) | ಸಾರ್ವಜನಿಕ ಹಾಗೂ ಖಾಸಗಿ ಉದ್ದಿಮೆಗಳನ್ನು ಪ್ರಾರಂಭಿಸುವ ಯೋಜನೆ ಸರ್ಕಾರದ ಮುಂದಿದೆಯೇ; (ವಿವರ ತಿಳಿಸುವುದು) | ಅಂತಹ ಯಾವುದೇ ಪ್ರಸ್ತಾವನೆಗಳು ಸರ್ಕಾರದ ಮುಂದಿರುವುದಿಲ್ಲ. No such proposals are with the Government. |

ಸಂ.ಸಾಉಇ 19 ಎಲ್‌ಎಸಿ 2014

**(ಡಾ. ಖಮರುಲ್ ಇಸ್ಲಾಂ)**
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಸಾರ್ವಜನಿಕ ಉದ್ದಿಮೆಗಳ ಹಾಗೂ
ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್
ಸಚಿವರು

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 3391 |
| ಸದಸ್ಯರ ಹೆಸರು | : | ಶ್ರೀ.ಮಾನಪ್ಪ ಡಿ.ವಜ್ಜಲ್ (ಲಿಂಗಸಗೂರು) |
| ಉತ್ತರಿಸುವ ದಿನಾಂಕ | : | |
| ಉತ್ತರಿಸುವ ಸಚಿವರು | : | ಮಾನ್ಯ ಪೌರಾಡಳಿತ, ಸ್ಥಳೀಯ ಸಂಸ್ಥೆಗಳು, ಸಾರ್ವಜನಿಕ ಉದ್ದಿಮೆಗಳ ಹಾಗೂ ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಜನಸಂಖ್ಯೆ ಹೆಚ್ಚಾಗಿರುವ ಪಟ್ಟಣ ಪಂಚಾಯಿತಿಗಳನ್ನು ಪುರಸಭೆಗೆ ಮೇಲ್ದರ್ಜೆಗೇರಿಸುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ; | 2011ರ ಜನಗಣತಿಯನ್ವಯ ರಾಜ್ಯದಲ್ಲಿ ಅರ್ಹವಿರುವ ಪಟ್ಟಣ ಪಂಚಾಯಿತಿಗಳಿಗೆ ಪುರಸಭೆಯನ್ನು ಸ್ಥಾಪಿಸುವ ಬಗ್ಗೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964ರನ್ವಯ ಪರಿಶೀಲಿಸಲಾಗಿರುತ್ತದೆ. |
| ಆ) | ಹಾಗಿದ್ದಲ್ಲಿ ರಾಯಚೂರು ಜಿಲ್ಲೆ, ಲಿಂಗಸಗೂರು ತಾಲ್ಲೂಕಿನ ಮುದ್ಗಲ್ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ಗಮನಕ್ಕೆ ಬಂದಿದೆಯೇ; | ರಾಯಚೂರು ಜಿಲ್ಲೆ, ಲಿಂಗಸಗೂರು ತಾಲ್ಲೂಕಿನ ಮುದ್ಗಲ್ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸುವ ಪ್ರಸ್ತಾವನೆಯು ಸರ್ಕಾರದ ಪರಿಶೀಲನೆಯಲ್ಲಿದೆ. |
| ಇ) | ಹಾಗಿದ್ದಲ್ಲಿ, ಪುರಸಭೆಯನ್ನಾಗಿ ಯಾವಾಗ ಘೋಷಿಸಲಾಗುವುದು. | 2011ರ ಜನಗಣತಿಯನ್ವಯ ಮುದ್ಗಲ್ ಪಟ್ಟಣ ಪಂಚಾಯಿತಿಯನ್ನು ಪುರಸಭೆಯನ್ನಾಗಿ ಪರಿವರ್ತಿಸಲು ಅರ್ಹವಿದ್ದು ಅದರಂತೆ ಕರ್ನಾಟಕ ಪೌರಸಭೆಗಳ ಕಾಯ್ದೆ 1964ರನ್ವಯ ಕ್ರಮ ಜರುಗಿಸಲಾಗುತ್ತಿದೆ. |

ಸಂಖ್ಯೆ: ನಅಇ/65/ಎಲ್ಎಕ್ಯೂ/2014

(ಡಾ. ಖಮರುಲ್ ಇಸ್ಲಾಂ)
ಪೌರಾಡಳಿತ, ಸ್ಥಳೀಯ ಸಂಸ್ಥೆಗಳು,
ಸಾರ್ವಜನಿಕ ಉದ್ದಿಮೆಗಳ ಹಾಗೂ
ಅಲ್ಪ ಸಂಖ್ಯಾತರ ಕಲ್ಯಾಣ ಮತ್ತು ವಕ್ಫ್ ಸಚಿವರು

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 4394 |
| ಸದಸ್ಯರ ಹೆಸರು | : | ಶ್ರೀ.ರವಿಸುಬ್ರಹ್ಮಣ್ಯ ಎಲ್.ಎ. (ಬಸವನಗುಡಿ) |
| ಉತ್ತರಿಸುವ ದಿನಾಂಕ | : | |
| ಉತ್ತರಿಸುವ ಸಚಿವರು | : | ಮುಖ್ಯಮಂತ್ರಿ |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ಪ್ರಸ್ತುತ ರಾಜ್ಯದಲ್ಲಿರುವ ಕೈಗಾರಿಕಾ ಪ್ರದೇಶಗಳೆಷ್ಟು (ಜಿಲ್ಲಾವಾರು ವಿವರ ನೀಡುವುದು); | ಕರ್ನಾಟಕ ಕೈಗಾರಿಕಾ ಪ್ರದೇಶಾಭಿವೃದ್ಧಿ ಮಂಡಳಿಯು ರಾಜ್ಯದ 28 ಜಿಲ್ಲೆಗಳಲ್ಲಿ 152 ಕೈಗಾರಿಕಾ ಪ್ರದೇಶಗಳನ್ನು ಅಭಿವೃದ್ಧಿಪಡಿಸಿದೆ. ವಿವರಗಳನ್ನು ಅನುಬಂಧ–1 ರಲ್ಲಿ ಒದಗಿಸಲಾಗಿದೆ. |
| ಆ) | 2014–15ನೇ ಸಾಲಿನಲ್ಲಿ ಹೊಸದಾಗಿ ಎಷ್ಟು ಸಣ್ಣ ಕೈಗಾರಿಕಾ ಪ್ರದೇಶಗಳನ್ನು ಗುರುತಿಸುವ ನಿಟ್ಟಿನಲ್ಲಿ ಎಂ.ಓ.ಯು. ಮಾಡಿಕೊಳ್ಳಲಾಗಿದೆ (ಸಂಪೂರ್ಣ ವಿವರ ನೀಡುವುದು); | ಸಣ್ಣ ಕೈಗಾರಿಕಾ ಪ್ರದೇಶಗಳನ್ನು ಗುರುತಿಸುವ ಸಂದರ್ಭದಲ್ಲಿ ಎಂ.ಓ.ಯು. ಸಹಿ ಮಾಡುವ ಪರಿಪಾಠ ಇರುವುದಿಲ್ಲ. |

ಸಂ.ಸಿಐ 123 ಐಎಪಿ 2014

**(ಸಿದ್ದರಾಮಯ್ಯ)**

ಮುಖ್ಯಮಂತ್ರಿ

**ಕರ್ನಾಟಕ ವಿಧಾನ ಸಭೆ**

| | | |
|---|---|---|
| ಚುಕ್ಕೆ ಗುರುತ್ತಿಲ್ಲದ ಪ್ರಶ್ನೆ ಸಂಖ್ಯೆ | : | 4703 |
| ಸದಸ್ಯರ ಹೆಸರು | : | ಶ್ರೀ ಸುಧಾಕರ್ ಲಾಲ್ ಪಿ.ಆರ್ |
| ಉತ್ತರಿಸುವ ದಿನಾಂಕ | : | |
| ಉತ್ತರಿಸುವ ಸಚಿವರು | : | ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ ಕಲ್ಯಾಣ ಸಚಿವರು |

| ಕ್ರ. ಸಂ. | ಪ್ರಶ್ನೆಗಳು | ಉತ್ತರಗಳು |
|---|---|---|
| ಅ) | ರಾಜ್ಯದಲ್ಲಿ ಪ್ರಸ್ತುತ ಸಾಲಿನಲ್ಲಿ ಜಾತಿ ಸಮೀಕ್ಷೆಯನ್ನು ನಡೆಸಲು ಉದ್ದೇಶಿಸಲಾಗಿದೆಯೇ: ಹಾಗಿದ್ದಲ್ಲಿ ಜಾತಿ ಸಮೀಕ್ಷೆಯನ್ನು ನಡೆಸಲು ಕಾರಣಗಳೇನು ಮತ್ತು ಯಾವಾಗ ಜಾತಿ ಸಮೀಕ್ಷೆಯನ್ನು ಪ್ರಾರಂಭಿಸಲಾಗುವುದು ಮತ್ತು ಯಾವ ರೀತಿ ಈ ಸಮೀಕ್ಷೆಯನ್ನು ಅನುಷ್ಠಾನಗೊಳಿಸಲಾಗುವುದು (ವಿವರ ನೀಡುವುದು) | (i) ಹೌದು<br>(ii) ಕರ್ನಾಟಕ ರಾಜ್ಯ ಹಿಂದುಳಿದ ವರ್ಗಗಳ ಆಯೋಗ ಅಧಿನಿಯಮ 1995ರ ಸೆಕ್ಷನ್ 9(1)(2)ರನುಸಾರ ಆಯೋಗದಿಂದ ಸಾಮಾಜಿಕ ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿಸಲು ಈ ಸಮೀಕ್ಷೆಯನ್ನು ನವೆಂಬರ್- ಡಿಸೆಂಬರ್ 2014ರಲ್ಲಿ ಕೈಗೊಳ್ಳಲಾಗುವುದು.<br>(iii)ದಿನಾಂಕ 17-07-2014ರ ಸರ್ಕಾರಿ ಆದೇಶದನ್ವಯ ಎಲ್ಲಾ ಜಾತಿ ಸಮುದಾಯಗಳ ಸ್ಥಿತಿಗತಿಗಳ ಬಗ್ಗೆ ಗಣತಿದಾರರು ರಾಜ್ಯದಲ್ಲಿನ ಎಲ್ಲಾ ಕುಟುಂಬಗಳಿಗೆ ಭೇಟಿ ನೀಡುವ ಮೂಲಕ ನಿಗಧಿತ ನಮೂನೆಯಲ್ಲಿ ಮಾಹಿತಿಯನ್ನು ಸಂಗ್ರಹಿಸುವರು. |
| ಆ) | ಜಾತಿ ಸಮೀಕ್ಷೆಯಿಂದ ಸರ್ಕಾರಕ್ಕೆ ತಗಲಬಹುದಾದ ಅಂದಾಜು ವೆಚ್ಚ ಎಷ್ಟು: ಈ ಜಾತಿ ಸಮೀಕ್ಷೆಯಿಂದ ಸರ್ಕಾರಕ್ಕೆ ಆಗುವ ಉಪಯೋಗಗಳೇನು (ವಿವರ ನೀಡುವುದು)? | (i) ಅಂದಾಜು ರೂ.117.00 ಕೋಟಿಗಳು<br>(ii)ಹಿಂದುಳಿದ ವರ್ಗಗಳ ಪಟ್ಟಿಯ ಪರಿಷ್ಕರಣೆಗಾಗಿ ಹಾಗೂ ಸಾಮಾಜಿಕ ಶೈಕ್ಷಣಿಕವಾಗಿ ಹಿಂದುಳಿದವರನ್ನು ಗುರುತಿ ಅಂತಹ ಸಮುದಾಯಗಳ ಅಭಿವೃದ್ಧಿಗೆ ಅಗತ್ಯ ಯೋಜನೆಗಳನ್ನು ಸರ್ಕಾರದಿಂದ ರೂಪಿಸಲು ಸಮೀಕ್ಷೆ ಸಹಾಯಕವಾಗುವುದು. |

| | | |
|---|---|---|
| ಇ) | ಜಾತಿ ಸಮೀಕ್ಷೆಯಲ್ಲಿ ಕೆಲವು ಉಪಜಾತಿಗಳನ್ನು ಕೈಬಿಟ್ಟಿರುವ ಸಂಗತಿ ಸರ್ಕಾರದ ಗಮನಕ್ಕೆ ಬಂದಿದೆಯೇ: ಹಾಗಿದ್ದಲ್ಲಿ, ಆ ಸಮೀಕ್ಷೆಯಲ್ಲಿ ಕೋಡ್ ಮಾಡುವಾಗ ಆ ಉಪಜಾತಿಗಳನ್ನು ಸೇರಿಸಲಾಗುವುದೇ: | ಈ ಬಗ್ಗೆ ಸಾರ್ವಜನಿಕ ಪ್ರಕಟಣೆ ನೀಡಿದ್ದು, ಪ್ರಕಟಿಸಲಾಗಿರುವ ಜಾತಿಗಳ ಪಟ್ಟಿಯಲ್ಲಿ ಬಿಟ್ಟುಹೋಗಿರಬಹುದಾದ ಜಾತಿಗಳ ಬಗ್ಗೆ ಆಯೋಗಕ್ಕೆ ದಿನಾಂಕ:25–07–2014ರೊಳಗೆ ಮನವಿ ಸಲ್ಲಿಸಲು ಸಾರ್ವಜನಿಕರಿಗೆ ಹಾಗೂ ವಿವಿಧ ಸಮುದಾಯಗಳ ಸಂಘ/ಸಂಸ್ಥೆಗಳಿಗೆ ಅವಕಾಶ ನೀಡಲಾಗಿರುತ್ತದೆ. ಬಂದಿರುವ ಮನವಿಗಳನ್ನು ಪರಿಶೀಲಿಸಿದ ನಂತರ ಬಿಟ್ಟು ಹೋಗಿರುವ ಜಾತಿ/ಉಪಜಾತಿಗಳನ್ನು ಸಮೀಕ್ಷೆಗಾಗಿ ಉಪಯೋಗಿಸುವ ಜಾತಿ ಪಟ್ಟಿಯಲ್ಲಿ ಅಳವಡಿಸಲು ಕ್ರಮಕೈಗೊಳ್ಳಲಾಗುವುದು. |
| ಈ) | ಕೈಬಿಡಲಾದ ಉಪಜಾತಿಗಳನ್ನು ಜಾತಿಗಳ ಪಟ್ಟಿಯಲ್ಲಿ ಸೇರಿಸಲು ಸಾರ್ವಜನಿಕರು ಕೈಗೊಳ್ಳಬೇಕಾದ ಅಗತ್ಯ ಕ್ರಮಗಳೇನು: ಈ ಬಗ್ಗೆ ಸಾರ್ವಜನಿಕರಿಗೆ ಮಾಹಿತಿ ಇದೆಯೇ: ಹಾಗಿದ್ದಲ್ಲಿ, ಯಾವ ರೀತಿ ಸಾರ್ವಜನಿಕರಿಗೆ ಮಾಹಿತಿ ನೀಡಲಾಗಿದೆ (ವಿವರ ನೀಡುವುದು)? | ಈ ವಿಷಯದ ಬಗ್ಗೆ ಆಯೋಗದ ವೆಬ್ ಸೈಟ್‌ನಲ್ಲಿ ಸಮೀಕ್ಷಾ ನಮೂನೆ–3 ಹಾಗೂ ಜಾತಿಗಳ ಪಟ್ಟಿಯನ್ನು ಪ್ರಕಟಿಸಲಾಗಿದೆ. ದಿನಪತ್ರಿಕೆಗಳಲ್ಲಿ ಸಾರ್ವಜನಿಕರ ಪ್ರಕಟಣೆ ನೀಡಲಾಗಿದೆ. ಸಾರ್ವಜನಿಕರು ಜಾತಿ ಪಟ್ಟಿಯನ್ನು ವೀಕ್ಷಿಸಿ ಯಾವುದಾದರೂ ಸಮೀಕ್ಷೆಗಾಗಿ ಸಿದ್ದಪಡಿಸಲಾದ ಜಾತಿ ಅಥವಾ ಉಪ ಜಾತಿಗಳು ಬಿಟ್ಟು ಹೋಗಿದ್ದಲ್ಲಿ ಅಂತಹವುಗಳನ್ನು ಸಮೀಕ್ಷೆಗಾಗಿ ಸಿದ್ದಪಡಿಸಲಾದ ಜಾತಿ ಪಟ್ಟಿಗೆ ಸೇರಿಸುವ ಕುರಿತು ದಿನಾಂಕ:25–07–2014ರೊಳಗಾಗಿ ಮನವಿಯನ್ನು ಆಯೋಗಕ್ಕೆ ಸಲ್ಲಿಸಲು ಅವಕಾಶ ಕಲ್ಪಿಸಲಾಗಿದೆ. |

ಸಂ.ಹಿಂವಕ 166 ಬಿಸಿಎ 2014

**(ಹೆಚ್.ಆಂಜನೇಯ)**

ಸಮಾಜ ಕಲ್ಯಾಣ ಮತ್ತು ಹಿಂದುಳಿದ ವರ್ಗಗಳ

ಕಲ್ಯಾಣ ಸಚಿವರು.

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 523 |
| 02. | ಸದಸ್ಯರ ಹೆಸರು | ಶ್ರೀ.ವಿ.ಸೋಮಣ್ಣ (ವಿಧಾನ ಸಭೆಯಿಂದ ಚುನಾಯಿತರಾದವರು) |
| 03. | ವಿಷಯ | ಗ್ರಾಮ ಭಾಗ್ಯ ಯೋಜನೆ |
| 04. | ಉತ್ತರಿಸಬೇಕಾದ ದಿನಾಂಕ | |
| 05. | ಉತ್ತರಿಸುವ ಸಚಿವರು | ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕಂದಾಯ ಗ್ರಾಮಗಳಲ್ಲದ ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಪರಿವರ್ತಿಸಿ ಗ್ರಾಮ ಭಾಗ್ಯ ಕಲ್ಪಿಸುವ ಯೋಜನೆ ಯಾವ ಹಂತದಲ್ಲಿದೆ; (ಇಂತಹ ತಾಂಡಾ, ಹಟ್ಟಿಗಳ ಸಂಖ್ಯೆಗಳ ವಿವರಗಳನ್ನು ಜಿಲ್ಲಾವಾರು ನೀಡುವುದು) | ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| (ಆ) | ಇವುಗಳ ಪುನರುಜ್ಜೀವನ ಕಾಯಕಲ್ಪಕ್ಕೆ ಸರ್ಕಾರ ಯಾವ ಕ್ರಮ ಕೈಗೊಂಡಿದೆ; ಇದರಿಂದ ಸರ್ಕಾರದ ಬೊಕ್ಕಸಕ್ಕೆ ಬರುವ ನಷ್ಟ ಎಷ್ಟು; | ಇವುಗಳನ್ನು ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸಿದ ನಂತರ ಇವುಗಳ ಪುನರುಜ್ಜೀವನ ಕಾಯಕಲ್ಪವನ್ನು ಗ್ರಾಮಪಂಚಾಯಿತಿಗಳು ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯು ಬಿಡುಗಡೆ ಮಾಡುವ ಅನುದಾನದದಲ್ಲಿ ನಿರ್ವಹಿಸಬೇಕಿರುತ್ತವೆ. |
| (ಇ) | ಈಗಾಗಲೇ ಆದೇಶ ಹೊರಡಿಸಲ್ಪಟ್ಟಿದ್ದರೂ ಅಧಿಕಾರಿಗಳ ನಿರ್ಲಕ್ಷ್ಯದಿಂದಾಗಿ ಸದರಿ ತಾಂಡಾ ಹಟ್ಟಿಗಳಿಗೆ ಕಂದಾಯ ಗ್ರಾಮದ ಸ್ಥಾನಮಾನ ಲಭಿಸದಿರುವ ಕಾರಣಗಳೇನು; ಇದಕ್ಕೆ ಕಾರಣರ್ಯಾರು; ಇವರ ಮೇಲೆ ಯಾವ ಕ್ರಮ ಜರುಗಿಸಲಾಗುವುದು; | ಸರ್ಕಾರದ ಆದೇಶ ಸಂಖ್ಯೆ: ಕಂಇ 46 ಭೂದಾಪು 2013, ದಿನಾಂಕ: 20.08.2013ರಲ್ಲಿ ಕಂದಾಯ ಗ್ರಾಮಗಳನ್ನಾಗಿ ಘೋಷಿಸಲು ಆದೇಶ ಹೊರಡಿಸಲಾಗಿದೆ, ತಾಂಡಾ, ಕಾಲೋನಿ, ಕ್ಯಾಂಪ್‌ಗಳು, ಬೋವಿಹಟ್ಟಿ, ಗೊಲ್ಲರಹಟ್ಟಿಗಳನ್ನು ಕಂದಾಯ ಗ್ರಾಮಗಳಾಗಿ ಅಧಿಸೂಚಿಸದ ನಂತರ ಇವುಗಳಿಗೆ ಕಂದಾಯ ಗ್ರಾಮದ ಸ್ಥಾನಮಾನ ದೊರಕುವುದು. ಸಂಬಂಧ ಪಟ್ಟ ಇಲಾಖೆಗಳಿಗೆ ಕಂದಾಯ ಗ್ರಾಮಗಳ ಅಭಿವೃದ್ಧಿ ಕಾರ್ಯಕ್ರಮಗಳ ಯೋಜನೆ ರೂಪಿಸಿ ಕ್ರಮ ವಹಿಸಲು ಸೂಚಿಸಲಾಗುವುದು. |

| | | |
|---|---|---|
| (ಈ) | ಇವುಗಳನ್ನು ಹಂತ ಹಂತವಾಗಿ ಪರಿವರ್ತಿಸಲು ಸರ್ಕಾರ ಯಾವ ಯೋಜನೆ ಹಮ್ಮಿಕೊಂಡಿದೆ; ಇದನ್ನು ಯಾವಾಗ ಅನುಷ್ಠಾನಗೊಳಿಸಲಾಗುತ್ತದೆ; (ಕಾಲಮಿತಿಯೊಳಗೆ ಹಮ್ಮಿಕೊಳ್ಳುವ ಯೋಜನೆಯ ವಿವರಗಳನ್ನು ಒದಗಿಸುವುದು) | ಕಂದಾಯ ಗ್ರಾಮಗಳನ್ನಾಗಿ ಅಧಿಸೂಚಿಸುವ ಪ್ರಕ್ರಿಯೆಯಲ್ಲಿ ಸರ್ವೆ ನಂಬರ್‌ಗಳ ಗುರುತಿಸುವಿಕೆ, ಇವುಗಳನ್ನು ಮೂಲ ಗ್ರಾಮದಿಂದ ಬೇರ್ಪಡಿಸುವುವಿಕೆ ಹಾಗೂ ಈ ಸಂಬಂಧ ಗ್ರಾಮಪಂಚಾಯಿತಿಗಳ ನಿರಾಕ್ಷೇಪಣೆಯನ್ನು ಪಡೆಯುವುದು ದೀರ್ಘಕಾಲದ ಪ್ರಕ್ರಿಯೆಯಾಗಿರುವುದರಿಂದ ಇದು ಕಾಲಮಿತಿಗೊಳಪಟ್ಟಿರುವುದಿಲ್ಲ. |
| (ಉ) | ಈ ನಿಟ್ಟಿನಲ್ಲಿ ಕಳೆದ ಒಂದು ವರ್ಷದಿಂದ ಲಂಬಾಣಿ ತಾಂಡಾ (ಬಂಜಾರ) ಅಭಿವೃದ್ಧಿ ಮಂಡಳಿಯ ಪಾತ್ರವೇನು? (ತಿಳಿಸುವುದು) | ಕರ್ನಾಟಕ ತಾಂಡಾ ಅಭಿವೃದ್ಧಿ ನಿಗಮವು ಹಲವು ವರ್ಷಗಳಿಂದ ಬಹುಕಾಲ ತಾಂಡಾಗಳು ಕಂದಾಯ ಗ್ರಾಮವಾಗಿ ಪರಿವರ್ತನೆಗೊಳ್ಳದಿರುವುದನ್ನು ಗಮನಿಸಿ 2013-14ನೇ ಸಾಲಿನ ಕ್ರಿಯಾ ಯೋಜನೆಯಲ್ಲಿ ತಾಂಡಾಗಳನ್ನು ಕಂದಾಯ ಗ್ರಾಮಗಳನ್ನಾಗಿ ಪರಿವರ್ತಿಸುವಲ್ಲಿ ಸರ್ಕಾರಕ್ಕೆ ನೆರವಾಗಲು ಈ ಪ್ರಕ್ರಿಯೆಯಲ್ಲಿ ಕಂಡು ಬರುತ್ತಿರುವ ತಾಂತ್ರಿಕ ಕಾನೂನು ಮತ್ತು ಆಡಳಿತಾತ್ಮಕ ಸಮಸ್ಯೆಗಳಿಗೆ ಪರಿಹಾರ ಸೂಚಿಸಲು ದಿನಾಂಕ 3.2.2014ರಂದು ನಡೆದ 18ನೇ ನಿರ್ದೇಶಕರ ಮಂಡಳಿ ಸಭೆಯಲ್ಲಿ ತಜ್ಞರ ಸಮಿತಿಯನ್ನು ರಚಿಸಲು ತೀರ್ಮಾನ ಕೈಗೊಂಡಿದೆ. ಅದರಂತೆ ಶ್ರೀ ಕೆ.ನರಸಿಂಹಯ್ಯ, ನಿವೃತ್ತ ಕೆ.ಎ.ಎಸ್. ಅಧಿಕಾರಿ ಇವರ ಅಧ್ಯಕ್ಷತೆಯಲ್ಲಿ ದಿನಾಂಕ 25.04.2014ರಂದು ತಜ್ಞರ ಸಮಿತಿ ರಚಿಸಿ ಆದೇಶ ಹೊರಡಿಸಲಾಗಿದೆ. ಸದರಿ ಸಮಿತಿಯು ಜಿಲ್ಲೆಗಳಿಗೆ ಭೇಟಿ ನೀಡಿ ಮಾಹಿತಿ ಸಂಗ್ರಹಣೆ ಮಾಡುತ್ತಿದ್ದು, ಸಮಸ್ಯೆಗಳನ್ನು ಗುರುತಿಸುವ ಕಾರ್ಯ ಮಾಡುತ್ತಿದೆ. |

ಕಂಇ 82 ಭೂದಾಪು 2014

**(ವಿ.ಶ್ರೀನಿವಾಸ ಪ್ರಸಾದ್)**
ಕಂದಾಯ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1004

02. ಸದಸ್ಯರ ಹೆಸರು : ಶ್ರೀ. ಮೃತ್ಯುಂಜಯ ಜಿನಗಾ

03. ಉತ್ತರಿಸಬೇಕಾದ ದಿನಾಂಕ

04. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ನೀರಿಗಾಗಿ ಬೋರ್‌ವೆಲ್ ಕೊರೆದು ಅವುಗಳನ್ನು ಸರಿಯಾಗಿ ಮುಚ್ಚದೇ ಹಾಗೆ ಬಿಟ್ಟಿರುವ ಸ್ಥಳಗಳ ಸಂಖ್ಯೆ ಎಷ್ಟು; | ಗ್ರಾಮೀಣ ನೀರು ಸರಬರಾಜು ಯೋಜನೆಗಳಿಗಾಗಿ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಯಿಂದ ಕೊರೆದಿರುವ ಅನುಪಯುಕ್ತ ಕೊಳವೆಬಾವಿಗಳನ್ನು ಸೂಕ್ತವಾಗಿ ಮುಚ್ಚಲಾಗಿರುತ್ತದೆ. |
| (ಆ) | ಈ ವಿಷಯಕ್ಕೆ ಸಂಬಂಧಿಸಿದಂತೆ ಸರ್ಕಾರ ಯಾರನ್ನು ಹೊಣೆಗಾರರನ್ನಾಗಿ ಮಾಡುತ್ತದೆ. | ಸರ್ಕಾರದ ಆದೇಶ ಸಂಖ್ಯೆ: ಎಂಡಿಐ 10 ಅಜಅ 2012 ದಿನಾಂಕ: 31.12.2012ರ ಪ್ಯಾರಾ "ಟಿ" ನಂತೆ ಕೊಳವೆಬಾವಿ ಕೊರೆಸಿರುವ ಮಾಲೀಕರು ಮತ್ತು ಕೊರೆದ ಗುತ್ತಿಗೆದಾರರನ್ನು ಹೊಣೆಗಾರರನ್ನಾಗಿ ಮಾಡಲಾಗಿರುತ್ತದೆ. ಸರ್ಕಾರದ ಆದೇಶ ಪ್ಯಾರಾ "ಟಿ" ಯ ಉದ್ಧೃತ ಭಾಗ ಈ ಕೆಳಕಂಡಂತಿದೆ.<br>"Any casualty due to faulty maintenance or otherwise the land owner and drilling agency are responsible in case of private bore wells and left unprotected".<br><br>ಅನುಪಯುಕ್ತ ಕೊಳವೆಬಾವಿಗಳನ್ನು ಮುಚ್ಚುವ ಸಂಬಂಧ ನೀಡಿರುವ ಮಾರ್ಗಸುಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಇದರ ವೈಫಲ್ಯದಿಂದ ಆಗುವ ಸಾವುನೋವುಗಳಿಗೆ ಕೊಳವೆ ಬಾವಿ ಮಾಲಿಕರು ಬೋರ್‌ವೆಲ್ ತೆಗೆದಿರುವ ಸಂಸ್ಥೆ ಮತ್ತು ಸಂಬಂಧಿಸಿದ ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸುವುದಾಗಿ ದಿನಾಂಕ: 20.06.2014ರ ಸುತ್ತೋಲೆ ಆದೇಶದಲ್ಲಿ ಎಚ್ಚರಿಕೆ ನೀಡಿದೆ. |
| (ಇ) | ಇಂಥ ಪ್ರಕರಣಗಳಲ್ಲಿ ಎಷ್ಟು ಜನರ ಮೇಲೆ ಸರ್ಕಾರ ಕ್ರಮಕೈಗೊಂಡಿದೆ | ಇದುವರೆವಿಗೂ ಇಂತಹ ಪ್ರಕರಣಗಳಲ್ಲಿ ಯಾರ ಮೇಲೂ ಕ್ರಮ ತೆಗೆದುಕೊಂಡಿರುವುದಿಲ್ಲ. ವಿಚಾರಣಾ ವರದಿ ಪಡೆದು ತಪ್ಪಿತಸ್ಥರೆಂದು ನಿರ್ಧರಿಸಿದ ಮೇಲೆ ನಿಯಮಾನುಸಾರ ಕ್ರಮ ತೆಗೆದುಕೊಳ್ಳಲು ಕ್ರಮ ವಹಿಸಲಾಗಿದೆ. |

<table>
<tr>
<td>(ಈ)</td>
<td>ರಾಜ್ಯದಲ್ಲಿ ಈವರೆಗೆ ತೆರೆದ ಬೋರ್ ವೆಲ್‌ಗಳಲ್ಲಿ ಮಕ್ಕಳು ಬಿದ್ದು ತೊಂದರೆ ಅನುಭವಿಸಿದ ಮತ್ತು ಅಸುನಿಗಿದ ಎಷ್ಟು ಎಷ್ಟು ಪ್ರಕರಣಗಳು ನಡೆದಿವೆ; (ದಿನಾಂಕ, ಸ್ಥಳ ಮತ್ತು ಪರಿಹಾರ ನೀಡಿದ ವಿವರಗಳನ್ನು ನೀಡುವುದು)</td>
<td>ದಿನಾಂಕ: 31.12.2012ರ ಆದೇಶ ಹೊರಡಿಸಿದ ನಂತರ ಬಿಜಾಪುರ ಜಿಲ್ಲೆಯಲ್ಲಿ ಒಂದು ಘಟನೆ ಸಂಭವಿಸಿದ್ದು, ಅದರ ವಿವರ ಈ ಕೆಳಕಂಡಂತಿದೆ.
<table>
<tr><th>ಜಿಲ್ಲೆ</th><th>ತಾಲ್ಲೂಕು</th><th>ಗ್ರಾಮ</th><th>ಜಮೀನು ಮಾಲಿಕರ ಹೆಸರು</th><th>ಸರ್ವೆ ನಂ.</th><th>ಅಂದಾಜು ಕೊರೆದ ಅಳ (ಮೀ.)</th><th>ಭೂಸ್ಥರ</th></tr>
<tr><td>ಬಿಜಾಪುರ</td><td>ಬಿಜಾಪುರ</td><td>ದ್ಯಾಬೆರಿ</td><td>ಶ್ರೀ.ರಾಮಚಂದ್ರ ಪರಸಪ್ಪ ಹಳ್ಳಿ</td><td>176/2</td><td>100–110</td><td>ಡೆಕ್ಕನ್ ಟ್ರ್ಯಾಪ್</td></tr>
</table>
</td>
</tr>
<tr>
<td>(ಉ)</td>
<td>ಇನ್ನು ಮುಂದೆ ರಾಜ್ಯದಲ್ಲಿ ಇಂತಹ ಘಟನೆ ಮರುಕಳಿಸಿದಂತೆ ಸರ್ಕಾರ ಏನೇನು ಮುಂಜಾಗ್ರತೆ ಕ್ರಮ ಕೈಗೊಳ್ಳಲಿದೆ? (ವಿವರ ನೀಡುವುದು)</td>
<td>ಅನುಪಯುಕ್ತ ತೆರೆದ ಕೊಳವೆಬಾವಿಗಳನ್ನು ಮುಚ್ಚುವ ಸಂಬಂಧ ನೀಡಿರುವ ಮಾರ್ಗಸೂಚಿಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು, ಪಾಲಿಸದಿದ್ದಲ್ಲಿ ಇದರ ವೈಫಲ್ಯದಿಂದ ಆಗುವ ಸಾವುನೋವುಗಳಿಗೆ ಕೊಳವೆ ಬಾವಿ ಮಾಲಿಕರು, ಬೋರ್‌ವೆಲ್ ತೆಗೆದಿರುವ ಸಂಸ್ಥೆ ಮತ್ತು ಸಂಬಂಧಿಸಿದೆ ಜಿಲ್ಲಾ ಪಂಚಾಯತ್, ಗ್ರಾಮ ಪಂಚಾಯತ್ ಅಧಿಕಾರಿಗಳನ್ನು ಹೊಣೆಗಾರರನ್ನಾಗಿಸುವುದಾಗಿ ದಿನಾಂಕ: 20.062014ರ ಸುತ್ತೋಲೆ ಆದೇಶದಲ್ಲಿ ಎಚ್ಚರಿಕೆ ನೀಡಿದೆ. ಈ ಕುರಿತಂತೆ ಸರ್ಕಾರಿ ಆದೇಶ ಸಂಖ್ಯೆ: ಎಂಐಡಿ 10 ಅಕ/2012 ದಿನಾಂಕ: 31.12.2012ರಲ್ಲಿ ಅನುಸಾರ ಕೊಳವೆಬಾವಿಯನ್ನು ಕೊರೆಯುವ ಮುನ್ನ ಹಾಗೂ ಕೊರೆದ ನಂತರ ಪಾಲಿಸಬೇಕಾದ ನಿಯಮ ಹಾಗೂ ಸೂಚನೆಗಳನ್ನು ತಿಳಿಸಿ, ಸಂಬಂಧಿಸಿದ ಇಲಾಖೆಗಳಿಗೆ ಜವಬ್ದಾರಿಯನ್ನು ಸಹ ನೀಡಲಾಗಿದೆ. ಆದೇಶದ ಪ್ರತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.</td>
</tr>
</table>

ಸಂಖ್ಯೆ: ಸನೀಇ 86 ವಿಪವಿ 2014

**(ಶಿವರಾಜ ಎಸ್.ತಂಗಡಗಿ)**
ಸಣ್ಣ ನೀರಾವರಿ ಸಚಿವರು.

**ಕರ್ನಾಟಕ ವಿಧಾನ ಪರಿಷತ್ತು**

01. ಸದಸ್ಯರ ಹೆಸರು : ಶ್ರೀ. ಇ.ಕೃಷ್ಣಪ್ಪ
02. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 993
03. ಉತ್ತರಿಸುವ ದಿನಾಂಕ
04. ಉತ್ತರಿಸುವ ಮಂತ್ರಿಗಳು : ಕಾರ್ಮಿಕ ರಾಜ್ಯ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಬಾಲ ಕಾರ್ಮಿಕರನ್ನು ಗುರುತಿಸುವಲ್ಲಿ ಇಲಾಖೆಯು ಕೈಗೊಂಡ ಕ್ರಮಗಳೇನು ; | ಬಾಲ ಕಾರ್ಮಿಕರನ್ನು ಪತ್ತೆ ಹಚ್ಚಲು ಇಲಾಖೆಯು ಈ ಕೆಳಕಂಡ ಕ್ರಮಗಳನ್ನು ಕೈಗೊಳ್ಳಲಾಗುತ್ತಿದೆ.<br><br>1. ಬಾಲಕಾರ್ಮಿಕರನ್ನು ಪತ್ತೆ ಹಚ್ಚಲು ಸಮೀಕ್ಷೆಗಳನ್ನು ನಡೆಸಲಾಗುತ್ತಿದೆ. ಅಂತಹ ಸಮೀಕ್ಷೆಯನ್ನು 2011-12ನೇ ಸಾಲಿನಲಿ ಕೈಗೊಳ್ಳಲಾಗಿರುತ್ತದೆ. ಬಾಲಕಾರ್ಮಿಕರನ್ನು ಗುರುತಿಸಲು ಸರ್ಕಾರೇತರ ಸಂಸ್ಥೆಗಳ ಸಹಕಾರವನ್ನು ತೆಗೆದುಕೊಳ್ಳಲಾಗುತ್ತಿದೆ.<br><br>2. ಬಾಲಕಾರ್ಮಿಕರನ್ನು ಪತ್ತೆ ಹಚ್ಚಲು ಸಮೀಕ್ಷೆಯಲ್ಲದೆ ನಿಯಮಿತವಾಗಿ ತಪಾಸಣೆಗಳನ್ನು ನಡೆಸಲಾಗಿರುತ್ತದೆ. ಅನಿರೀಕ್ಷಿತ ತಪಾಸಣೆಗಳನ್ನೂ ಸಹ ನಡೆಸಲಾಗಿರುತ್ತದೆ.<br><br>3. ಕಾರ್ಮಿಕ ಇಲಾಖೆಯ ಅಧಿಕಾರಿಗಳನ್ನಲ್ಲದೆ ಇತರೆ ಈಈ ಇಲಾಖೆಗಳ ಅಧಿಕಾರಿಗಳನ್ನು ಬಾಲ ಕಾರ್ಮಿಕ (ನಿಷೇಧ ಮತ್ತು ನಿಯಂತ್ರಣ) ಕಾಯ್ದೆ, 1986ರಡಿ ನಿರೀಕ್ಷಕರನ್ನಾಗಿ ಹಾಗೂ ಕರ್ನಾಟಕ ಅಂಗಡಿ ಮತ್ತು ವಾಣಿಜ್ಯ ಸಂಸ್ಥೆಗಳ ಕಾಯ್ದೆ, 1961ರಡಿ ಹೆಚ್ಚುವರಿ ನಿರೀಕ್ಷಕರನ್ನಾಗಿ ನೇಮಕ ಮಾಡಲಾಗಿದೆ.<br><br>4. ಬಾಲ ಕಾರ್ಮಿಕರ ನೇಮಕಾತಿಯಿಂದ ಆಗುವ ದುಷ್ಪರಿಣಾಮಗಳ ಬಗ್ಗೆ ಪೋಷಕರಿಗೆ ಮತ್ತು ಸಾರ್ವಜನಿಕರಲ್ಲಿ ಅರಿವು ಮೂಡಿಸುವ ಸಲುವಾಗಿ ಮುದ್ರಣ ಮತ್ತು ವಿದ್ಯುನ್ಮಾನ ಮಾದ್ಯಮಗಳ ಮೂಲಕ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲಾಗುತ್ತಿದೆ.<br><br>5. ಕೇಂದ್ರ ಕಛೇರಿಯಲ್ಲಿ ಬಾಲಕಾರ್ಮಿಕರ ನೇಮಕಾತಿ ಬಗ್ಗೆ ದೂರು ನೀಡಲು, ದೂರವಾಣಿ ನಿಯಂತ್ರಣ ಕೇಂದ್ರವನ್ನು ಸ್ಥಾಪಿಸಲಾಗಿದೆ. |

| | | |
|---|---|---|
| | | 6. ಸಾರ್ವಜನಿಕರು ಉಚಿತವಾಗಿ ಕರೆ ನೀಡಿ ದೂರು ಸಲ್ಲಿಸಲು ಅನುಕೂಲವಾಗುವಂತೆ ಮಹಿಳಾ ಮತ್ತು ಮಕ್ಕಳ ಇಲಾಖೆಯವರು ನಡೆಸುತ್ತಿರುವ '1098' ಸೇವೆಯನ್ನು ಬಳಸಿಕೊಳ್ಳಲಾಗುತ್ತಿದೆ.<br>7. ಕಾಲಕಾಲಕ್ಕೆ ಕಾನೂನುಗಳಲ್ಲಿ ಆಗುವ ಬದಲಾವಣೆ ಕುರಿತು ನಿರೀಕ್ಷಕರಿಗೆ ತರಭೇತಿಗಳನ್ನು ನೀಡಲಾಗುತ್ತಿದೆ. ತಪಾಸಣೆಗೆ ಅನುಕೂಲವಾಗಲು ಸಂಪನ್ಮೂಲ ಪುಸ್ತಕವನ್ನು ಮುದ್ರಿಸಿ ನಿರೀಕ್ಷಕರಿಗೆ ನೀಡಲಾಗುತ್ತಿದೆ.<br>8. ಪರಿಣಾಮಕಾರಿಯಾಗಿ ಕೆಲಸ ನಿರ್ವಹಿಸುತ್ತಿರುವ ಅಧಿಕಾರಿಗಳನ್ನು ಗುರುತಿಸಿ ಪ್ರಶಸ್ತಿ ನೀಡುವ ಮೂಲಕ ಪ್ರೋತ್ಸಾಹಿಸಲಾಗುತ್ತಿದೆ. |
| ಆ) | ಇದುವರೆವಿಗೂ ಗುರುತಿಸಿರುವ ಬಾಲ ಕಾರ್ಮಿಕರ ಒಟ್ಟು ಸಂಖ್ಯೆ ಎಷ್ಟು; | 2001-02 ನೇ ಸಾಲಿನಿಂದ ಮೇ-2014ರ ಅಂತ್ಯದವರೆಗೆ ಒಟ್ಟು 1,10,304 ಬಾಲಕಾರ್ಮಿಕರನ್ನು ಗುರುತಿಸಿ ಪುನರ್ವಸತಿಗೊಳಿಸಲಾಗಿದೆ. |
| ಇ) | ಬಾಲ ಕಾರ್ಮಿಕ ಪದ್ಧತಿಯನ್ನು ನಿರ್ಮೂಲನ ಮಾಡುವಲ್ಲಿ ಇಲಾಖಾಧಿಕಾರಿಗಳು ಸಮರ್ಪಕವಾಗಿ 'ಕರ್ಯ ನಿರ್ವಹಿಸುತ್ತಿದ್ದಾರೆಯೇ' ಇಲ್ಲದಿದ್ದಲ್ಲಿ, ಇಂತಹವರ ಮೇಲೆ ಕೈಗೊಂಡ ಕ್ರಮಗಳೇನು; | ಬಾಲಕಾರ್ಮಿಕ ಪದ್ಧತಿಯನ್ನು ಸಂಪೂರ್ಣವಾಗಿ ನಿರ್ಮೂಲನೆ ಮಾಡುವ ಉದ್ದೇಶವನ್ನು ರಾಜ್ಯ ಸರ್ಕಾರ ಹೊಂದಿದ್ದು, ಈ ನಿಟ್ಟಿನಲ್ಲಿ ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಕಾಲ ಕಾಲಕ್ಕೆ ಸೂಕ್ತ ನಿರ್ದೇಶನಗಳನ್ನು ನೀಡಲಾಗುತ್ತಿದೆ. ಇಲಾಖೆಯ ಅಧಿಕಾರಿಗಳು ಸಮರ್ಪಕವಾಗಿ ಕಾರ್ಯನಿರ್ವಹಿಸದಿದ್ದಲ್ಲಿ ನಿಯಮಾನುಸಾರ ಕ್ರಮ ಕೈಗೊಳ್ಳಲಾಗುತ್ತಿದೆ. |

ಕಾಇ 63 ಸಿಎಲ್‌ಸಿ 2014

**(ಪಿ.ಟಿ.ಪರಮೇಶ್ವರ್ ನಾಯ್ಕ್)**
ಕಾರ್ಮಿಕ ರಾಜ್ಯ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

01. ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ : 1026

02. ಸದಸ್ಯರ ಹೆಸರು : ಶ್ರೀ. ಮರಿತಿಬ್ಬೇಗೌಡ

03. ಉತ್ತರಿಸಬೇಕಾದ ದಿನಾಂಕ

04. ಉತ್ತರಿಸುವ ಸಚಿವರು : ಮಾನ್ಯ ಸಣ್ಣ ನೀರಾವರಿ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ ಎಷ್ಟು; (ಜಿಲ್ಲಾವಾರು ಮಾಹಿತಿ ನೀಡುವುದು) | ಸಣ್ಣ ನೀರಾವರಿ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಕೆರೆಗಳ ಸಂಖ್ಯೆ 3622.<br>ಜಿಲ್ಲಾವಾರು ವಿವರಗಳನ್ನು ಅನುಬಂಧ-1 ರಲ್ಲಿ ನೀಡಲಾಗಿದೆ. |
| ಆ) | ಸಣ್ಣ ನೀರಾವರಿ ಇಲಾಖೆ ವ್ಯಾಪ್ತಿಗೆ ಕೆರೆಗಳನ್ನು ಒಳಪಡಿಸುವಲ್ಲಿ ಅನುಸರಿಸುತ್ತಿರುವ ಮಾನದಂಡಗಳೇನು; (ವಿವರಗಳೊಡನೆ) | 40 ರಿಂದ 2000 ಹೆಕ್ಟೇರ್ ವರೆಗೆ ಹಚ್ಚುಕಟ್ಟು ಹೊಂದಿರುವ ಕೆರೆಗಳು ಸಣ್ಣ ನೀರಾವರಿ ಇಲಾಖಾ ವ್ಯಾಪ್ತಿಗೆ ಒಳಪಡುತ್ತವೆ. ನೀರಿನ ಲಭ್ಯತೆ, ಮಣ್ಣಿನ ಮಾದರಿ, ಕಟ್ಟಡದ ಭದ್ರತೆ, ನೀರಾವರಿಗೊಳಪಡಿಸಲಾಗುವ ಕ್ಷೇತ್ರ, ನಿರ್ಮಿಸಬಹುದಾದ ಯೋಜನೆಯ ಮೇಲ್ಭಾಗದಲ್ಲಿ ಹಾಗೂ ಕೆಳಭಾಗದಲ್ಲಿ ಈಗಾಗಲೇ ನಿರ್ಮಿಸಲಾಗಿರುವ ಯೋಜನೆಗಳಿಂದ ಆಗುವ ಪರಿಣಾಮ ಇತ್ಯಾದಿ ತಾಂತ್ರಿಕ ಅಂಶಗಳನ್ನು ಹಾಗೂ ಯೋಜನೆಯ ಆರ್ಥಿಕ ಶಕ್ಯತೆಗಳಂತಹ ಮಾನದಂಡಗಳನ್ನು ಅನುಸರಿಸಿ ಸಣ್ಣ ನೀರಾವರಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. |
| ಇ) | ಸದರಿ ಕೆರೆಗಳ ಪೈಕಿ ಎಷ್ಟು ಕೆರೆಗಳಲ್ಲಿ ಒತ್ತುವರಿ ಮಾಡಲಾಗಿದೆ; (ಜಿಲ್ಲಾವಾರು ಮಾಹಿತಿ ನೀಡುವುದು) | ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ. |

<table>
<tr><td>ಈ)</td><td>ಸದರಿ ಕೆರೆಗಳ ಒತ್ತುವರಿ ತೆರವಿಗೆ ಹಾಗೂ ಕೆರೆಗಳನ್ನು ಅಭಿವೃದ್ಧಿಪಡಿಸಲು ರೂಪಿಸಿದೆ; (ವಿವರವಾದ ಮಾಹಿತಿ ನೀಡುವುದು)</td><td>ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಸರ್ವೆ ಕಾರ್ಯ ಕೈಗೊಂಡು ಸರಹದ್ದನ್ನು ಗುರುತಿಸಿ, ಒತ್ತುವರಿಯನ್ನು ತೆರವುಗೊಳಿಸಿ, ಚೌಂಡರಿ ಟ್ರಂಚ್ ನಿರ್ಮಿಸುವುದು, ಫೆನ್ಸಿಂಗ್ ನಿರ್ಮಾಣ, ಕಾಂಟೂರ್ ಬಂಡ್ ನಿರ್ಮಾಣ ಮತ್ತು ಕೆರೆಯಂಗಳದ ಸುತ್ತಲೂ ಬೌಂಡರಿ ಕಲ್ಲುಗಳನ್ನು ನೆಡಲಾಗುವುದು. ವಿವರಗಳನ್ನು ಅನುಬಂಧ-2 ರಲ್ಲಿ ನೀಡಲಾಗಿದೆ.<br>ಸಣ್ಣ ನೀರಾವರಿ ಇಲಾಖೆಯ ವಿವಿಧ ಯೋಜನಾ ಲೆಕ್ಕ ಶೀರ್ಷಿಕೆಗಳಡಿ ಒದಗಿಸಿರುವ ಅನುದಾನದಲ್ಲಿ ಕೆರೆ ಅಭಿವೃದ್ಧಿ ಕಾಮಗಾರಿಗಳನ್ನು ಕೈಗೊಳ್ಳಲಾಗುತ್ತಿದೆ. 2014-15ನೇ ಸಾಲಿನ ಆಯವ್ಯಯ ಘೋಷಣೆಯಂತೆ "ಕೆರೆಗಳ ಅಭಿವೃದ್ಧಿ-ನಾಡಿನ ಶ್ರೇಯೋಭಿವೃದ್ಧಿ" ಕಾರ್ಯಕ್ರಮದಡಿ ಪ್ರತಿ ವಿಧಾನ ಸಭಾ ಕ್ಷೇತ್ರಕ್ಕೊಂದರಂತೆ ಕೆರೆಗಳ ಸಮಗ್ರ ಅಭಿವೃದ್ಧಿಯ ಯೋಜನೆಯನ್ನು ರೂಪಿಸಲಾಗುತ್ತಿದೆ.</td></tr>
<tr><td>ಉ</td><td>ಸದರಿ ಕೆರೆಗಳ ಸಂರಕ್ಷಣೆ ಹಾಗೂ ಅಭಿವೃದ್ಧಿಗೆ ಸರ್ಕಾರ 2014-15ನೇ ಸಾಲಿನ ಮುಂಗಡ ಪತ್ರದಲ್ಲಿ ಎಷ್ಟು ಹಣ ಒದಗಿಸಿದೆ? (ವಿವರ ನೀಡುವುದು)</td><td>(ರೂ.ಲಕ್ಷಗಳಲ್ಲಿ)<table>
<tr><td>ಕ್ರ. ಸಂ</td><td>ಲೆಕ್ಕಶೀರ್ಷಿಕೆ</td><td>2014-15ನೇ ಸಾಲಿನಲ್ಲಿ ಒದಗಿಸಿರುವ ಅನುದಾನ</td></tr>
<tr><td>01</td><td>4702-ಕೆರೆಗಳ ಅಧುನೀಕರಣ-ನಬಾರ್ಡ್</td><td>4996.10</td></tr>
<tr><td>02</td><td>4702-ಕೆರೆಗಳ ಆಧುನೀಕರಣ-ಪ್ರಧಾನ ಕಾಮಗಾರಿಗಳು</td><td>4475.05</td></tr>
<tr><td>03</td><td>4702-ಕೆರೆಗಳ ದುರಸ್ಥಿ ಮತ್ತು ಪುನಃಶ್ಚೇತನ</td><td>4000.00</td></tr>
<tr><td>04</td><td>4702-ಆರ್.ಆರ್.ಆರ್</td><td>1000.00</td></tr>
<tr><td>05</td><td>4702-13ನೇ ಹಣಕಾಸು ಆಯೋಗದ ಅನುದಾನ</td><td>11491.00</td></tr>
</table></td></tr>
</table>

ಸಂಖ್ಯೆ: ಸನೀಇ 91 ಎಪಎ 2014

**(ಶಿವರಾಜ ಎಸ್.ತಂಗಡಗಿ)**
ಸಣ್ಣ ನೀರಾವರಿ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : 1010 |
| 02. | ಸದಸ್ಯರ ಹೆಸರು | : ಶ್ರೀ. ವೀರಕುಮಾರ್ ಅಪ್ಪಾಸೊ ಪಾಟೀಲ್ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 03. | ವಿಷಯ | ಹೊಸ ತಾಲ್ಲೂಕು ರಚನೆ |
| 04. | ಉತ್ತರಿಸಬೇಕಾದ ದಿನಾಂಕ | |
| 05. | ಉತ್ತರಿಸುವ ಸಚಿವರು | : ಕಂದಾಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ರಾಜ್ಯದಲ್ಲಿ ಹೊಸ ತಾಲ್ಲೂಕುಗಳನ್ನು ರಚನೆ ಮಾಡಲು ನೇಮಿಸಿದ ಸಮಿತಿಗಳಾವುವು; ಯಾವ ಸಮಿತಿ ಯಾವ ಯಾವ ಸ್ಥಳಗಳನ್ನು ತಾಲ್ಲೂಕು ಕೇಂದ್ರ ಮಾಡಲು ಶಿಫಾರಸ್ಸು ಮಾಡಿದೆ; | ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ. |
| ಆ) | ಸರ್ಕಾರ ಹೊಸ ತಾಲ್ಲೂಕುಗಳ ರಚನೆ ಯಾವಾಗ ಮಾಡಲು ನಿರ್ಧರಿಸಿದೆ? | 2014–15ನೇ ಸಾಲಿನ ಆಯವ್ಯಯದಲ್ಲಿ ಹೊಸ ತಾಲ್ಲೂಕುಗಳ ರಚನೆಗೆ ಸಂಬಂಧಿಸಿದಂತೆ ಯಾವುದೇ ಘೋಷಣೆ ಮಾಡಲಾಗಿರುವುದಿಲ್ಲ. ಮುಂದಿನ ದಿನಗಳಲ್ಲಿ ಹೊಸ ತಾಲ್ಲೂಕುಗಳ ರಚನೆಗೆ ಬಗ್ಗೆ ಆರ್ಥಿಕ ಪರಿಸ್ಥಿತಿಯನ್ನು ಗಮನದಲ್ಲಿಟ್ಟುಕೊಂಡು ಹಂತ ಹಂತವಾಗಿ ಕ್ರಮ ಕೈಗೊಳ್ಳಲಾಗುವುದು. |

ಕಂಇ 83 ಭೂದಾಪು 2014

(ವಿ.ಶ್ರೀನಿವಾಸ ಪ್ರಸಾದ್)

ಕಂದಾಯ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | : | 1058 |
| 02. | ಮಾನ್ಯ ಸದಸ್ಯರ ಹೆಸರು | : | ಶ್ರೀ. ಕೋಟಾ ಶ್ರೀನಿವಾಸ್ ಪೂಜಾರಿ (ಸ್ಥಳೀಯ ಸಂಸ್ಥೆಗಳ ಕ್ಷೇತ್ರದಿಂದ ಚುನಾಯಿತರಾದವರು) |
| 03. | ಉತ್ತರಿಸಬೇಕಾದ ದಿನಾಂಕ | | |
| 04. | ಉತ್ತರಿಸುವವರು | : | ಮಾನ್ಯ ಕಾರ್ಮಿಕ ರಾಜ್ಯ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ | ಂಓಖಘಇಖ |
|---|---|---|---|
| ಅ) | ರಾಜ್ಯದಲ್ಲಿ ಕಟ್ಟಡ ಕಾರ್ಮಿಕರ ಸಂಖ್ಯೆ ಎಷ್ಟು; (ಜಿಲ್ಲಾವಾರು, ತಾಲ್ಲೂಕುವಾರು ವಿವರ ನೀಡುವುದು) | ರಾಜ್ಯದಲ್ಲಿನ ಕಟ್ಟಡ ಕಾರ್ಮಿಕರ ಸಂಖ್ಯೆಯನ್ನು ಗುರುತಿಸಲು ಯಾವುದೇ ಸಮೀಕ್ಷೆಯನ್ನು ನಡೆಸಿರುವುದಿಲ್ಲ. ಕರ್ನಾಟಕ ಕಟ್ಟಡ ಮತ್ತು ಇತರೆ ನಿರ್ಮಾಣ ಕಾರ್ಮಿಕರ ಕಲ್ಯಾಣ ಮಂಡಳಿಯಲ್ಲಿ ಕಟ್ಟಡ ಮತ್ತು ಇತರೆ ನಿರ್ಮಾಣ ಕಾಮಗಾರಿಗಳಲ್ಲಿ ತೊಡಗಿರುವ ಕಾರ್ಮಿಕರನ್ನು ಗುರುತಿಸಿ ಇದುವರೆವಿಗು ಫಲಾನುಭಿಗಳನ್ನಾಗಿ 5,44,248 ಕಾರ್ಮಿಕರನ್ನು ನೋಂದಾಯಿಸಲಾಗಿದೆ. ಈ ಫಲಾನುಭವಿಗಳ ನೋಂದಾಯಿತ ಕಟ್ಟಡ ಕಾರ್ಮಿಕರ ಜಿಲ್ಲಾವಾರು ಮತ್ತು ತಾಲ್ಲೂಕುವಾರು ಮಾಹಿತಿಯನ್ನು ಅನುಬಂಧ-1 ಮತ್ತು ಅನುಬಂಧ-2 ರಲ್ಲಿ ಲಗತ್ತಿಸಿದೆ. | No survey has been conducted to identify the Construction workers. So for 5,44,248 Construction Workers are registered as beneficiaries in Building & other Construction Workers Welfare Board. (District & Talukwise details are enclosed at Annexure-I & II) |

| | | | |
|---|---|---|---|
| ಆ) | ಕಟ್ಟಡ ಕಾರ್ಮಿಕರು ಹೆಚ್ಚಾಗಿ ಅವಿದ್ಯಾವಂತರಾಗಿದ್ದು, ಕಾರ್ಮಿಕ ಇಲಾಖೆಯಲ್ಲಿ ನೋಂದಾವಣಿ ಮಾಡದೆ ಇದ್ದು, ಸವಲತ್ತುಗಳಿಂದ ವಂಚಿತರಾಗುತ್ತಿರುವುದು ಸರ್ಕಾರ ಗಮನಕ್ಕೆ ಬಂದಿದೆಯೇ; | ನೋಂದಾವಣಿ ಮಾಡಿಕೊಳ್ಳಲು ವ್ಯಾಪಕ ಕ್ರಮಕೈಗೊಳ್ಳಲಾಗಿದೆ ಹಾಗೂ ವ್ಯಾಪಕ ಪ್ರಚಾರ ನಡೆಸಲಾಗುತ್ತಿದೆ. | Extensive action has been initiated for registration and also for awareness. |
| ಇ) | ಕಟ್ಟಡ ಕಾರ್ಮಿಕರನ್ನು ಕಡ್ಡಾಯ ನೋಂದಾವಣಿಗೊಳಪಡಿಸಿ ಇಲಾಖಾ ಸವಲತ್ತುಗಳನ್ನು ಸದರಿಯವರು ಪಡೆಯುವಂತೆ ಮಾಡಲು ಸರ್ಕಾರ ಕೈಗೊಂಡ ಕ್ರಮವೇನು? (ವಿವರ ನೀಡುವುದು) | ಮಂಡಳಿಯಲ್ಲಿ ಕಟ್ಟಡ ಕಾರ್ಮಿಕರನ್ನು ನೋಂದಾಣಿಗೊಳಿಸಲು ಮತ್ತು ಸೌಲಭ್ಯಗಳನ್ನು ಅರ್ಹ ಫಲಾನುಭವಿಗಳಿಗೆ ತಲುಪಿಸಲು ರಾಜ್ಯ ಮತ್ತು ಸ್ಥಳೀಯ ದಿನಪತ್ರಿಕೆಗಳಲ್ಲಿ ಜಾಹಿರಾತನ್ನು ನೀಡಲಾಗಿದೆ. ಕರ ಪತ್ರ ಮತ್ತು ಪೋಸ್ಟರ್ಸ್ ಗಳನ್ನು ವಿತರಿಸಲಾಗಿದೆ.<br><br>ಮಂಡಳಿಯ ಕಾರ್ಯಚಟುವಟಿಕೆಗಳ ಬಗ್ಗೆ ಕಿರು ಚಿತ್ರ ನಿರ್ಮಿಸಿ ಜಾಗೃತಿ ಮೂಡಿಸುವ ಬಗ್ಗೆ ಕಾರ್ಯಕ್ರಮವನ್ನು ಹಮ್ಮಿಕೊಳ್ಳಲಾಗುತ್ತಿದೆ.<br>ಅಲ್ಲದೇ, ಕಟ್ಟಡ ನಿರ್ಮಾಣ ಸ್ಥಳದಲ್ಲಿಯೇ ಕಾರ್ಮಿಕರನ್ನು ನೋಂದಾಯಿಸಿದೊರೆಯುತ್ತಿರುವ ಸೌಲಭ್ಯಗಳ ಬಗ್ಗೆ ಅರಿವು ಮೂಡಿಸಲಾಗುತ್ತಿದೆ.<br><br>ಸರ್ಕಾರದ ನಿರ್ಮಾಣ ಕಾಮಗಾರಿಗಳಲ್ಲಿ ಕಾರ್ಯನಿರ್ವಹಿಸುವ ಕಟ್ಟಡ ಕಾರ್ಮಿಕರನ್ನು ಕಡ್ಡಾಯವಾಗಿ ನೋಂದಾಣಿ ಮಾಡಿಸಬೇಕೆಂದು ಸಂಬಂಧಪಟ್ಟ ಗುತ್ತಿಗೆದಾರರು/ ಮಾಲೀಕರಿಗೆ ರಾಜ್ಯದ ಎಲ್ಲಾ ಜಿಲ್ಲಾ ಪಂಚಾಯತ್, ತಾಲ್ಲೂಕು | In order to enroll the construction workers and to extend the benefits to the eligible beneficiaries, the Board has taken steps by issuing advertisements both in State and National level papers. Hand bills, & posters are being distributed.<br><br>Short film has been prepared regarding the activities of the Board to create more awareness.<br>Besides registration of workers are being done at the work spot. At the same time awareness has been created regarding the benefits.<br>Board has issued a circular to all CEO's of Zilla Panchayath and E.O's of Taluk Panchayaths to engage registered construction worker in all the government buildings to Contractors & Builders. The Board |

| | | | |
|---|---|---|---|
| | | ಪಂಚಾಯತ್ ಕಾರ್ಯನಿರ್ವಹಣಾಧಿಕಾರಿ ಗಳಿಗೆ ಸುತ್ತೋಲೆ ಹೊರಡಿಸುವ ಮೂಲಕ ಕಾರ್ಮಿಕರನ್ನು ನೋಂದಾಣಿ ಮಾಡಿಸಲು ಕ್ರಮ ಕೈಗೊಳ್ಳಲಾಗಿದೆ. ಕಾನೂನು ಸೇವೆಗಳ ಪ್ರಾಧಿಕಾರಿಗಳ ಸಹಕಾರದೊಂದಿಗೆ ತಾಲ್ಲೂಕು ಮತ್ತು ಜಿಲ್ಲಾ ಮಟ್ಟದಲ್ಲಿ ಕಟ್ಟಡ ಕಾರ್ಮಿಕರ ನೋಂದಾಣಿ ಹಾಗೂ ಮಂಡಳಿಯ ಸೌಲಭ್ಯಗಳ ಬಗ್ಗೆ ಜಾಗೃತಿ ಮೂಡಿಸಲಾಗುತ್ತಿದೆ.<br><br>ಅಲ್ಲದೇ ಕಾರ್ಮಿಕ ಸಂಘಟನೆಗಳ ಮೂಲಕ ಮಂಡಳಿಯ ಸೌಲಭ್ಯಗಳ ಬಗ್ಗೆ ವ್ಯಾಪಕ ಪ್ರಚಾರ ಕಾರ್ಯಕ್ರಮಗಳನ್ನು ಹಮ್ಮಿಕೊಂಡಿರುತ್ತದೆ. ಕಾರ್ಮಿಕ ಸಂಘಗಳ ಮೂಲಕ ಕಟ್ಟಡ ಕಾರ್ಮಿಕರನ್ನು ನೋಂದಾಣಿ ಮಾಡಿಸಲು ಕಾರ್ಮಿಕ ಸಂಘಗಳಿಗೆ ಹಾಗೂ ಹೊರ ಸ್ವಯಂ ಸೇವಕರಿಗೆ ಪ್ರತಿ ನೋಂದಾಣಿಗೆ ಅನುಕ್ರಮವಾಗಿ ರೂ.25/– ಮತ್ತು ರೂ.50/– ಗಳನ್ನು ಪ್ರೋತ್ಸಾಹ ಕ್ರಮವಾಗಿ ನೀಡಲಾಗುತ್ತಿದೆ.<br><br>ಇಲಾಖೆಯ ಎಲ್ಲಾ ಕಲ್ಯಾಣ ಯೋಜನೆಗಳ ಬಗ್ಗೆ ಕೈಪಿಡಿಯನ್ನು ಸಿದ್ಧಪಡಿಸಿ ಜನಪ್ರತಿನಿಧಿಗಳಿಗೆ ಒದಗಿಸಲಾಗಿದೆ. | has been actively involved with the Karnataka State Legal Service Authority for imparting awareness about registration & benefits available to such construction workers at Taluk and District level.<br><br>Extensive awareness programmes have been contemplated through trade unions, regarding the benefits extended by the Board . The trade unions and outreach workers are being paid a sum of Rs.25/- and Rs.50/- respectively for each registration as incentive.<br>Hand book consisting of all welfare benefits has been prepared and made available to all the people representatives. |

ಸಂಖ್ಯೆ: ಕಾಇ 278 ಎಲ್ಇಟಿ 2014

**(ಪಿ.ಟಿ.ಪರಮೇಶ್ವರ ನಾಯ್ಕ)**
**ಕಾರ್ಮಿಕ ರಾಜ್ಯ ಸಚಿವರು**

**ಕರ್ನಾಟಕ ವಿಧಾನ ಪರಿಷತ್ತು**

**125 ಅಧಿವೇಶನ 2014**

| | | |
|---|---|---|
| 01. | ಚುಕ್ಕೆ ಗುರುತಿಲ್ಲದ ಪ್ರಶ್ನೆ ಸಂಖ್ಯೆ | 187 (1018) |
| 02. | ವಿಧಾನ ಪರಿಷತ್ತಿನ ಸದಸ್ಯರ ಹೆಸರು | ಶ್ರೀ ಎಂ. ಶ್ರೀನಿವಾಸ್ |
| 04. | ಉತ್ತರಿಸಬೇಕಾದ ದಿನಾಂಕ | |
| 05. | ಉತ್ತರಿಸ ಬೇಕಾದ ಸಚಿವರು | ಮಾನ್ಯ ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು |

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| (ಅ) | ರಾಜ್ಯದಲ್ಲಿ ಕೈಗಾರಿಕೆಗಳು ಹೊರ ಬಿಡುವ ತ್ಯಾಜ್ಯ ನೀರು, ಹೊರಸೂಸುವ ಹೊಗೆ ಸೇರಿದಂತೆ ಇವುಗಳು ಪರಿಸರದ ಮೇಲೆ ಆಗುವ ಪರಿಣಾಮಗಳನ್ನು ಪರೀಕ್ಷಿಸಿ, ಪ್ರಮಾಣ-ಪತ್ರ ನೀಡುವ ಮಾಲಿನ್ಯ ನಿಯಂತ್ರಣ ಮಂಡಳಿಯ ಕೇಂದ್ರ ಪರಿಸರ ಪ್ರಯೋಗಾಲಯವು ಯಾವ ಕಾಯ್ದೆ, ನಿಯಮದಡಿ ಸ್ಥಾಪನೆಯಾಗಿದೆ; (ವಿವರ ಒದಗಿಸುವುದು) | ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯ ಕೇಂದ್ರ ಪರಿಸರ ಪ್ರಯೋಗಾಲಯವು (Environmental Laboratories) ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981 ರ ಸೆಕ್ಷನ್ 17(2) ಅಡಿಯಲ್ಲಿ ಸ್ಥಾಪನೆಯಾಗಿದೆ. |

| | | |
|---|---|---|
| (ಆ) | ಪರಿಸರ ಪ್ರಯೋಗಾಲಯಗಳ ಸ್ಥಾಪನೆಗೆ ಇರುವ ಮಾರ್ಗಸೂಚಿಗಳು ಏನು; ಮಾಲಿನ್ಯ ನಿಯಂತ್ರಣ ಮಂಡಳಿಗೆ ಯಾವ ರೂಪದ ಕೈಗಾರಿಕಾ ತ್ಯಾಜ್ಯ ಪರೀಕ್ಷಿಸಲು ಕಾನೂನಿನಲ್ಲಿ ಅವಕಾಶ ನೀಡಲಾಗಿದೆ; (ಸಂಪೂರ್ಣ ಮಾಹಿತಿ ಒದಗಿಸುವುದು) | ಪರಿಸರ ಪ್ರಯೋಗಾಲಯಗಳ (Environmental Laboratories) ಸ್ಥಾಪನೆಗೆ ಪರಿಸರ (ಸಂರಕ್ಷಣೆ) ಕಾಯ್ದೆ, 1986 ಸೆಕ್ಷನ್ 12 (1) (ಬಿ) ರಲ್ಲಿನಂತೆ ಕೇಂದ್ರ ಸರ್ಕಾರದಿಂದ ಅಧಿಸೂಚನೆಯ ಪ್ರಕಟಣೆಯಾಗಬೇಕಾಗಿರುತ್ತದೆ. ಹಾಗೂ, ಪರಿಸರ ಪ್ರಯೋಗ ಶಾಲೆಗಳ ಸ್ಥಾಪನೆಗೆ ಕೇಂದ್ರ ಮಾಲಿನ್ಯ ನಿಯಂತ್ರಣ ಮಂಡಳಿಯು ಮಾರ್ಗಸೂಚಿಯನ್ನು ಹೊರಡಿಸಿ ಕಾಲ ಕಾಲಕ್ಕೆ ತಿದ್ದುಪಡಿ ಮಾಡುತ್ತಿದ್ದು ಇತ್ತೀಚಿನ ಮಾರ್ಗಸೂಚಿ (2009) ಪ್ರಕಾರ ಪ್ರಯೋಗಾಲಯ ಸ್ಥಾಪನೆಗೆ ಇರಬೇಕಾದಂತಹ ಮೂಲಭೂತ ಸೌಕರ್ಯಗಳು, ಉಪಪ್ರಕರಣಗಳು, ಕ್ಯಾಲಿಬ್ರೇಷನ್ ಒಳಗೊಂಡಂತೆ, ಮಾದರಿ ಶೇಖರಣೆ, ಸುರಕ್ಷತೆ ವಿಶ್ಲೇಷಣಾ ಗುಣಮಟ್ಟ ಇತ್ಯಾದಿಗಳನ್ನು ಈ ಮಾರ್ಗಸೂಚಿಯಲ್ಲಿ ನಮೂದಿಸಲಾಗಿದೆ. ಸದರಿ ಮಾರ್ಗಸೂಚಿಯಲ್ಲಿ ನೀಡಲಾಗಿರುವ ನಿಬಂಧನೆಗಳ ಪ್ರತಿಯನ್ನು ಈ ಉತ್ತರದ ಅನುಬಂಧ–1ರಲ್ಲಿ ನೀಡಲಾಗಿದೆ.<br>ಕರ್ನಾಟಕ ರಾಜ್ಯ ಮಾಲಿನ್ಯ ನಿಯಂತ್ರಣ ಮಂಡಳಿಯಲ್ಲಿ ಸ್ಥಾಪಿಸಲಾಗಿರುವ ಪ್ರಯೋಗಾಲಯಗಳು ಜಲ (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1974 ಮತ್ತು ವಾಯು (ಮಾಲಿನ್ಯ ನಿವಾರಣೆ ಮತ್ತು ನಿಯಂತ್ರಣ) ಕಾಯ್ದೆ 1981 ರ ಸೆಕ್ಷನ್ 17(2) ಅಡಿಯಲ್ಲಿ ಸ್ಥಾಪನೆಯಾಗಿರುವುದರಿಂದ, ಕೈಗಾರಿಕೆಗಳು ಹೊರ ಹಾಕುವ ಕಲುಷಿತ ನೀರು, ಪರಿವೇಷ್ಠಕ ಗಾಳಿಯ ಗುಣಮಟ್ಟ, ವಾಯು ಮಾಲಿನ್ಯ ಉಗಮಗಳಿಂದ ಹೊರ ಬರುವ ಧೂಳಿನ ಕಣಗಳು, ಇತರ ಅನಿಲಗಳು, ಘನ ತ್ಯಾಜ್ಯ, ಅಪಾಯಕಾರಿ ತ್ಯಾಜ್ಯಗಳು, ಇತ್ಯಾದಿಗಳನ್ನು ವಿಶ್ಲೇಷಿಸಲು ಅಧಿಕಾರ ಕಲ್ಪಿಸಲಾಗಿದೆ. |

ಸಂಖ್ಯೆ: ಅಪಜೀ 155 ಇಪಿಸಿ 2014

**(ಬಿ. ರಮಾನಾಥ ರೈ)**

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

| | | | |
|---|---|---|---|
| 01. | ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | : | 181 (1023) |
| 02. | ಸದಸ್ಯರ ಹೆಸರು | : | ಶ್ರೀ ಅರುಣ ಶಹಾಪುರ (ಶಿಕ್ಷಕರ ಕ್ಷೇತ್ರ) |
| 03. | ಉತ್ತರಿಸಬೇಕಾದ ದಿನಾಂಕ | | |
| 04. | ಉತ್ತರಿಸುವ ಸಚಿವರು | : | ಮಾನ್ಯ ಅರಣ್ಯ ಸಚಿವರು |

<table>
<tr><th>ಕ್ರ.ಸಂ</th><th>ಪ್ರಶ್ನೆ</th><th>ಉತ್ತರ</th></tr>
<tr><td>ಅ)</td><td>ರಾಜ್ಯದಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಲಯ ಅರಣ್ಯ ಅಧಿಕಾರಿಗಳ ಸಂಖ್ಯೆ ಎಷ್ಟು; ಸರ್ಕಾರದಿಂದ ಮಂಜೂರಾಗಿರುವ ವಲಯ ಅರಣ್ಯ ಅಧಿಕಾರಿಗಳ ಹುದ್ದೆಯ ಒಟ್ಟು ಸಂಖ್ಯೆ: ಎಷ್ಟು;</td><td><table><tr><th>ಕ್ರ.ಸಂ</th><th>ಮಂಜೂರಾದ ಹುದ್ದೆಗಳ ಸಂಖ್ಯೆ:</th><th>ಕರ್ತವ್ಯ ನಿರ್ವಹಿಸುತ್ತಿರುವ ಸಂಖ್ಯೆ:</th></tr><tr><td>1</td><td>765</td><td>672</td></tr></table></td></tr>
<tr><td>ಆ)</td><td>ಕೆ.ಸಿಎಸ್.ಆರ್. ನಿಯಮ 32 ರ ಅಡಿಯಲ್ಲಿ ಕರ್ತವ್ಯ ನಿರ್ವಹಿಸುತ್ತಿರುವ ವಲಯ ನಿರ್ವಹಿಸಲು ವಲಯ ಅರಣ್ಯ ಅಧಿಕಾರಿಗಳ ಸಂಖ್ಯೆ: ಎಷ್ಟು; ಅ</td><td>260</td></tr>
<tr><td>ಇ)</td><td>ಕೆ.ಸಿಎಸ್.ಆರ್. ನಿಯಮ 32 ರ ಅಡಿಯಲ್ಲಿ ಕರ್ತವ್ಯ ನಿರ್ವಹಿಸಲು ವಲಯ ಅರಣ್ಯ ಅಧಿಕಾರಿಗಳಿಗೆ ಇರುವುದು ಕೇವಲ 6 ತಿಂಗಳ ಕಾಲ ಅವಕಾಶವೆಂಬುವುದು ಸರ್ಕಾರದ ಗಮನಕ್ಕೆ ಬಂದಿದೆಯೇ; 6 ತಿಂಗಳ ನಂತರ ವಲಯ ಅರಣ್ಯ ಅಧಿಕಾರಿಗಳನ್ನು</td><td>ಕೆ.ಸಿ.ಎಸ್.ಆರ್. ನಿಯಮ 32 ರ ಅಡಿಯಲ್ಲಿ ವಲಯ ಅರಣ್ಯ ಅಧಿಕಾರಿ ಹುದ್ದೆಯಲ್ಲಿ ಕಾರ್ಯನಿರ್ವಹಿಸುತ್ತಿರುವ ನೌಕರರನ್ನು 6 ತಿಂಗಳ ನಂತರ ಮುಂದುವರೆಸಲು ಅನುಮತಿ ಕೋರಿ ಪ್ರಧಾನ ಮುಖ್ಯ ಅರಣ್ಯ ಸಂರಕ್ಷಣಾಧಿಕಾರಿಯವರು ಸಲ್ಲಿಸಿರುವ ಪ್ರಸ್ತಾವನೆಯು ಕೆಲವೊಂದು ಹೆಚ್ಚುವರಿ ಮಾಹಿತಿಗಾಗಿ ಸರ್ಕಾರದ ಪರಿಶೀಲನೆಯಲ್ಲಿದೆ.</td></tr>
</table>

| | | |
|---|---|---|
| | ಮುಂದುವರೆಸಲು ಇಲಾಖೆಯಲ್ಲಿ ಸರ್ಕಾರದ ವತಿಯಿಂದ ಅನುಮತಿಯನ್ನು ಪಡೆದುಕೊಂಡಿದೆಯೆ; (ವಿವರ ನೀಡುವುದು) | |
| ಈ) | ಕೆ.ಸಿಎಸ್.ಆರ್. ನಿಯಮ 32 ರ ಅಡಿಯಲ್ಲಿ ವಲಯ ಅರಣ್ಯ ಅಧಿಕಾರಿಗಳನ್ನು ನೇಮಿಸಿರುವುದರಿಂದ ಇಲಾಖೆಯಲ್ಲಿ ಉಪ ವಲಯ ಅರಣ್ಯ ಅಧಿಕಾರಿಗಳ ಹುದ್ದೆ ಕಡಿಮೆಯಾಗಿ ಅರಣ್ಯ ರಕ್ಷಣಾ ಕರ್ತವ್ಯಕ್ಕೆ ತೊಡಕಾಗಿರುವುದುನ ಸರ್ಕಾರದ ಗಮನಕ್ಕೆ ಬಂದಿದೆಯೆ; ಬಂದಿದ್ದರೆ, ಕೈಗೊಂಡಿರುವ ಕ್ರಮಗಳೇನು? | ವಲಯ ಅರಣ್ಯ ಅಧಿಕಾರಿ ಹುದ್ದೆಯು ಮಂಚೂಣಿ ಕ್ಷೇತ್ರ ಸಿಬ್ಬಂದಿ ಹುದ್ದೆಗಳ ಪೈಕಿ ಅತ್ಯಂತ ಜವಾಬ್ದಾರಿಯುತ ಹುದ್ದೆಯಾಗಿದ್ದು, ವಲಯ ವ್ಯಾಪ್ತಿಯ ಎಲ್ಲಾ ಅರಣ್ಯೀಕರಣ ಕಾರ್ಯಕ್ರಮಗಳನ್ನು ಹಾಗೂ ಸಂರಕ್ಷಣಾ ಕೆಲಸಗಳನ್ನು ವಲಯ ಅರಣ್ಯ ಅಧಿಕಾರಿಯ ಉಸ್ತುವಾರಿಯಲ್ಲಿ ಕೈಗೊಳ್ಳಬೇಕಾಗಿದೆ. ಹಾಗಾಗಿ ವಲಯ ಅರಣ್ಯ ಅಧಿಕಾರಿ ಹುದ್ದೆಯನ್ನು ಖಾಲಿ ಬಿಡುವುದರಿಂದ ವಲಯ ವ್ಯಾಪ್ತಿಯ ಕೆಲಸಗಳ ಮೇಲೆ ದುಷ್ಪರಿಣಾಮವುಂಟಾಗುತ್ತದೆ. ನೇರ ನೇಮಕಾತಿಗೆ ಮೀಸಲಾದ ಹುದ್ದೆಗಳನ್ನು ಕಾಲಕಾಲಕ್ಕೆ ಭರ್ತಿ ಮಾಡುವಲ್ಲಿ ಆಗುವ ವಿಳಂಭದಿಂದಾಗಿ ಸದರಿ ಖಾಲಿ ಹುದ್ದೆಳನ್ನು ಉಪ ವಲಯ ಅರಣ್ಯ ಅಧಿಕಾರಿಗಳಿಗೆ ಕರ್ನಾಟಕ ನಾಗರೀಕ ಸೇವಾ ನಿಯಮ 32 ರಡಿಯಲ್ಲಿ ಸ್ವತಂತ್ರ ಪ್ರಭಾರದ ಮೇಲೆ ನೇಮಿಸಿ ತಾತ್ಕಾಲಿಕವಾಗಿ ಭರ್ತಿ ಮಾಡಲಾಗುತ್ತದೆ. ಹಾಗೆಯೇ ನೇರ ನೇಮಕಾತಿಯಿಂದ ಭರ್ತಿ ಮಾಡಬೇಕಾದ ಉಪ ವಲಯ ಅರಣ್ಯ ಅಧಿಕಾರಿಗಳ ಹುದ್ದೆಗಳನ್ನು ಅರಣ್ಯ ರಕ್ಷಕರ ಹುದ್ದೆಯಿಂದ ಕರ್ನಾಟಕ ನಾಗರೀಕ ಸೇವಾ ನಿಯಮ 32 ರಡಿಯಲ್ಲಿ ತಾತ್ಕಾಲಿಕವಾಗಿ ಭರ್ತಿ ಮಾಡಲಾಗುತ್ತಿದೆ. |

ಸಂಖ್ಯೆ: ಅಪಜೀ 134 ಅಅಸೇ 2014

**(ಬಿ. ರಮಾನಾಥ ರೈ)**

ಅರಣ್ಯ ಸಚಿವರು

**ಕರ್ನಾಟಕ ವಿಧಾನ ಸಭೆ**

ಸದಸ್ಯರ ಹೆಸರು : ಶ್ರೀ ಶಿವಲಿಂಗೇಗೌಡ ಕೆ.ಎಂ. (ಅರಸೀಕೆರೆ)

ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 928

ಉತ್ತರಿಸುವ ಸಚಿವರು : ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

ಉತ್ತರಿಸಬೇಕಾದ ದಿನಾಂಕ :

| ಕ್ರ.ಸಂ | ಪ್ರಶ್ನೆ | ಉತ್ತರ | ಖಜಅಟಥ |
|---|---|---|---|
| ಅ) | ಅರಸೀಕೆರೆ ಕ್ಷೇತ್ರದ ರಂಗಾಪುರ ಕಾವಲು ಸರ್ವೆ ನಂ.1 ರಲ್ಲಿ ಸುಮಾರು 500-600 ಎಕರೆ ಭೂಮಿ ಕೈಗಾರಿಕಾ ಪ್ರದೇಶಕ್ಕೆ ಯೋಗ್ಯವಾಗಿದ್ದು, ಈ ಸ್ಥಳದಲ್ಲಿ ಟೆಕ್ಸ್‌ಟೈಲ್ಸ್ ತೆರೆಯುವ ಉದ್ದೇಶ ಸರ್ಕಾರದ ಮುಂದಿದೆಯೇ; | ಅರಸೀಕೆರೆ ತಾಲ್ಲೂಕು ರಂಗಾಪುರ ಕಾವಲು ಸರ್ವೇ ನಂ-01 ರಲ್ಲಿ ಸುಮಾರು 500 ಎಕರೆ ಸರ್ಕಾರಿ ಜಮೀನು (ಗೋಮಾಳ) ಕಂದಾಯ ಇಲಾಖೆ ಸುಪರ್ದಿಯಲ್ಲಿರುತ್ತದೆ.<br>ಈ ಭೂಮಿ ಗೋಮಾಳವಾಗಿರುವುದರಿಂದ ಗೋಮಾಳ ಜಮೀನನ್ನು ಬೇರೆ ಉದ್ದೇಶಕ್ಕಾಗಿ ಬದಲಾವಣೆ ಮಾಡಬೇಕಾದರೆ ಜಿಲ್ಲಾಧಿಕಾರಿಗಳು ಭೂ ಕಂದಾಯ ಕಾಯ್ದೆ ನೀತಿಯಂತೆ ಗೋಮಾಳದಿಂದ ಈ ಭೂಮಿಯನ್ನು ಕಡಿತಗೊಳಿಸಿ, ಕೆ.ಐ.ಎ.ಡಿ.ಬಿ.ಗೆ ನೀಡಿದಲ್ಲಿ, | About 500 acres of Govt, revenue land (Gomal) is available at Rangapura Kavalu Survey No.1 of Arasikere Taluk.<br>Since, it is the Revenue Gomal land, is needs to be converted by the Deputy Commissioner for other purposes as per the Land Revenue Act. Then land can be transferred by Revenue Department to the K.I.A.D.B for establishment of Textile Park on that land.<br>To establish the |

| | | | |
|---|---|---|---|
| | | ಸದರಿ ಜಮೀನಿನಲ್ಲಿ ಜವಳಿ ಪಾರ್ಕ್ ಮಾಡಬಹುದಾಗಿರುತ್ತದೆ.<br>ಜವಳಿ ಪಾರ್ಕ್ ಆಗಬೇಕಾದರೆ ಜವಳಿ ಪಾರ್ಕ್ ಮಾಡಬಯಸುವ ಉದ್ದೆಮೆದಾರರು (ಕನಿಷ್ಠ 5 ಉದ್ದಿಮೆದಾರರು ಸೇರಿ) ಒಂದು ಎಸ್.ಪಿ.ವಿ. ರಚನೆ ಮಾಡಿ, ಅದನ್ನು ಕಂಪನಿ ಕಾಯ್ದೆಯಡಿ ನೋಂದಾಯಿಸಿದಲ್ಲಿ, ಅವರಿಗೆ ಸದರಿ ಭೂಮಿಯನ್ನು ಮಾರುಕಟ್ಟೆ ದರದಲ್ಲಿ ವರ್ಗಾಯಿಸಲಾಗುವುದು, ಹೀಗೆ ಕನಿಷ್ಠ 15 ಎಕರೆ ಜಮೀನನ್ನು ಒದಗಿಸಿದಲ್ಲಿ, ಟೆಕ್ಸ್ ಟೈಲ್ ಪಾರ್ಕ್ ರಚನೆಯಾಗುತ್ತದೆ.<br>ಅರಸೀಕೆರೆ ಕ್ಷೇತ್ರವು ನೂತನ ಜವಳಿ ನೀತಿಯಡಿ ವಲಯ–2ರಲ್ಲಿ ಬರುತ್ತದೆ. ಜವಳಿ ಪಾರ್ಕ್‌ನಲ್ಲಿ ಮೂಲಭೂತ ಸೌಕರ್ಯ ಒದಗಿಸಲು ವಲಯ–2ರಲ್ಲಿನ ಪಾರ್ಕ್‌ಗಳಿಗೆ ಯೋಜನಾ ಮೊತ್ತದ ಶೇ.20 ರಷ್ಟು | Textile Park, a minimum of 5 entrepreneurs have to form and register a SPV as per the Company's Act. The required land will be transferred to the SPV at the market value. A minimum of 15 acres of land is required to establish the Textile Park.<br><br>As per the New Textile Policy, Arsikere comes under Zone-2. A provision for incentives has been made in Textile Policy for development of common infrastructure in Zone-2, Textile Park at 20% of the project cost or Rs.15.00 crores. |

| | | | |
|---|---|---|---|
| | | ಅಥವಾ ಗರಿಷ್ಠ ರೂ.15.00 ಕೋಟಿವರೆಗೆ ಪ್ರೋತ್ಸಾಹಧನ ನೀಡಲು ಅವಕಾಶವಿರುತ್ತದೆ. | |
| ಆ) | ಹಾಗಿದ್ದಲ್ಲಿ ತೆರೆಯುವ ಉದ್ದೇಶವಿದ್ದಲ್ಲಿ, ಯಾವಾಗ ಪ್ರಾರಂಭಿಸಲಾಗುವುದು ? | ಜವಳಿ ಉದ್ದಿಮೆದಾರರ ಎಸ್.ಪಿ.ವಿ. ಕಂಪನಿಯು ಮುಂದೆ ಬಂದು ಜವಳಿ ಕೈಗಾರಿಕೆಗಳನ್ನು ಸ್ಥಾಪಿಸಲು ಪ್ರಸ್ತಾವನೆ ಸಲ್ಲಿಸಿದಲ್ಲಿ ನಿಯಾಮಾನುಸಾರ ಪರಿಶೀಲಿಸಿ ಮಂಜೂರಾತಿ ನೀಡಲಾಗುವುದು. | The SPV company of the Textile entreprenrs if submits a proper proposal, it will be examined for sanction of park and incentives as per the norms. |

ವಾಕ್ರೈ 138 ಜಕ್ರೈಇ 2014

**(ಬಾಬುರಾವ್ ಚಿಂಚನಸೂರ)**

ಜವಳಿ, ಬಂದರು ಮತ್ತು ಒಳನಾಡು ಜಲಸಾರಿಗೆ ಸಚಿವರು

**ಕರ್ನಾಟಕ ವಿಧಾನ ಸಭೆ**

**(14ನೇ ವಿಧಾನಸಭೆ, 4ನೇ ಅಧಿವೇಶನ)**

1) ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ : 1939
2) ಸದಸ್ಯರ ಹೆಸರು : ಶ್ರೀ. ಸುರೇಶಗೌಡ.ಬಿ (ತುಮಕೂರು ಗ್ರಾಮಾಂತರ)
3) ಉತ್ತರಿಸುವ ದಿನಾಂಕ :
4) ಉತ್ತರಿಸುವವರು : ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

| ಕ್ರ.ಸಂ | ಪ್ರಶ್ನೆ | ಉತ್ತರ |
|---|---|---|
| ಅ) | ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಾಮಾಜಿಕ ಅರಣ್ಯ ಯೋಜನೆಯಡಿ ಹಸರೀಕರಣಕ್ಕಾಗಿ ಎಷ್ಟು ಹಣ ನಿಗಧಿಪಡಿಸಲಾಗಿದೆ (ವರ್ಷವಾರು,ತಾಲ್ಲೂಕುವಾರು ಮಾಹಿತಿ ನೀಡುವುದು): | ತುಮಕೂರು ಜಿಲ್ಲಾ ವ್ಯಾಪ್ತಿಯಲ್ಲಿ ಕಳೆದ ಮೂರು ವರ್ಷಗಳಿಂದ ಸಾಮಾಜಿಕ ಅರಣ್ಯ ಯೋಜನೆಯಡಿ ಹಸರೀಕರಣಕ್ಕಾಗಿ ನಿಗದಿಪಡಿಸಿದ ಅನುದಾನದ ವಿವರಗಳನ್ನು **ಅನುಬಂಧ-1** ರಲ್ಲಿ ನೀಡಲಾಗಿದೆ. |
| ಆ) | ಇದಕ್ಕಾಗಿ ನಿಗದಿಗೊಳಿಸಿರುವ ಭೌತಿಕ ಹಾಗೂ ಆರ್ಥಿಕ ಗುರಿ ಎಷ್ಟು; | ತುಮಕೂರು ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗಕ್ಕೆ 2011-12 ರಿಂದ 2013-14ನೇ ಸಾಲಿನವರೆಗೆ ತಾಲ್ಲೂಕುವಾರು ನಿಗಧಿಪಡಿಸಿರುವ ಭೌತಿಕ ಮತ್ತು ಆರ್ಥಿಕ ಗುರಿಯನ್ನು **ಅನುಬಂಧ-2**ರಲ್ಲಿ ನೀಡಲಾಗಿದೆ. |
| ಇ) | ಈವರೆವಿಗೂ ಜಿಲ್ಲಾ ವ್ಯಾಪ್ತಿಯಲ್ಲಿ ಸಾಧಿಸಿರುವ ಗುರಿ ಎಷ್ಟು (ತಾಲ್ಲೂಕುವಾರು ವಿವರ ನೀಡುವುದು)? | ತುಮಕೂರು ಜಿಲ್ಲೆಯಲ್ಲಿ ಸಾಮಾಜಿಕ ಅರಣ್ಯ ವಿಭಾಗಕ್ಕೆ 2011-12ರಿಂದ 2013-14ನೇ ಸಾಲಿನವರೆಗೆ ತಾಲ್ಲೂಕುವಾರು ಸಾಧಿಸಿರುವ ಭೌತಿಕ ಮತ್ತು ಆರ್ಥಿಕ ಸಾಧನೆಯನ್ನು **ಅನುಬಂಧ-3**ರಲ್ಲಿ ನೀಡಲಾಗಿದೆ. |

ಸಂಖ್ಯೆ: ಅಪಜೀ 76 ಎಫ್‌ಟಿಎಸ್ 2014

**(ಬಿ.ರಮಾನಾಥ ರೈ)**

ಅರಣ್ಯ, ಪರಿಸರ ಮತ್ತು ಜೀವಿಶಾಸ್ತ್ರ ಸಚಿವರು

**ಕರ್ನಾಟಕ ವಿಧಾನ ಸಭೆ**

| | |
|---|---|
| ಚುಕ್ಕೆ ಗುರುತಿನ ಪ್ರಶ್ನೆ ಸಂಖ್ಯೆ | 1172 |
| ಸದಸ್ಯರ ಹೆಸರು | ಶ್ರೀ.ರೇವಣ್ಣ ಹೆಚ್.ಡಿ. (ಹೊಳೇನರಸೀಪುರ) |
| ವಿಷಯ | ವಿಧವಾ ಮತ್ತು ವೃದ್ಧಾಪ್ಯ ವೇತನ |
| ಉತ್ತರಿಸಬೇಕಾದ ದಿನಾಂಕ | |
| ಉತ್ತರಿಸುವ ಸಚಿವರು | ಮಾನ್ಯ ಕಂದಾಯ ಸಚಿವರು. |
| **ಪ್ರಶ್ನೆ** | **ಉತ್ತರ** |
| ಅ) ರಾಜ್ಯದಲ್ಲಿ ಹಿಂದಿನ 2 ವರ್ಷಗಳಿಂದ ವಿಧವಾ ವೇತನ, ವೃದ್ಧಾಪ್ಯ ವೇತನ ಮತ್ತು ಅಂಗವಿಕಲ ವೇತನ ಕೋರಿ ಬಂದಿರುವ ಅರ್ಜಿಗಳೆಷ್ಟು (ಪೂರ್ಣ ಮಾಹಿತಿ ನೀಡುವುದು) | ರಾಜ್ಯದಲ್ಲಿ 2012-13 ಮತ್ತು 2013-14ನೇ ಸಾಲಿನಲ್ಲಿ ವಿಧವಾ ವೇತನ, ಇಂದಿರಾಗಾಂಧಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಹಾಗೂ ಅಂಗವಿಕಲ ವೇತನಗಳಡಿ ವೇತನ ಕೋರಿ ಬಂದಿರುವ ಅರ್ಜಿಗಳ ವಿವರ ಕೆಳಗಿನಂತಿದೆ: |

| **ಕ್ರ. ಸಂ** | **ಯೋಜನೆ** | **ಸ್ವೀಕೃತವಾಗಿರುವ ಅರ್ಜಿಗಳ ಸಂಖ್ಯೆ** | |
|---|---|---|---|
| | | **2012-13** | **2013-14** |
| 1. | ವಿಧವಾ ವೇತನ | 217338 | 301287 |
| 2. | ಇಂದಿರಾಗಾಂಧಿ | 45883 | 103331 |
| 3. | ಸಂಧ್ಯಾ ಸುರಕ್ಷಾ | 362791 | 650818 |
| 4. | ಅಂಗವಿಕಲ | 100890 | 137913 |
| **ಒಟ್ಟು** | | **7,26,902** | **11,93,349** |

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-1ರಲ್ಲಿ ಲಗತ್ತಿಸಲಾಗಿದೆ.

ಆ) ಹಾಗಿದ್ದಲ್ಲಿ ಇದರಲ್ಲಿ ವಿಲೇವಾರಿಯಾದ ಹಾಗೂ ಬಾಕಿ ಉಳಿದಿರುವ ಅರ್ಜಿಗಳೆಷ್ಟು (ಸಂಪೂರ್ಣ ಮಾಹಿತಿ ನೀಡುವುದು)

ರಾಜ್ಯದಲ್ಲಿ 2012-13 ಮತ್ತು 2013-14ನೇ ಸಾಲಿನಲ್ಲಿ ವಿಧವಾ ವೇತನ, ಇಂದಿರಾಗಾಂಧಿ ವೃದ್ಧಾಪ್ಯ ವೇತನ, ಸಂಧ್ಯಾ ಸುರಕ್ಷಾ ಹಾಗೂ ಅಂಗವಿಕಲ ವೇತನಗಳಡಿ ವಿಲೇವಾರಿಯಾದ ಅರ್ಜಿಗಳ ವಿವರ ಈ ಕೆಳಕಂಡಂತಿದೆ:

| ಕ್ರ ಸಂ | ಯೋಜನೆ | ವಿಲೇವಾರಿಯಾದ ಅರ್ಜಿಗಳ ಸಂಖ್ಯೆ | |
|---|---|---|---|
| | | **2012-13** | **2013-14** |
| 1. | ವಿಧವಾ ವೇತನ | 149328 | 307862 |
| 2. | ಇಂದಿರಾಗಾಂಧಿ | 23858 | 98400 |
| 3. | ಸಂಧ್ಯಾ ಸುರಕ್ಷಾ | 182321 | 656547 |
| 4. | ಅಂಗವಿಕಲ | 54840 | 140025 |
| **ಒಟ್ಟು** | | **410347** | **1202834** |

2013ರ ಮೇ ವಿಧಾನಸಭೆ ಚುನಾವಣೆ ನೀತಿ ಸಂಹಿತೆ ಹಿನ್ನೆಲೆಯಲ್ಲಿ ಮಾರ್ಚ್ 2013ಕ್ಕೆ ಬಾಕಿ ಉಳಿದಿದ್ದ 316555 ಅರ್ಜಿಗಳನ್ನು ಜೂನ್ 2013ರಲ್ಲಿ ವಿಲೇಗೊಳಿಸಲಾಗಿದೆ.

ಮಾರ್ಚ್ 2014ರ ಅಂತ್ಯಕ್ಕೆ 160762 ಅರ್ಜಿಗಳು ಬಾಕಿ ಇರುತ್ತದೆ. ಮಾರ್ಚ್ 2014ರ ಅಂತ್ಯದಲ್ಲಿ ಮೇ 2014ರವರೆಗೆ ಲೋಕಸಭೆ ಚುನಾವಣೆ ನೀತಿ ಸಂಹಿತೆ ಜಾರಿಯಲ್ಲಿದ್ದ ಕಾರಣ ಅರ್ಜಿಗಳ ವಿಲೇವಾರಿಯಲ್ಲಿ ವಿಳಂಬವಾಗಿರುತ್ತದೆ.

ಜಿಲ್ಲಾವಾರು ಮಾಹಿತಿಯನ್ನು ಅನುಬಂಧ-2 ಮತ್ತು 3ರಲ್ಲಿ ಲಗತ್ತಿಸಲಾಗಿದೆ.

ಸಂ. ಆರ್‌ಡಿ 97 ಡಿಎಸ್‌ಪಿ

**(ವಿ.ಶ್ರೀನಿವಾಸ್ ಪ್ರಸಾದ್)**

ಕಂದಾಯ ಸಚಿವರು

## ಮಾದರಿ–1

## (ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)

## ಕರ್ನಾಟಕ ವಿಧಾನ ಸಭೆ

## ಹದಿಮೂರನೇ ವಿಧಾನಸಭೆ

## (ಮೊದಲನೇ ಅಧಿವೇಶನ)

ದಿನಾಂಕ -------

**ಶ್ರೀ ------------ (ಸದಸ್ಯರ ಹೆಸರು)**

**(1218)** ಮಾನ್ಯ ಮೂಲಭೂತ ಸೌಲಭ್ಯ ಅಭಿವೃದ್ಧಿ ಮತ್ತು ವಾರ್ತಾ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ಅನುಷ್ಠಾನಗೊಳಿಸಲಾಗುತ್ತಿರುವ ಯೋಜನೆಗಳು ಯಾವುವು?

(ಆ) ಕಲಾವಿದರ ಮಾಸಾಶನ ಮಂಜೂರಾತಿಗಾಗಿ ಸರ್ಕಾರ ನಿಗದಿಪಡಿಸಿರುವ ಮಾನದಂಡಗಳೇನು? (ಸಂಪೂರ್ಣ ಮಾಹಿತಿ ನೀಡುವುದು)

(ಇ) ಗುಲ್ಬರ್ಗಾ ಜಿಲ್ಲೆಯಲ್ಲಿ ಪ್ರಸ್ತುತ ಮಾಸಾಶನ ಪಡೆಯುತ್ತಿರುವ ಕಲಾವಿದರ ಸಂಖ್ಯೆ ಎಷ್ಟು; (ಕಲಾವಿದರ ಹೆಸರು ಸಹಿತ, ತಾಲ್ಲೂಕುವಾರು ಸಂಪೂರ್ಣ ವಿವರ ನೀಡುವುದು)?

**ಮಾದರಿ–1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

**ಹದಿನಾಲ್ಕನೇ ವಿಧಾನಸಭೆ**

**ಮೊದಲನೇ ಅಧಿವೇಶನ**

**(ಮುಂದುವರಿದ ಉಪವೇಶನ)**

ದಿನಾಂಕ -------

ಶ್ರೀ ------------ **(ಸದಸ್ಯರ ಹೆಸರು)**

**(690)** ಮಾನ್ಯ ವಸತಿ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಬಸವಶ್ರೀ ವಸತಿ ಯೋಜನೆ ಹಾಗೂ ಇಂದಿರಾ ಆವಾಸ್ ವಸತಿ ಯೋಜನೆಯ ಮನೆಗಳನ್ನು ಇಷ್ಟೇ ಅಳತೆಯಲ್ಲಿ ನಿರ್ಮಿಸಬೇಕೆಂಬ ನಿರ್ಬಂಧ ವಿಧಿಸಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ: ಮನೆಯ ನಿರ್ಮಾಣದ ಅಳತೆಯಲ್ಲಿ ಹೆಚ್ಚು ಕಡಿಮೆ ಆದಲ್ಲಿ ಸಹಾಯ ಧನವನ್ನು ಮಂಜೂರು ಮಾಡದೇ ಇರುವುದು ಸಮಂಜಸವೇ; ಈ ನಿರ್ಬಂಧವನ್ನು ಬದಲಾವಣೆ ಮಾಡುವ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ?

(ಆ) ಕಳೆದ 3 ವರ್ಷಗಳ ಅವಧಿಯಲ್ಲಿ ಸದರಿ ಯೋಜನೆಗಳಲ್ಲಿ ನಿರ್ಮಿಸಿರುವ ಮತ್ತು ಹಂಚಿಕೆ ಮಾಡಿರುವ ಮನೆಗಳ ಸಂಖ್ಯೆ ಎಷ್ಟು; (ಕ್ಷೇತ್ರವಾರು ಮಾಹಿತಿ ನೀಡುವುದು)?

**ಮಾದರಿ–1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ವಿಧಾನ ಸಭೆ**

**ಹದಿಮೂರನೇ ವಿಧಾನಸಭೆ**

**(ಮೊದಲನೇ ಅಧಿವೇಶನ)**

ದಿನಾಂಕ --------

**ಶ್ರೀ ------------- (ಸದಸ್ಯರ ಹೆಸರು)**

**(1255)** ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಸರ್ಕಾರಿ ಕಾಲೇಜುಗಳಲ್ಲಿ ರಿಯಾಯಿತಿ ದರದಲ್ಲಿ ಮಧ್ಯಾಹ್ನ ಬಿಸಿಯೂಟ ಒದಗಿಸುವ ಯಾವುದೇ ಪ್ರಸ್ತಾವನೆ ಸರ್ಕಾರದ ಮುಂದಿದೆಯೇ: ಹಾಗಿದ್ದಲ್ಲಿ, ಯಾವಾಗ ಇದನ್ನು ಪ್ರಾರಂಭಿಸಲಾಗುವುದು?

## ಮಾದರಿ–1

## (ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)

## ಕರ್ನಾಟಕ ವಿಧಾನ ಪರಿಷತ್ತು

## (ನೂರಇಪ್ಪತ್ತೆರಡನೇ ಅಧಿವೇಶನ)

## (ಮುಂದುವರಿದ ಉಪವೇಶನ)

ದಿನಾಂಕ **-------**

ಶ್ರೀ **------------ (ಸದಸ್ಯರ ಹೆಸರು)**

**(676)** ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:–

(ಅ) ಚಿಕ್ಕಮಗಳೂರು ಪಟ್ಟಣದಲ್ಲಿ ಮಹಿಳಾ ಪದವಿ ಕಾಲೇಜು ಪ್ರಾರಂಭಿಸುವ ಆಲೋಚನೆ ಸರ್ಕಾರದ ಮುಂದಿದೆಯೇ?

(ಆ) ಮಹಿಳಾ ಕಾಲೇಜು ಇಲ್ಲದೇ ಇರುವುದರಿಂದ ವಿದ್ಯಾರ್ಥಿನಿಯರಿಗೆ ತೊಂದರೆಯಾಗುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಇ) ಪ್ರಸ್ತುತ ಅಲ್ಲಿ ಒಂದೆ ಸರ್ಕಾರಿ ಕಾಲೇಜು ಇರುವುದರಿಂದ ವಿದ್ಯಾರ್ಥಿಗಳು ಪ್ರವೇಶಕ್ಕಾಗಿ ಅಲೆದಾಡುತ್ತಿರುವುದನ್ನು ತಪ್ಪಿಸಲು ಸರ್ಕಾರ ಯಾವ ಕ್ರಮ ತೆಗೆದುಕೊಂಡಿದೆ?

**ಮಾದರಿ-1**

**(ಸದನದಲ್ಲಿ ಉತ್ತರಿಸುವ (ಚುಕ್ಕೆ ಗುರುತಿನ) ಪ್ರಶ್ನೆಗಳ ಕೆಲವು ಮಾದರಿಗಳು)**

**ಕರ್ನಾಟಕ ಪರಿಷತ್ತು**

**ಹದಿಮೂರನೇ ವಿಧಾನಸಭೆ**

**(ಮೊದಲನೇ ಅಧಿವೇಶನ)**

ದಿನಾಂಕ **-------**

ಶ್ರೀ **------------ (ಸದಸ್ಯರ ಹೆಸರು)**

**(165)** ಮಾನ್ಯ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ರಾಜ್ಯ ಸಚಿವರು ಈ ವಿಷಯಗಳನ್ನು ದಯವಿಟ್ಟು ತಿಳಿಸುವರೆ:-

(ಅ) ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಇಲಾಖೆಯ ವ್ಯಾಪ್ತಿಯಲ್ಲಿ ಬರುವ ಗ್ರಂಥಾಲಯಗಳು ದುಸ್ಥಿತಿಯಲ್ಲಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

(ಆ) ಸದರಿ ಗ್ರಂಥಾಲಯಗಳಲ್ಲಿ ಕಾರ್ಯನಿರ್ವಹಿಸುತ್ತಿರುವ ಸಿಬ್ಬಂದಿಗಳ ಜಿಲ್ಲಾವಾರು ವಿವರ ನೀಡುವುದು?

(ಇ) ಎಷ್ಟು ಗ್ರಂಥಾಲಯಗಳಲ್ಲಿ ಗ್ರಂಥಪಾಲಕರು ಹಾಗೂ ಸಿಬ್ಬಂದಿಗಳ ಹುದ್ದೆ ಖಾಲಿ ಇವೆ; ಭರ್ತಿ ಮಾಡಲು ಸರ್ಕಾರ ತೆಗೆದುಕೊಳ್ಳುವ ನಿಲುವು ಏನು?

## ಅನುಬಂಧ-IX

## ಗಮನ ಸೆಳೆಯುವ ಸೂಚನೆಗಳು

## ಗಮನ ಸೆಳೆಯುವ ಸೂಚನೆ (ನಿಯಮ 72)

ಸದಸ್ಯರು ಸಭಾಪತಿಯವರ ಪೂರ್ವಭಾವಿ ಅನುಮತಿಯೊಂದಿಗೆ ಸಾರ್ವಜನಿಕ ಮಹತ್ವದ ಯಾವುದೇ ಜರೂರು ವಿಷಯದ ಬಗ್ಗೆ ಮಂತಿಗಳ ಗಮನಸೆಳೆಯಬಹುದು ಹಾಗೂ ಮಂತ್ರಿಗಳು ಸದನದಲ್ಲಿ ಆ ಬಗ್ಗೆ ಸಂಕ್ಷಿಪ್ತವಾದ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಆ ಕಾಲಕ್ಕೆ ಚರ್ಚೆ ಇರುವುದಿಲ್ಲ. ಆದರೆ ಕಾರ್ಯಕಲಾಪಗಳ ಪಟ್ಟಿಯಲ್ಲಿ ತಿಳಿಸಿರುವಂತೆ ಐದು ಸದಸ್ಯರಿಗಿಂತ ಹೆಚ್ಚಿಲ್ಲದಂತೆ ವಿಷಯಕ್ಕೆ ಸಂಬಂಧಪಟ್ಟ ಪ್ರತಿಯೊಬ್ಬ ಸದಸ್ಯರು ಕಾರ್ಯಕಲಾಪಗಳ ಪಟ್ಟಿಯ ಮೇರೆಗೆ ಸಭಾಪತಿಯವರ ಅನುಮತಿಯೊಂದಿಗೆ ಸ್ಪಷ್ಟೀಕರಣ ಕೋರಬಹುದು. ಯಾವುದೇ ಸದಸ್ಯರು ಒಂದು ಉಪವೇಶನದಲ್ಲಿ ಒಂದೇ ವಿಷಯಕ್ಕೆ ಸಂಬಂಧಿಸಿದಂತೆ ಎರಡು ಬಾರಿ ಸೂಚನೆಗಳನ್ನು ನೀಡತಕ್ಕದ್ದಲ್ಲ.

ಸೂಚನಾ ಪತ್ರಗಳನ್ನು ನಿಗದಿಪಡಿಸಲಾದ ನಮೂನೆಯಲ್ಲಿ ಸದಸ್ಯರು ವಿದ್ಯುಕ್ತವಾಗಿ ಸಹಿ ಮಾಡಿ ವಿಧಾನ ಪರಿಷತ್ತಿನ ಪ್ರಶ್ನೆಗಳ ಶಾಖೆಗೆ (ಕೊಠಡಿ ಸಂಖ್ಯೆ: 103) ಬೆಳಿಗ್ಗೆ 10.00 ಗಂಟೆಯೊಳಗೆ ನೀಡಬೇಕು. ಕಚೇರಿಯು ಮುಚ್ಚಿರುವ ಸಮಯದಲ್ಲಿ ಸೂಚನಾ ಪತ್ರವನ್ನು ಪ್ರಶ್ನೆಗಳ ಶಾಖೆಯ (ಕೊಠಡಿ ಸಂಖ್ಯೆ: 103) ಹೊರಗಡೆ ಇಟ್ಟಿರುವ ಪೆಟ್ಟಿಗೆಯಲ್ಲಿ ಹಾಕಬಹುದಾಗಿದೆ. ಆ ದಿನದ ಬೆಳಿಗ್ಗೆ 10.00 ಗಂಟೆಯ ನಂತರ ಪಡೆಯಲಾಗುವ ಸೂಚನಾ ಪತ್ರಗಳನ್ನು ಸದನದ ಮರು ದಿನದ ಉಪವೇಶನಕ್ಕೆ ನೀಡಲಾಗಿದೆಯೆಂದು ಪರಿಗಣಿಸಲಾಗುವುದು. ಸ್ವೀಕೃತವಾದ ಹಾಗೂ ಮಂಡಿಸಿದ ಎಲ್ಲಾ ಸೂಚನಾ ಪತ್ರಗಳು ಒಂದು ವಾರದವರೆಗೆ ಮಾನ್ಯವಾಗಿರುತ್ತವೆ.

ಸಭಾಪತಿಯವರು ಆಯ್ಕೆ ಮಾಡದೆ ಉಳಿದಂತಹ ಸೂಚನೆಗಳು, ಅವುಗಳನ್ನು ಮಂಡಿಸಲಾದ ವಾರದ ಕೊನೆಯಲ್ಲಿ ಅವಾಗಿಯೇ ರದ್ದಾಗುತ್ತವೆ. ಈ ಬಗ್ಗೆ ಸದಸ್ಯರುಗಳಿಗೆ ಯಾವುದೇ ಮಾಹಿತಿ ನೀಡಲಾಗುವುದಿಲ್ಲ. ಆದಾಗ್ಯೂ ಸದಸ್ಯರು ಇಚ್ಛಿಸಿದಲ್ಲಿ ಅದೇ ವಿಷಯದ ಬಗ್ಗೆ ಹೊಸದಾಗಿ ಸೂಚನಾ ಪತ್ರವನ್ನು ನೀಡಬಹುದು.

## ಅರ್ಧ ಗಂಟೆ ಕಾಲದ ಚರ್ಚೆ (ನಿಯಮ-58)

ವಿಧಾನ ಪರಿಷತ್ತಿನಲ್ಲಿ ಇತ್ತೀಚೆಗೆ ಕೇಳಿರುವ ಒಂದು ಪ್ರಶ್ನೆಯು ಸಾರ್ವಜನಿಕ ದೃಷ್ಟಿಯಿಂದ ಸಾಕಷ್ಟು ಪ್ರಾಮುಖ್ಯವಾಗಿದ್ದು, ಆ ಪ್ರಶ್ನೆಗೆ ವಿಧಾನ ಪರಿಷತ್ತಿನಲ್ಲಿ ಉತ್ತರ ನೀಡಿದ್ದಲ್ಲಿ ಅಥವಾ ಉತ್ತರವನ್ನು ಸಭೆಯ ಮುಂದೆ ಇಟ್ಟಿದ್ದಲ್ಲಿ ಅವುಗಳನ್ನು ಗಣನೆಗೆ ತೆಗೆದುಕೊಳ್ಳದೆ, ಆ ಪ್ರಶ್ನೆಗೆ ಕೊಟ್ಟಿರುವ ಉತ್ತರದಲ್ಲಿರತಕ್ಕ ಒಂದು ವಿಷಯವನ್ನು ವಿಶದಪಡಿಸುವುದು ಅಗತ್ಯವಿದ್ದು, ಆ ಪ್ರಶ್ನೆಯ ವಿಚಾರವನ್ನು ಸದಸ್ಯರು ಚರ್ಚೆಗೆ ತೆಗೆದುಕೊಳ್ಳಬಹುದು. ಸಭಾಪತಿಗಲು ವಾರದ ಎರಡು ದಿನಗಳಲ್ಲಿ ಅಂದರೆ ಮಂಗಳವಾರ ಮತ್ತು ಗುರುವಾರಗಳಂದು ಅರ್ಧಗಂಟೆ ಕಾಲದ ಚರ್ಚೆಗೆ ಅವಕಾಶ ಮಾಡಿಕೊಡುತ್ತಾರೆ ಅಥವಾ ಮೇಲೆ ತಿಳಿಸಿರುವ ದಿನಗಳ ಬದಲು ಸಭಾಪತಿಗಳು ಯಾವುದೇ ದಿನದಂದು ಚರ್ಚೆಗೆ ಅವಕಾಶ ಮಾಡಿಕೊಡಬಹುದು.

ಆ ಸದಸ್ಯರು ಯಾವ ದಿನ ಆ ವಿಷಯವನ್ನು ಚರ್ಚೆಗೆ ತರಬೇಕೆಂದು ಇಚ್ಛಿಸುತ್ತಾರೋ ಆ ದಿನಕ್ಕೆ ಮೂರು ದಿವಸಗಳಿಗೆ ಮುಂಚಿತವಾಗಿ ಕಾರ್ಯದರ್ಶಿಯವರಿಗೆ ಲಿಖಿತ ಮೂಲಕ ಸೂಚನಾಪತ್ರವನ್ನು ಕೊಡಬೇಕು ಹಾಗೂ ತಾವು ಪ್ರಸ್ತಾಪಿಸಬೇಕೆಂದಿರುವ ಅಂಶ ಅಥವಾ ಅಂಶಗಳನ್ನು ಸಂಕ್ಷಿಪ್ತವಾಗಿ ನಮೂದಿಸಬೇಕು. ಸೂಚನಾಪತ್ರವು ಸಂಬಂಧಪಟ್ಟಿರುವ ವಿಷಯದ ಬಗ್ಗೆ ಚರ್ಚೆ ನಡೆಸಲು ಕಾರಣಗಳನ್ನು ಒಳಗೊಂಡ ಒಂದು ವಿವರಣಾತ್ಮಕ ಟಿಪ್ಪಣಿಯನ್ನು ನೀಡಬೇಕು.

ಮಾನ್ಯ ವಿರೋಧ ಪಕ್ಷದ ನಾಯಕರಾದ ಶ್ರೀ ಸದಾನಂದಗೌಡ ಹಾಗೂ ವಿಧಾನ ಪರಿಷತ್ತಿನ ಮಾನ್ಯ ಸದಸ್ಯರುಗಳಾದ ಪ್ರೊ:ಪಿ.ವಿ.ಕೃಷ್ಣಭಟ್, ಡಾ: ದೊಡ್ಡರಂಗೇಗೌಡ, ಕ್ಯಾಪ್ಟನ್ ಗಣೇಶ್ ಕಾರ್ಣಿಕ್, ಶ್ರೀ ವೈ.ಎ.ನಾರಾಯಣಸ್ವಾಮಿ ಹಾಗೂ ಶ್ರೀ ಅರುಣ ಶಹಾಪೂರ ಇವರುಗಳು ನಿಯಮ 68ರಡಿಯಲ್ಲಿ ನೀಡಿರುವ ಸೂಚನಾ ಪತ್ರಕ್ಕೆ ಮಾನ್ಯ ಉನ್ನತ ಶಿಕ್ಷಣ ಹಾಗೂ ಪ್ರವಾಸೋದ್ಯಮ ಸಚಿವರ ಉತ್ತರ

## ಪ್ರಶ್ನೆ:-

2014-15ನೇ ಸಾಲಿನಿಂದ ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗಧಿ) ಕಾಯ್ದೆ 2006ನ್ನು ಜಾರಿ ಮಾಡಲು ಸರ್ಕಾರ ಮುಂದಾಗಿದೆ. ಈ ಕಾಯ್ದೆ ಜಾರಿಯಾದರೆ ಖಾಸಗಿ ಕಾಲೇಜುಗಳಲ್ಲಿನ ಸರ್ಕಾರಿ ಖೋಟಾದ ಸೀಟುಗಳು ಪೂರ್ತಿಯಾಗಿ ಖಾಸಗಿ ಕಾಲೇಜಿನ ಪಾಲಾಗಲಿವೆ. ಅಲ್ಲದೆ ವಿದ್ಯಾರ್ಥಿಗಳು ಖಾಸಗಿ ಕಾಲೇಜಿನ ಸೀಟಿಗಾಗಿ ಮತ್ತು ಸರ್ಕಾರಿ ಹಾಗೂ ಸರ್ಕಾರದ ಅನುದಾನಿತ ಕಾಲೇಜುಗಳ ಸೀಟಿಗಾಗಿ ಎರಡೆರಡು ಸಿಇಟಿ ಪರೀಕ್ಷೆಗಳನ್ನು ಬರೆಯಬೇಕಾಗಿರುತ್ತದೆ. ಅಲ್ಲದೆ ಖಾಸಗಿ ಕಾಲೇಜುಗಳು ತಮ್ಮಲ್ಲಿರುವ ಮೂಲಸೌಕರ್ಯ, ಶಿಕ್ಷಣದ ಗುಣಮಟ್ಟ ಇತ್ಯಾದಿ ಮೇಲೆ ತಗಲುವ ವೆಚ್ಚದ ವರದಿಯ ಆಧಾರದ ಮೇಲೆ ಹೆಚ್ಚಿನ ಶುಲ್ಕ ನಿಗಧಿಪಡಿಸಲಾಗುತ್ತದೆ, ಇದರಿಂದಾಗಿ ಮೆರಿಟ್ ಹೊಂದಿರುವ ಬಡ ಮತ್ತು ಗ್ರಾಮೀಣ ಪ್ರದೇಶದ ವಿದ್ಯಾರ್ಥಿಗಳಿಗೆ ಅನಾನುಕೂಲವಾಗುತ್ತದೆ. ಇದು ವೃತ್ತಿ ಶಿಕ್ಷಣದ ಕನಸು ಕಟ್ಟಿಕೊಂಡಿರುವ ಬಡ ಮತ್ತು ಮಧ್ಯಮ ವರ್ಗದ ಪ್ರತಿಭಾವಂತ ವಿದ್ಯಾರ್ಥಿಗಳು ಉನ್ನತ ಶಿಕ್ಷಣ ಪಡೆಯುವುದು ಕನಸಾಗಿಯೇ ಉಳಿಯಲಿದೆ. ಬಡ ಮತ್ತು ಪ್ರತಿಭಾನ್ವಿತ ವಿದ್ಯಾರ್ಥಿಗಳು ಉನ್ನತ ಶಿಕ್ಷಣದ ಹಕ್ಕನ್ನು ಕಳೆದುಕೊಳ್ಳುವ ಭೀತಿಯ ವಿದ್ಯಾರ್ಥಿಗಳು ಮತ್ತು ಪೋಷಕರನ್ನು ಕಾಡುತ್ತಿದ್ದು, ಇದರ ಬಗ್ಗೆ ವ್ಯಾಪಕವಾದ ಪ್ರತಿಭಟನೆಗಳು ನಡೆಯುತ್ತಿವೆ.

## ಉತ್ತರ

ಕರ್ನಾಟಕ ವೃತ್ತಿ ಶಿಕ್ಷಣ ಸಂಸ್ಥೆಗಳ (ಪ್ರವೇಶ ನಿಯಂತ್ರಣ ಮತ್ತು ಶುಲ್ಕ ನಿಗದಿ) ಕಾಯ್ದೆ 2006ರ ಅಧಿನಿಯಮವನ್ನು ಜಾರಿಗೆ ತಂದರು ಸಹ 2006-2007ನೇ ಸಾಲಿನಿಂದ 2013-14ನೇ ಸಾಲಿನವರೆಗೆ ತಡೆಹಿಡಿದು ಆಡಳಿತ ಮಂಡಳಿಯೊಂದಿಗೆ ಸಮ್ಮತಾಭಿಪ್ರಾಯದ ಮೇರೆಗೆ ಪ್ರವೇಶಾತಿಯನ್ನು ಮಾಡಿಕೊಂಡು ಬರಲಾಗಿದೆ. 2014-15ನೇ ಸಾಲಿಗೆ ಈ ಕಾಯ್ದೆಯನ್ನು ತಡೆಹಿಡಿದು ವಿದ್ಯಾರ್ಥಿಗಳ ಹಿತದೃಷ್ಟಿಯನ್ನು ಗಮನದಲ್ಲಿಟ್ಟುಕೊಂಡು ಆಡಳಿತ ಮಂಡಳಿಯೊಂದಿಗೆ ಚರ್ಚಿಸಿ ಸಮ್ಮತಾಭಿಪ್ರಾಯವನ್ನು ಮಾಡಿಕೊಂಡು ಪ್ರವೇಶಾತಿಯನ್ನು ಮಾಡಿಕೊಳ್ಳಲಾಗುವುದು.

ಇಡಿ 29 ಟಿಜಿಎಲ್ 2014 **(ಆರ್.ವಿ.ದೇಶಪಾಂಡೆ)**

ಮಾನ್ಯ ಉನ್ನತ ಶಿಕ್ಷಣ ಮತ್ತು ಪ್ರವಾಸೋದ್ಯಮ ಸಚಿವರು

<u>**ಪ್ರಶ್ನೆ:-**</u>

**ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಗಡಿ ರಾಜ್ಯವಾಗಿರುವ ಮಹಾರಾಷ್ಟ್ರ ರಾಜ್ಯವನ್ನು ತಲುಪಲು ದೂಧಗಂಗಾ ನದಿಗೆ ನಿರ್ಮಿಸಿರುವ ಬ್ರಿಡ್ಜ್ ಕಂ.ಬ್ಯಾರೇಜ್ ಸೇತುವೆ ಕಾಮಗಾರಿಯು ಅವೈಜ್ಞಾನಿಕವಾಗಿ ನಿರ್ಮಿಸಿರುವ ಕುರಿತು ವಿಧಾನ ಪರಿಷತ್ತಿನ ಸದಸ್ಯರಾದ ಶ್ರೀ. ಮಹಾಂತೇಶ ಮ.ಕವಟಗಿಮಠ ಇವರು ನಿಯಮ 72ರಡಿ ನೀಡಿರುವ ಗಮನ ಸೆಳೆಯುವ ಸೂಚನೆಗೆ ಸನ್ಮಾನ್ಯ ಜಲ ಸಂಪನ್ಮೂಲ ಸಚಿವರ ಉತ್ತರ.**

ಬೆಳಗಾವಿ ಜಿಲ್ಲೆಯ ಚಿಕ್ಕೋಡಿ ತಾಲ್ಲೂಕಿನ ಸದಲಗಾ ಹತ್ತಿರ ದೂಧಗಂಗಾ ನದಿಗೆ ಅಡ್ಡಲಾಗಿ ಬ್ರಿಡ್ಜ್ ಕಂ.ಬ್ಯಾರೇಜ್ ನಿರ್ಮಾಣ ಕಾಮಗಾರಿಗೆ ಸರ್ಕಾರವು ದಿನಾಂಕ 29.04.2010ರಲ್ಲಿ ಆಡಳಿತಾತ್ಮಕ ಅನುಮೋದನೆ ನೀಡಿ, ಕಾಮಗಾರಿಯನ್ನು ಅನುಷ್ಠಾನಕ್ಕಾಗಿ ಕೈಗೆತ್ತಿಕೊಳ್ಳಲು ಸೂಚಿಸಲಾಗಿತ್ತು. ಇದರನ್ವಯ ಗಡಿಭಾಗದ 8 ಗ್ರಾಮಗಳ ಜನರಿಗೆ ನೀರಾವರಿ ಮತ್ತು ಬೇಸಿಗೆಯಲ್ಲಿ ಕುಡಿಯುವ ನೀರಿನ ಸೌಲಭ್ಯ ಕಲ್ಪಿಸುವ ರೂ.583.28 ಲಕ್ಷಗಳ ಮೊತ್ತದ ಸದರಿ ಕಾಮಗಾರಿಯನ್ನು ಟೆಂಡರ್ ಮೂಲಕ ದಿನಾಂಕ 23.11.2011 ರಂದು ಗುತ್ತಿಗೆ ವಹಿಸಲಾಗಿರುತ್ತದೆ. ಆದರೆ, ಮಂಜೂರಾದ ಅಂದಾಜು ಪತ್ರಿಕೆಯನ್ವಯ ಮೂಲ ಸ್ಥಳದಲ್ಲಿ ಕಾಮಗಾರಿ ಪ್ರಾರಂಭಿಸಿದಾಗ ಅಡಿಪಾಯಕ್ಕೆ ಅವಶ್ಯವಿರುವ ಗಟ್ಟಿಸ್ಥಳವು ಲಭ್ಯವಿಲ್ಲದ್ದನ್ನು ದಿನಾಂಕ 29.11.2011 ರಂದು ಮುಖ್ಯ ಇಂಜಿನೀಯರ್, ಕನೀನಿನಿ, ನೀರಾವರಿ (ಉತ್ತರ) ವಲಯ, ಬೆಳಗಾವಿ ಇವರು ಪರಿವೀಕ್ಷಣಾ ಸಮಯದಲ್ಲಿ ಗಮನಿಸಿ, ಬ್ರಿಡ್ಜ್ ಕಂ ಬ್ಯಾರೇಜಿನ ಸ್ಥಳವನ್ನು ಮೂಲ ಕಾಮಗಾರಿ ಸ್ಥಳದಿಂದ 500 ಮೀಟರ್‌ನಷ್ಟು ಕೆಳಭಾಗದಲ್ಲಿ ಮತ್ತು ಹಳೆಯ ಶಿಥಿಲಗೊಂಡಿರುವ ಬಾಂದಾರಕ್ಕೆ 30 ಮೀಟರ್ ಮೇಲ್ಭಾಗದಲ್ಲಿ ನಿರ್ಮಿಸುವ ಕುರಿತು ಪರಿಶೀಲಿಸಲು ಶಿಫಾರಸ್ಸು ಮಾಡಿದ್ದು, ಅದರನ್ವಯ ಮೂಲ ಉದ್ದೇಶಿತ ಸ್ಥಳದ ಬದಲಾಗಿ ಹೊಸದಾಗಿ ಅಡಿಪಾಯಕ್ಕೆ ಸೂಕ್ತವಾಗಿರುವ ಪರ್ಯಾಯ ಸ್ಥಳದಲ್ಲಿ ಬ್ರಿಡ್ಜ್ ಕಂ ಬ್ಯಾರೇಜಿನ ನಿರ್ಮಾಣಕ್ಕೆ ಪ್ರಸ್ತಾವನೆಯನ್ನು ತಯಾರಿಸಿ ಸಕ್ಷಮ ಪ್ರಾಧಿಕಾರದಿಂದ ಅನುಮೋದನೆ ನೀಡಿ ಕಾಮಗಾರಿಯನ್ನು ನಿರ್ವಹಿಸಲಾಗುತ್ತಿದೆ. ಬ್ರಿಡ್ಜ್ ಕಂ ಬ್ಯಾರೇಜಿನ ಕಾಮಗಾರಿಯ ಸ್ಥಳಾಂತರದಿಂದ, ಬ್ಯಾರೇಜಿನ ಉದ್ದವು ಮೂಲ ಉದ್ದಕಿಂತ 38 ಮೀ. ಹೆಚ್ಚಾಗಿರುತ್ತದೆ.

ಈ ಹಿಂದೆ ಪ್ರವಾಹದಲ್ಲಿ ಹಳೆಯ ಬ್ಯಾರೇಜ್ ಮೂಳುಗಡೆಯಾಗುತ್ತಿದ್ದು, ಮಳೆಗಾಲದಲ್ಲಿ ಸುಮಾರು ಒಂದು ತಿಂಗಳ ಕಾಲ ಕರ್ನಾಟಕ ಮತ್ತು ಮಹಾರಾಷ್ಟ್ರದ ಗಡಿಭಾಗವಾದ ಬೋರಗಾಂವ ಮತ್ತು ಸದಲಗಾ ನಡುವೆ ಸಂಪರ್ಕ ಕಡಿತಗೊಳ್ಳುತ್ತಿತ್ತು. ಆದ್ದರಿಂದ ಹೊಸ ಬ್ರಿಡ್ಜ್ ಕಂ ಬ್ಯಾರೇಜಿನ ಬ್ರಿಡ್ಜ್‌ನ ಹಾಲಿ ಹಾಳಾಗಿರುವ ಹಳೆಯ ಬ್ಯಾರೇಜಿನ ಬ್ರಿಡ್ಜ್‌ಗಿಂತ ಸುಮಾರು 7.50 ಮೀ ಎತ್ತರವಾಗಿ ನಿರ್ಮಿಸಲಾಗುತ್ತಿದೆ. ಈಗ ನಿರ್ಮಾಣಗೊಳ್ಳೂತ್ತಿರುವ ಬ್ಯಾರೇಜಿಗೆ ಎರಡೂ ಬದಿಗಳಿಂದ ಅಪ್ರೋಚ್ ರಸ್ತೆಯ ಅವಶ್ಯಕತೆ ಇರುವುದರಿಂದ, ಈ ಕಾಮಗಾರಿಯನ್ನು ಈಗ ಕೈಗೆತ್ತಿಕೊಂಡು ನಿರ್ವಹಿಸಲಾಗುತ್ತಿದೆ.

ಬ್ರಿಡ್ಜ್ ಕಂ ಬ್ಯಾರೇಜ್ ಕಾಮಗಾರಿಯನ್ನು ವೈಜ್ಞಾನಿಕವಾಗಿಯೇ ನಿರ್ಮಿಸಲಾಗುತ್ತಿದ್ದು, ಪ್ರಸ್ತುತ ಇದು ಪೂರ್ಣಗೊಳ್ಳುವ ಹಂತದಲ್ಲಿದೆ. ಇದಕ್ಕೆ ಅವಶ್ಯವಿರುವ ಕೂಡು ರಸ್ತೆಗಳನ್ನು ಸಹ ನಿರ್ಮಿಸುವ ಕೆಲಸವು ಪ್ರಗತಿಯಲ್ಲಿದೆ.

ಸಂಖ್ಯೆ: ಜಸಂಇ 73 ಡಬ್ಲ್ಯೂಎಲ್ಎ 2014

**(ಎಂ.ಬಿ.ಪಾಟೀಲ)**

ಜಲ ಸಂಪನ್ಮೂಲ ಸಚಿವರು

**ಕರ್ನಾಟಕ ವಿಧಾನ ಪರಿಷತ್ತು**

**ವಿಧಾನ ಪರಿಷತ್ತಿನ ಮಾನ್ಯ ಸದಸ್ಯರಾದ ಶ್ರೀ ಡಿ.ಎಸ್.ವೀರಯ್ಯ ಇವರ ನಿಯಮ 330ರಡಿಯಲ್ಲಿ ಪ್ರಸ್ತಾಪಿಸಿರುವ ವಿಷಯದ ಬಗ್ಗೆ ಮಾನ್ಯ ಇಂಧನ ಸಚಿವರ ಹೇಳಿಕೆ:-**

**ವಿಷಯ:** ಮಂಡ್ಯ ಜಿಲ್ಲೆಯ ಶಿಂಷಾ ಮತ್ತು ಶಿವನಸಮುದ್ರದಲ್ಲಿ, ಕರ್ನಾಟಕ ವಿದ್ಯುತ್ ನಿಗಮ ನಿಯಮಿತ ವತಿಯಿಂದ ವಿದ್ಯುತ್ ಉತ್ಪಾದನೆ ಘಟಕಗಳಲ್ಲಿ ಕೇವಲ 17.5 ಮೇ.ವ್ಯಾ. ಮತ್ತು 4.2 ಮೆ.ವ್ಯಾ. ವಿದ್ಯುಚ್ಛಕ್ತಿಯ ಉತ್ಪಾದನೆಯಾಗುತ್ತಿದ್ದು, ಅಲ್ಲಿನ ಸಿಬ್ಬಂದಿಗಳು ಹೆಚ್ಚು ಇರುವುದರಿಂದ ಸರ್ಕಾರಕ್ಕೆ ಆರ್ಥಿಕವಾಗಿ ನಷ್ಟವಗುತ್ತಿರುತ್ತದೆ. ಈ ಬಗ್ಗೆ ಚರ್ಚೆ ಮಾಡಲು ಮಾನ್ಯ ಸಭಾಪತಿಗಳು ನಿಯಮ 330ರ ಅಡಿಯಲ್ಲಿ ಅವಕಾಶ ಮಾಡಿಕೊಡುವ ಬಗ್ಗೆ.

*****

ಶಿವನಸಮುದ್ರಂ ಮತ್ತು ಶಿಂಷಾ ವಿದ್ಯುತ್ ಯೋಜನೆಗಳು ಕರ್ನಾಟಕ ರಾಜ್ಯದ ಹೆಮ್ಮೆಯ ಯೋಜನೆಗಳಾಗಿದ್ದು, ಕರ್ನಾಟಕದ ಜೀವವದಿ ಎಂದೇ ಖ್ಯಾತವಾದ ಕಾವೇರಿ ನದಿಯ ನೀರನ್ನು ಬಳಸಿಕೊಂಡು ವಿದ್ಯುತ್ ಉತ್ಪಾದಿಸುವ "ಹರಿವ ನೀರಿನ" ಯೋಜನೆಗಳಾಗಿವೆ. ಶಿವನಸಮುದ್ರಂ ಜಲ ವಿದ್ಯುತ್ ಅನ್ನು ಉತ್ಪಾದಿಸುತ್ತಿದ್ದು, ದಿ: 25.01.2003 ರಲ್ಲಿ ನವೀಕರಣಗೊಂಡ ನಂತರ 50 ಸೈಕಲ್ ಫ್ರಿಕ್ವೇನ್ಸಿಯ, 11 ಕೆವಿ ಪ್ರಮಾಣದ 10 ಘಟಕಗಳಿಂದ 42 ಮೆಗಾ ವ್ಯಾಟ್ ವಿದ್ಯುತ್ ಉತ್ಪಾದನೆಯಾಗುತ್ತಿರುತ್ತದೆ. ಅಲ್ಲದೆ, ಶಿಂಷಾಪುರದ ಎರಡು ಜಲ ವಿದ್ಯುತ್ ಘಟಕಗಳಿಂದ ಒಟ್ಟು 17.2 ಮೆಗಾವ್ಯಾಟ್ ವಿದ್ಯುತ್ತನ್ನು 1940 ರಿಂದ ಉತ್ಪಾದಿಸಲಾಗುತ್ತಿದೆ. ಪ್ರಾರಂಭದಲ್ಲಿ ಈ ಎರಡು ಯೋಜನೆಗಳು ಮೈಸೂರು ಮಹಾರಾಜರ ಆಡಳಿತದ ಒಡೆತನದಲ್ಲಿದ್ದು ನಂತಹ ಹಂತ ಹಂತವಾಗಿ ವಿವಿಧ ಸಂಸ್ಥೆಗಳ ಆಡಳಿತಕ್ಕೆ ಒಳಪಟ್ಟು ಕರ್ನಾಟಕ ವಿದ್ಯುಚ್ಛಕ್ತಿ ಮಂಡಳಿಯಿಂದ ವಿಶ್ವೇಶ್ವರಯ್ಯ ವಿದ್ಯುತ್ ನಿಗಮ ನಿಯಮಿತಕ್ಕೆ ನಂತರ ಸಂಸ್ಥೆಯು ದಿನಾಂಕ 15.12.2006 ರಂದು ಕರ್ನಾಟಕ ವಿದ್ಯುತ್ ನಿಗಮ ನಿಯಮಿತದಲ್ಲಿ ವಿಲೀನಗೊಂಡಿತು. ಅಂದಿನಿಂದ ಕರ್ನಾಟಕ ವಿದ್ಯುತ್ ನಿಗಮವು ಈ ಯೋಜನೆಯ ಕಾರ್ಯಗಳನ್ನು ನಿರ್ವಹಿಸುತ್ತಿರುತ್ತದೆ. ನದಿಯಲ್ಲಿ ಹರಿಯುತ್ತಿರುವ ನೀರಿನ ಪ್ರಮಾಣ ಹಾಗೂ ವಿದ್ಯುತ್ ಜಾಲದ ಬೇಡಿಕೆಯನ್ನು ಅವಲಂಬಿಸಿ ಈ ಎರಡೂ ಕೇಂದ್ರಗಳಿಂದ ವಿದ್ಯುತ್ ಉತ್ಪಾದನೆ ಮಾಡಲಾಗುತ್ತಿದೆ.

ಈ ಎರಡೂ ಯೋಜನೆಗಳಿಗೆ ಸಂಬಂಧಪಟ್ಟಂತೆ ಕಾರ್ಯನಿರ್ವಹಿದುತ್ತದ್ದ ಒಟ್ಟು ಸಿಬ್ಬಂದಿಗಳ ವಿವರ ಈ ಕೆಳಕಂಡಂತೆ ಇರುತ್ತದೆ.

2007 ರಲ್ಲಿ – 212 ಸಿಬ್ಬಂದಿಗಳು

2008 ರಲ್ಲಿ – 192 ಸಿಬ್ಬಂದಿಗಳು

2009 ರಲ್ಲಿ – 205 ಸಿಬ್ಬಂದಿಗಳು

2010 ರಲ್ಲಿ – 196 ಸಿಬ್ಬಂದಿಗಳು

2011 ರಲ್ಲಿ – 93 ಸಿಬ್ಬಂದಿಗಳು (140 ಕೆ.ಇ.ಬಿ. ಸಿಬ್ಬಂದಿಗಳು ಮಾತೃ ಸಂಸ್ಥೆಗೆ ಮರಳಿರುತ್ತಾರೆ)

2012 ರಲ್ಲಿ – 79 ಸಿಬ್ಬಂದಿಗಳು

2013 ರಲ್ಲಿ – 78 ಸಿಬ್ಬಂದಿಗಳು

15–01–2014 ರಂತೆ 76 ಸಿಬ್ಬಂದಿಗಳು

ಮೇಲೆ ತಿಳಿಸಿರುವಂತೆ ಹಾಲಿ 76 ಸಿಬ್ಬಂದಿಗಳು ಕೆಲಸ ನಿರ್ವಹಿಸುತ್ತಿದ್ದು, 100 ವರ್ಷಗಳಿಗೂ ಮೀರಿ ಹಳೆಯದಾದ ವಿದ್ಯುತ್ ಘಟಕಗಳು ಇಂದಿಗೂ ಕೂಡ ಪೂರ್ಣ ಪ್ರಮಾಣದಲ್ಲಿ ವಿದ್ಯುತ್ ಉತ್ಪಾದನೆ ಮಾಡಿತ್ತಿರುತ್ತವೆ ಹಾಗೂ ಕ್ರಮೇಣ ಸಿಬ್ಬಂದಿಗಳ ಸಂಖ್ಯೆ ಕಡಿಮೆಯಾಗುತ್ತಾ ಬಂದಿದ್ದು ಆರ್ಥಿಕವಾಗಿ ನಷ್ಟವಿರುವುದಿಲ್ಲ. ವಿವರಗಳನ್ನು ಅನುಬಂಧದಲ್ಲಿ ಒದಗಿಸಲಾಗಿದೆ. ಬದಲಾಗಿ ವಿದ್ಯುತ್ ಘಟಕಗಳು ಅತ್ಯುತ್ತಮವಾಗಿ ಕಾರ್ಯನಿರ್ವಹಿಸುತ್ತಿದ್ದು ಶಿವ ವಿದ್ಯುದಾಗಾರದಿಂದ 111 ವರ್ಷಗಳ ಇತಿಹಾಸದಲ್ಲಿ, 2011–12ರ ಸಾಲಿನಲ್ಲಿ ದಾಖಲೆ ಪ್ರಮಾಣದ ವಿದ್ಯುತ್ ಉತ್ಪಾದನೆ ಯಾಗಿರುತ್ತದೆ (332.2 ಮಿ.ಯೂನಿಟ್‌ಗಳು). ಮುಂದುವರೆದು ಶಿವನಸಮುದ್ರಂ ಯೋಜನೆ ಪ್ರದೇಶದಲ್ಲಿ ಇತ್ತೀಚೆಗೆ 5 ಮೆ.ವ್ಯಾಟ್. ಸಾಮರ್ಥ್ಯದ ಸೋಲಾರ್ ವಿದ್ಯುತ್ ಘಟಕ ಕಾರ್ಯಾರಂಭ ಮಾಡಿದ್ದು, ಸಂಬಂಧಪಟ್ಟ ಕಾರ್ಯಗಳನ್ನು ಹಾಲಿ ಇರುವ ಮೇಲ್ಕಂಡ ಸಿಬ್ಬಂದಿಗಳೇ ನಿರ್ವಹಿಸುತ್ತಿರುತ್ತಾರೆ.

ಸಂಖ್ಯೆ: ಇಎನ್ 141 ಇಬಿಎಸ್ 2014

**(ಡಿ.ಕೆ.ಶಿವಕುಮಾರ್)**

ಇಂಧನ ಸಚಿವರು

## ನಿಯಮ 330ರ ಮೇರೆಗೆ ಸೂಚನೆ

ಒಂದು ಕ್ರಿಯಾಲೋಪವಲ್ಲದಂತಹ ಯಾವ ವಿಷಯವನ್ನಾಗಲಿ ಸದನದ ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ನಿಗದಿ ಪಡಿಸಿದ ನಮೂನೆಯಲ್ಲಿ ವಿಷಯವನ್ನು ಕಾರಣಗಳ ಸಹಿತ ಸಂಕ್ಷಿಪ್ತವಾಗಿ ವಿವರಿಸಿ, ಲಿಖಿತ ಮೂಲಕವಾಗಿ ಕಾರ್ಯದರ್ಶಿಯವರಿಗೆ ಸೂಚನಾ ಪತ್ರವನ್ನು ಕೊಡಬೇಕು. ಸಭಾಪತಿಯವರು ಅನುಮತಿ ನೀಡಿದ ನಂತರವೇ ಸದಸ್ಯರು ವಿಷಯವನ್ನು ಪ್ರಸ್ತಾಪಿಸಲು ಅನುಮತಿ ದೊರೆತಂತಾಗುವುದು ಮತ್ತು ಆ ಸದಸ್ಯರು ಸಭಾಪತಿಯವರು ಗೊತ್ತುಪಡಿಸಬಹುದಾದ ಸಮಯ ಮತ್ತು ದಿನದಲ್ಲಿ ಮಾತ್ರ ಆ ವಿಷಯವನ್ನು ಪ್ರಸ್ತಾಪಿಸಬಹುದು.

## ನಿಯಮ 330ರ ಮೇರೆಗೆ ಸೂಚನೆ

**330 ಎ. ವಿಶೇಷ ಪ್ರಸ್ತಾವಗಳು:-** ಪ್ರಶ್ನೋತ್ತರದ ವೇಳೆ ಇಲ್ಲದ ದಿನದಲ್ಲಿ ಕಾರ್ಯಕಲಾಪಗಳು ಪ್ರಾರಂಭವಾಗುವ ಮುಂಚೆ ಯಾರೇ ಸದಸ್ಯರು ಇತ್ತೀಚಿನ ವಿಷಯಗಳನ್ನೊಳಗೊಂಡ ಎರಡು ನೂರು ಪದಗಳಿಗೆ ಮೀರದಂತೆ ಸಭಾಪತಿಗಳ ಅನುಮತಿಯ ಮೇರೆಗೆ ವಿಶೇಷ ಪ್ರಸ್ತಾವವನ್ನು ಸದನದಲ್ಲಿ ಮಂಡಿಸಬಹುದು. ಸರ್ಕಾರವು ಆ ಪ್ರಸ್ತಾವಕ್ಕೆ ಮೂರು ದಿನಗಳ ಒಳಗೆ ಉತ್ತರವನ್ನು ಸದನಕ್ಕೆ ನೀಡತಕ್ಕದ್ದು.

ಒಂದು ದಿನಕ್ಕೆ ಮೂರಕ್ಕಿಂತ ಹೆಚ್ಚು ಇಲ್ಲದಂತೆ ಪ್ರಸ್ತಾವಗಳನ್ನು ಚರ್ಚಿಸಲು ಸಭಾಪತಿಯವರು ಅನುಮತಿಸತಕ್ಕದ್ದು.

## ಶಾಸನ ರಚನೆ ಮಾದರಿ ವಿಧೇಯಕ

## ಕರ್ನಾಟಕ ಭೂಕಬಳಿಕೆ ನಿಷೇಧ ವಿಧೇಯಕ, 2011

ಸರ್ಕಾರಕ್ಕೆ, ವಕ್ಫ್ ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳಿಗೆ, ಸ್ಥಳೀಯ ಸಂಸ್ಥೆಗಳಿಗೆ ಅಥವಾ ಸರ್ಕಾರದ ಒಡೆತನದಲ್ಲಿರುವ ಅಥವಾ ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳಿಗೆ ಸೇರಿದ, ಭೂಮಿಗಳನ್ನು ಕಬಳಿಸಲು ಮಾಡಲಾಗುವ ಸಂಘಟಿತ ಪ್ರಯತ್ನಗಳನ್ನು ತಡೆಗಟ್ಟಲು ಕ್ರಮಕೈಗೊಳ್ಳುವುದಕ್ಕಾಗಿ ಉಪಬಂಧ ಕಲ್ಪಿಸಲು ಒಂದು ವಿಧೇಯಕ.

ಅಂಥ ಭೂಕಬಳಿಕೆದಾರರು, ನಕಲಿ ಗೃಹ ನಿರ್ಮಾಣ ಸಹಕಾರಿ ಸಂಘಗಳನ್ನು ರಚಿಸುತ್ತಿರುವುದರಿಂದ ಅಥವಾ ಸುಳ್ಳು ಕ್ಲೇಮುಗಳನ್ನು ಸೃಷ್ಟಿಸಿಕೊಳ್ಳುತ್ತಿರುವುದರಿಂದ ಮತ್ತು ನೀತಿಗೆಟ್ಟ ಸ್ಥಿರಾಸ್ತಿ ವ್ಯಾಪಾರಿಗಳ ಮೂಲಕವಾಗಿ ಅಥವಾ ಅನ್ಯಥಾ ಅಂಥ ಭೂಮಿಗಳನ್ನು ಭಾರಿ ಪ್ರಮಾಣದಲ್ಲಿ ಹಾಗೂ ಹಿಂದೆಂದು ಇಲ್ಲದ ರೀತಿಯಲ್ಲಿ ಮೋಸದಿಂದ ಜನತೆಯ ಕೆಲವು ವರ್ಗಕ್ಕೆ ಮಾರಾಟ ಮಾಡುತ್ತಿರುವುದರಿಂದ ಹಾಗೂ ಇದರಿಂದ ಈ ಭೂಕಬಳಿಕೆದಾರರ ಬಳಿ ಲೆಕ್ಕಕ್ಕೇ ಸಿಗದ ಸಂಪತ್ತು, ದಿಢೀರ್ ಸಂಪಾದನೆಯ ಹಣ ಯಥೇಚ್ಛವಾಗಿ ಸಂಗ್ರಹವಾಗುತ್ತಿದ್ದು ಇದರಿಂದಾಗಿ ಸಾರ್ವಜನಿಕ ಸುವ್ಯವಸ್ಥೆಗೆ ಪ್ರತಿಕೂಲ ಪರಿಣಾಮವಾಗುತ್ತಿರುವುದರಿಂದ;

ಮತ್ತು, ಕರ್ನಾಟಕ ರಾಜ್ಯದಲ್ಲಿ ಭೂಕಬಳಿಕೆದಾರರಾಗಿ ಕಾನೂನು ಉಲ್ಲಂಘಿಸಿ, ಭೂಕಬಳಿಕೆಯ ಅಕ್ರಮ ಚಟುವಟಿಕೆಗಳನ್ನು ಎಷ್ಟು ದೊಡ್ಡ ಪ್ರಮಾಣದಲ್ಲಿ, ಹಾಗೂ ಎಂಥ ರೀತಿಯಲ್ಲಿ ಸಂಘಟಿಸಿ ನಡೆಸಿಕೊಂಡು ಬಂದಿದ್ದರು, ಸಂಘಟಿಸಿ ನಡೆಸಿಕೊಂಡು ಬಂದಿದ್ದಾರೆ ಮತ್ತು ಸಂಘಟಿಸಿ ನಡೆಸುತ್ತಾ ಇದ್ದಾರೆ ಎಂಬುದನ್ನು ಹಾಗೂ ಎಷ್ಟೊಂದು ಸಂಪನ್ಮೂಲ ಮತ್ತು ಪ್ರಭಾವ ಅವರ ಬಳಿಯಲ್ಲಿದೆ ಎಂಬುದನ್ನು ಗಮನಿಸಿದಾಗ ಭೂಕಬಳಿಕೆಯ ಕಾನೂನುಬಾಹಿರ ಚಟುವಟಿಕೆಗಳನ್ನು ಕೂಡಲೇ ತಡೆಗಟ್ಟುವುದು ಅವಶ್ಯಕವಾಗಿರುವುದರಿಂದ ಮತ್ತು ಯುಕ್ತವಾಗಿರುವುದರಿಂದ;

ಇದು ಭಾರತ ಗಣರಾಜ್ಯದ ಅರವತ್ತೆರಡನೇ ವರ್ಷದಲ್ಲಿ ಕರ್ನಾಟಕ ರಾಜ್ಯ ವಿಧಾನಮಂಡಲದಿಂದ ಈ ಮುಂದಿನಂತೆ ಅಧಿನಿಯಮಿತವಾಗತಕ್ಕದ್ದು.

**1. ಸಂಕ್ಷಿಪ್ತ ಹೆಸರು, ಅನ್ವಯ ಮತ್ತು ಪ್ರಾರಂಭ.–** (1) ಈ ಅಧಿನಿಯಮವನ್ನು ಕರ್ನಾಟಕ ಭೂ ಕಬಳಿಕೆ ನಿಷೇಧ ಅಧಿನಿಯಮ, 2011 ಎಂದು ಕರೆಯತಕ್ಕದ್ದು.

(2) ಇದು ಕರ್ನಾಟಕ ರಾಜ್ಯದಲ್ಲಿ ಸರ್ಕಾರಕ್ಕೆ, ವಕ್ಫ್ ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳು ಹಾಗೂ ಧರ್ಮಾದಾಯ ದತ್ತಿಗಳಿಗೆ, ಸ್ಥಳೀಯ ಪ್ರಾಧಿಕಾರಕ್ಕೆ ಅಥವಾ ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗಳಿಗೆ ಸೇರಿದ ಭೂಮಿಗೆ ಅನ್ವಯಿಸುತ್ತದೆ.

(3) ಇದು ಈ ಕೂಡಲೇ ಜಾರಿಗೆ ಬರತಕ್ಕದ್ದು.

**2. ಪರಿಭಾಷೆಗಳು** .– ಈ ಅಧಿನಿಯಮದಲ್ಲಿ, ಸಂದರ್ಭವು ಅನ್ಯಥಾ ಅಗತ್ಯಪಡಿಸಿದ ಹೊರತು,–

(ಎ) "ಧರ್ಮಾದಾಯ ದತ್ತಿ" ಎಂದರೆ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) 2ನೇ ಪ್ರಕರಣದ (5)ನೇ ಉಪ ಪ್ರಕರಣದಲ್ಲಿ ಪರಿಭಾಷಿಸಲಾದ ಧರ್ಮಾದಾಯ ದತ್ತಿ ;

(ಬಿ) "ಸರ್ಕಾರ" ಎಂದರೆ, ರಾಜ್ಯ ಸರ್ಕಾರ ;

(ಸಿ) "ಹಿಂದೂ ಧಾರ್ಮಿಕ ಸಂಸ್ಥೆ" ಎಂದರೆ, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳ ಅಧಿನಿಯಮ, 1997ರ (2001ರ ಕರ್ನಾಟಕ ಅಧಿನಿಯಮ 33) 2ನೇ ಪ್ರಕರಣದ (17)ನೇ ಉಪಪ್ರಕರಣದಲ್ಲಿ ಪರಿಭಾಷಿಸಲಾದ ಹಿಂದೂ ಧಾರ್ಮಿಕ ಸಂಸ್ಥೆಗಳು;

(ಡಿ) "ಭೂಮಿ" ಎಂದರೆ,–

(i) ಸರ್ಕಾರಕ್ಕೆ, ವಕ್ಫ್ ಅಥವಾ ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳಿಗೆ, ಒಂದು ಸ್ಥಳೀಯ ಪ್ರಾಧಿಕಾರಕ್ಕೆ, ಸರ್ಕಾರದ ಒಡೆತನದಲ್ಲಿರುವ, ನಿಯಂತ್ರಣದಲ್ಲಿರುವ ಅಥವಾ ವ್ಯವಸ್ಥಾಪನೆಯಲ್ಲಿರುವ ಒಂದು ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗೆ ಸೇರಿದ ಭೂಮಿಯನ್ನು;

(ii) ಭೂಮಿಯಲ್ಲಿ ಅಥವಾ ಅದರ ಮೇಲೆ ಇರುವ ಹಕ್ಕುಗಳು, ಭೂಮಿಯಿಂದ ಪ್ರಾಪ್ತವಾಗುವ ಪ್ರಯೋಜನಗಳು ಮತ್ತು ಭೂಮಿಗೆ ಲಗತ್ತಾಗಿರುವ ಅಥವಾ ಭೂಮಿಗೆ ಲಗತ್ತಾಗಿರುವ ಯಾವುದೇ ವಸ್ತುವಿಗೆ ಖಾಯಂ ಆಗಿ ಜೋಡಿಸಲಾದ ಕಟ್ಟಡಗಳು, ನಿರ್ಮಿತಿಗಳು ಮತ್ತು ಇತರ ವಸ್ತುಗಳನ್ನು,

– ಒಳಗೊಳ್ಳುತ್ತದೆ;

(ಇ) "ಭೂ ಕಬಳಿಕೆದಾರ" ಎಂದರೆ, ಭೂ ಕಬಳಿಕೆಯನ್ನು ಮಾಡುವ ಅಥವಾ ಮಾಡಿರುವ ಒಬ್ಬ ವ್ಯಕ್ತಿ ಅಥವಾ ವ್ಯಕ್ತಿಗಳ ಒಂದು ಗುಂಪು ಅಥವಾ ಒಂದು ಸಂಘ ಮತ್ತು ಇದರಲ್ಲಿ ಭೂಮಿಗಳನ್ನು

ಕಾನೂನುಬಾಹಿರ ಸ್ವಾಧೀನ ತೆಗೆದುಕೊಳ್ಳುವುದಕ್ಕಾಗಿ ಅಥವಾ ಅದರ ಮೇಲೆ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಯಾವೊಬ್ಬ ವ್ಯಕ್ತಿಗೆ ಆರ್ಥಿಕ ನೆರವು ನೀಡುವ ಯಾವೊಬ್ಬ ವ್ಯಕ್ತಿ ಅಥವಾ ಅಂಥ ಭೂಮಿಗಳ ಯಾವುದೇ ಅಧಿಭೋಗದಾರರಿಂದ ಆಪರಾಧಿಕ ಭಯೋತ್ಪಾದನೆಯ ಮೂಲಕ ಬಾಡಿಗೆ, ಪರಿಹಾರ ಮತ್ತಿತರ ಶುಲ್ಕವನ್ನು ವಸೂಲು ಮಾಡುವ ಅಥವಾ ವಸೂಲು ಮಾಡಲು ಪ್ರಯತ್ನಿಸುವ ಅಥವಾ ಮೇಲೆ ಹೇಳಿದ ಯಾವುದಾದರೊಂದು ಕೃತ್ಯ ಮಾಡುವುದನ್ನು ದುಷ್ಪ್ರೇರಿಸುವ ಯಾವೊಬ್ಬ ವ್ಯಕ್ತಿಯು ಒಳಗೊಳ್ಳುತ್ತಾನೆ, ಮತ್ತು ಅವನ ಹಿತಾಸಕ್ತಿಯ ಉತ್ತರಾಧಿಕಾರಿಗಳೂ ಒಳಗೊಳ್ಳುತ್ತಾರೆ ;

(ಎಫ್) "ಭೂ ಕಬಳಿಕೆ" ಎಂದರೆ, ಯಾವುದೇ ಕಾನೂನುಬದ್ಧ ಹಕ್ಕುದಾರಿಕೆಯಿಲ್ಲದೆ ಮತ್ತು ಅಂಥ ಭೂಮಿಯನ್ನು ಕಾನೂನುಬಾಹಿರವಾಗಿ ಸ್ವಾಧೀನಕ್ಕೆ ತೆಗೆದುಕೊಳ್ಳುವ ದೃಷ್ಟಿಯಿಂದ ಯಾವುದೇ ಭೂಮಿಯನ್ನು ಕಬಳಿಸುವ ಅಥವಾ ಕಾನೂನುಬಾಹಿರ ಗೇಣಿಗಳು ಅಥವಾ ಗುತ್ತಿಗೆ ಮತ್ತು ಲೈಸೆನ್ಸ್ ಒಪ್ಪಂದಗಳನ್ನು ಮಾಡಿಕೊಳ್ಳುವ ಅಥವಾ ಅವುಗಳನ್ನು ಸೃಷ್ಟಿಮಾಡುವ ಅಥವಾ ಮಾರಾಟ ಅಥವಾ ಬಾಡಿಗೆಗೆ ಕೊಡಲು ಭೂಮಿಯ ಮೇಲೆ ಅಕ್ರಮ ನಿರ್ಮಿತಿಗಳನ್ನು ಕಟ್ಟುವ ಅಥವಾ ಅಕ್ರಮ ಕಟ್ಟಡಗಳನ್ನು ಕಟ್ಟುವುದಕ್ಕಾಗಿ ಅಥವಾ ಬಳಸುವುದಕ್ಕಾಗಿ ಮತ್ತು ಅಧಿಭೋಗಿಸುವುದಕ್ಕಾಗಿ ಬಾಡಿಗೆ ಮೇಲೆ ಅಥವಾ ಗುತ್ತಿಗೆ ಮೇಲೆ ಮತ್ತು ಲೈಸೆನ್ಸ್ ಆಧಾರದ ಮೇಲೆ ಅಂಥ ಭೂಮಿಗಳನ್ನು ಯಾವೊಬ್ಬ ವ್ಯಕ್ತಿಗೆ ಕೊಡುವ ಪ್ರತಿಯೊಂದು ಚಟುವಟಿಕೆ; ಮತ್ತು "ಭೂಮಿಯನ್ನು ಕಬಳಿಸುವುದಕ್ಕೆ" ಎಂಬುದನ್ನು ಇದಕ್ಕೆ ಅನುಸಾರವಾಗಿ ಅರ್ಥೈಸತಕ್ಕದ್ದು ;

(ಜಿ) "ಸ್ಥಳೀಯ ಪ್ರಾಧಿಕಾರ" ಎಂಬುದರಲ್ಲಿ ನಗರಪಾಲಿಕೆ, ಪುರಸಭೆ, ಜಿಲ್ಲಾ ಪಂಚಾಯತಿ, ತಾಲ್ಲೂಕು ಪಂಚಾಯತಿ, ಗ್ರಾಮ ಪಂಚಾಯತಿ, ಪಟ್ಟಣ ಪಂಚಾಯತಿ, ಕೈಗಾರಿಕಾ ಉಪನಗರ, ಸುಧಾರಣಾ ಮಂಡಳಿ, ನಗರಾಭಿವೃದ್ಧಿ ಪ್ರಾಧಿಕಾರ ಮತ್ತು ಯೋಜನಾ ಪ್ರಾಧಿಕಾರ ಅಥವಾ ತತ್ಕಾಲದಲ್ಲಿ ಜಾರಿಯಲ್ಲಿರುವ ಯಾವುದೇ ಕಾನೂನಿನ ಅಡಿಯಲ್ಲಿ ರಚಿತವಾದ ಯಾವುದೇ ಹೆಸರಿನಿಂದ ಕರೆಯಲ್ಪಡುವ ಯಾವುದೇ ಸ್ಥಳೀಯ ಸ್ವಯಮಾಡಳಿತ ನಿಕಾಯ ಅಥವಾ ಸಂಸ್ಥೆ ಇವುಗಳು ಒಳಗೊಳ್ಳುತ್ತವೆ;

(ಹೆಚ್) "ಅಧಿಸೂಚನೆ" ಎಂದರೆ, ಕರ್ನಾಟಕ ರಾಜ್ಯಪತ್ರದಲ್ಲಿ ಪ್ರಕಟವಾದ ಒಂದು ಅಧಿಸೂಚನೆ ಮತ್ತು "ಅಧಿಸೂಚಿತ" ಎಂಬುದನ್ನು ತದನುಸಾರವಾಗಿ ಅರ್ಥೈಸತಕ್ಕದ್ದು ;

(ಐ) "ವ್ಯಕ್ತಿ" ಎಂಬುದು, ನಿಗಮಿತವಾಗಿರುವ ಅಥವಾ ನಿಗಮಿತವಾಗಿರದ ವ್ಯಕ್ತಿಗಳ ಒಂದು ಗುಂಪನ್ನು ಅಥವಾ ಸಂಸ್ಥೆಯನ್ನು, ಯಾವುದೇ ಕಂಪನಿಯನ್ನು ಅಥವಾ ಒಂದು ಸಂಘವನ್ನು ಒಳಗೊಳ್ಳುತ್ತದೆ;

(ಜೆ) "ನಿಯಮಿಸಲಾದುದು" ಎಂದರೆ, ಈ ಅಧಿನಿಯಮದ ಅಡಿಯಲ್ಲಿ ರಚಿಸಿದ ನಿಯಮಗಳ ಮೂಲಕ ನಿಯಮಿಸಲಾದುದು ;

(ಕೆ) "ವಿಶೇಷ ನ್ಯಾಯಾಲಯ" ಎಂದರೆ, 7ನೇ ಪ್ರಕರಣದ ಅಡಿಯಲ್ಲಿ ರಚಿತವಾದ ವಿಶೇಷ ನ್ಯಾಯಾಲಯ ;

(ಎಲ್) "ಅನಧಿಕೃತ ನಿರ್ಮಿತಿಗಳು" ಎಂದರೆ, ತತ್ಕಾಲದಲ್ಲಿ ಜಾರಿಯಲ್ಲಿರುವ, ಸಂಬಂಧಪಟ್ಟ ಕಾನೂನಿನ ಅಡಿಯಲ್ಲಿ ಸಂಬಂಧಪಟ್ಟ ಸಕ್ಷಮ ಪ್ರಾಧಿಕಾರದ ಸ್ಪಷ್ಟ ಅನುಮತಿ ಪಡೆಯದೇ ನಿರ್ಮಿಸಿದ ಯಾವುದೇ ನಿರ್ಮಿತಿ;

(ಎಂ) "ವಕ್ಫ್" ಎಂದರೆ, ವಕ್ಫ್ ಅಧಿನಿಯಮ, 1995ರ (1995ರ ಕೇಂದ್ರ ಅಧಿನಿಯಮ 43) 3ನೇ ಪ್ರಕರಣದ (ಆರ್) ಖಂಡದಲ್ಲಿ ಪರಿಭಾಷಿಸಲಾದ ವಕ್ಫ್.

**3. ಭೂ ಕಬಳಿಕೆಯು ಕಾನೂನು ಬಾಹಿರವಾಗಿರುವುದು.–** ಯಾವುದೇ ರೀತಿಯಲ್ಲಿ ಭೂ ಕಬಳಿಕೆ ಮಾಡುವುದನ್ನು ಈ ಮೂಲಕ ನಿಷೇಧಿಸಲಾಗಿದೆ ಮತ್ತು ಕಾನೂನು ಬಾಹಿರವೆಂದು ಘೋಷಿಸಲಾಗಿದೆ ಮತ್ತು ಭೂ ಕಬಳಿಕೆಗೆ ಸಂಬಂಧಿಸಿದ ಅಥವಾ ಅದರಿಂದ ಉಂಟಾಗುವ ಯಾವುದೇ ಚಟುವಟಿಕೆಯು, ಈ ಅಧಿನಿಯಮದ ಅಡಿಯಲ್ಲಿ ದಂಡನೀಯ ಅಪರಾಧವಾಗಿರತಕ್ಕದ್ದು.

**4. ಭೂ ಕಬಳಿಕೆಯ ನಿಷೇಧ.–** (1) ಯಾವೊಬ್ಬ ವ್ಯಕ್ತಿಯೂ ತಾನಾಗಿಯೇ ಆಗಲಿ ಅಥವಾ ಯಾವೊಬ್ಬ ಇತರ ವ್ಯಕ್ತಿಯ ಮೂಲಕವಾಗಿಯಾಗಲೀ ಭೂ ಕಬಳಿಕೆಯನ್ನು ಮಾಡತಕ್ಕದ್ದಲ್ಲ ಅಥವಾ ಮಾಡುವಂತೆ ಮಾಡತಕ್ಕದ್ದಲ್ಲ.

(2) ಈ ಅಧಿನಿಯಮದ ಪ್ರಾರಂಭದಂದು ಅಥವಾ ತರುವಾಯ, ಯಾವೊಬ್ಬ ವ್ಯಕ್ತಿಯು, ಕಾನೂನುಬದ್ಧ ಗೇಣಿದಾರನಾಗಿ ಹೊರತು, ಸರ್ಕಾರಕ್ಕೆ, ವಕ್ಫ್‌ಗೆ, ಹಿಂದೂ ಧಾರ್ಮಿಕ ಸಂಸ್ಥೆ ಮತ್ತು ಧರ್ಮಾದಾಯ ದತ್ತಿಗಳಿಗೆ, ಸ್ಥಳೀಯ ಪ್ರಾಧಿಕಾರಕ್ಕೆ ಸೇರಿದ, ಸರ್ಕಾರದ ಒಡೆತನದಲ್ಲಿ, ನಿಯಂತ್ರಣದಲ್ಲಿ ಅಥವಾ ವ್ಯವಸ್ಥಾಪನೆಯಲ್ಲಿರುವ ಶಾಸನಬದ್ಧ ಅಥವಾ ಶಾಸನಬದ್ಧವಲ್ಲದ ಸಂಸ್ಥೆಗೆ ಸೇರಿದ ಕಬಳಿಸಲಾದ ಭೂಮಿಯ ಅಧಿಭೋಗದಲ್ಲಿ ಮುಂದುವರಿದಲ್ಲಿ ಈ ಅಧಿನಿಯಮದಡಿಯ ಒಂದು ಅಪರಾಧದ ತಪ್ಪಿತಸ್ಥನಾಗಿರತಕ್ಕದ್ದು.

(3) (1)ನೇ ಉಪಪ್ರಕರಣದ ಅಥವಾ (2)ನೇ ಉಪಪ್ರಕರಣದ ಉಪಬಂಧಗಳನ್ನು ಉಲ್ಲಂಘಿಸುವ ಯಾವೊಬ್ಬನು, ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷಕ್ಕೆ ಕಡಿಮೆಯಲ್ಲದ ಆದರೆ ಮೂರು ವರ್ಷಗಳವರೆಗೆ ವಿಸ್ತರಿಸಬಹುದಾದ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳವರೆಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**5. ಭೂ ಕಬಳಿಕೆಗೆ ಸಂಬಂಧಪಟ್ಟಂತೆ ಇತರೆ ಅಪರಾಧಗಳಿಗಾಗಿ ದಂಡ.–** ಯಾವೊಬ್ಬ ವ್ಯಕ್ತಿಯು, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸಿ ಭೂಕಬಳಿಕೆ ಮಾಡುವ ದೃಷ್ಟಿಯಿಂದ ಅಥವಾ ಯಾವುದೇ ಅಂಥ ಭೂಕಬಳಿಕೆ ಸಂಬಂಧದಲ್ಲಿ,–

(ಎ) ಕಬಳಿಸಲಾದ ಯಾವುದೇ ಭೂಮಿಯನ್ನು ಮಾರಾಟ ಮಾಡಿದರೆ ಅಥವಾ ಹಂಚಿಕೆ ಮಾಡಿದರೆ ಅಥವಾ ಮಾರಾಟ ಅಥವಾ ಹಂಚಿಕೆ ಮಾಡುವುದಾಗಿ ಆಹ್ವಾನಿಸಿದರೆ ಅಥವಾ ಜಾಹೀರಾತು ಮಾಡಿದರೆ ಅಥವಾ ಮಾರಾಟ ಅಥವಾ ಹಂಚಿಕೆಯ ಉದ್ದೇಶಕ್ಕಾಗಿ ತನ್ನ ಸ್ವಾಧೀನದಲ್ಲಿ ಇಟ್ಟುಕೊಂಡಿದ್ದರೆ;

(ಬಿ) ಯಾವೊಬ್ಬ ವ್ಯಕ್ತಿಯನ್ನು ಭೂ ಕಬಳಿಕೆ ಮಾಡುವಂತೆ ಪ್ರಚೋದಿಸಿದರೆ ಅಥವಾ ಚಿತಾವಣೆ ಮಾಡಿದರೆ ;

(ಸಿ) ಕಬಳಿಸಲಾದ ಯಾವುದೇ ಭೂಮಿಯನ್ನು ಬಳಸಿಕೊಂಡರೆ ಅಥವಾ ತಿಳಿದೂ ತಿಳಿದೂ ಮಾರಾಟ ಅಥವಾ ಹಂಚಿಕೆಗೆ ಸಂಬಂಧಿಸಿದ ಉದ್ದೇಶಗಳಿಗಾಗಿ ಬಳಸುವಂತೆ ಮಾಡಿದರೆ ಅಥವಾ ಬಳಸುವುದಕ್ಕೆ ಅನುಮತಿಸಿದರೆ ;

(ಡಿ) ಅಂಥ ಭೂಮಿಯ ಮೇಲೆ ಯಾವುದೇ ರಚನೆ ಅಥವಾ ಕಟ್ಟಡದ ನಿರ್ಮಾಣಕ್ಕಾಗಿ ಒಪ್ಪಂದ ಮಾಡಿಕೊಂಡರೆ ;

(ಇ) ಯಾವೊಬ್ಬ ವ್ಯಕ್ತಿಯು, ಮೇಲೆ ನಮೂದಿಸಿದ ಯಾವುದೇ ಕೃತ್ಯ ಮಾಡುವಂತೆ ಮಾಡಿದರೆ ಅಥವಾ ಅದಕ್ಕಾಗಿ ಯಾವೊಬ್ಬ ವ್ಯಕ್ತಿಯನ್ನು ದೊರಕಿಸಿಕೊಂಡರೆ ಅಥವಾ ದೊರಕಿಸಿಕೊಳ್ಳಲು ಪ್ರಯತ್ನಿಸಿದರೆ,

– ಅವನು, ಅಪರಾಧ ನಿರ್ಣಯವಾದ ತರುವಾಯ, ಒಂದು ವರ್ಷಕ್ಕೆ ಕಡಿಮೆ ಇಲ್ಲದ ಆದರೆ, ಮೂರು ವರ್ಷಗಳಿಗೆ ವಿಸ್ತರಿಸಬಹುದಾದಂಥ ಅವಧಿಯ ಕಾರಾವಾಸ ಶಿಕ್ಷೆಯಿಂದ ಮತ್ತು ಇಪ್ಪತ್ತೈದು ಸಾವಿರ ರೂಪಾಯಿಗಳಿಗೆ ವಿಸ್ತರಿಸಬಹುದಾದ ಜುಲ್ಮಾನೆಯಿಂದ ದಂಡಿತನಾಗತಕ್ಕದ್ದು.

**6. ಕಂಪನಿಗಳಿಂದ ಅಪರಾಧಗಳು.–** (1) ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಿದ ಯಾವುದೇ ನಿಯಮದ ಯಾವುದೇ ಉಪಬಂಧಗಳಿಗೆ ವಿರುದ್ಧವಾಗಿ ಒಂದು ಕಂಪನಿಯು ಅಪರಾಧವನ್ನು ಮಾಡಿರುವಲ್ಲಿ, ಅಪರಾಧವು ನಡೆದ ಸಮಯದಲ್ಲಿ ಕಂಪನಿಯ ವ್ಯವಹಾರದ ಪ್ರಭಾರದಲ್ಲಿದ್ದ ಮತ್ತು ಅದಕ್ಕಾಗಿ ಕಂಪನಿಗೆ ಜವಾಬ್ದಾರನಾದ ಪ್ರತಿಯೊಬ್ಬ ವ್ಯಕ್ತಿಯನ್ನು ಹಾಗೂ ಕಂಪನಿಯನ್ನು ಆ ಅಪರಾಧದ ತಪ್ಪಿತಸ್ಥರೆಂದು ಭಾವಿಸತಕ್ಕದ್ದು ಮತ್ತು ಅವರು ಅದಕ್ಕನುಸಾರವಾಗಿ ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತರಾಗತಕ್ಕದ್ದು :

ಪರಂತು, ಈ ಉಪ ಪ್ರಕರಣದಲ್ಲಿ ಇರುವುದಾವುದೂ, ಅಪರಾಧವು ತನ್ನ ತಿಳುವಳಿಕೆಗೆ ಬಾರದೆ ನಡೆಯಿತೆಂದು ಅಥವಾ ಅಂಥ ಅಪರಾಧ ನಡೆಯುವುದನ್ನು ತಡೆಗಟ್ಟಲು ತಾನು ಯಥೋಚಿತವಾದ ಎಲ್ಲಾ ಜಾಗರೂಕತೆಯನ್ನು ವಹಿಸಿದ್ದೇನೆಂದು ಅಂಥ ವ್ಯಕ್ತಿಯು ರುಜುವಾತುಪಡಿಸಿದರೆ, ಯಾವುದೇ ದಂಡನೆಗೆ ಅವನನ್ನು ಗುರಿಪಡಿಸತಕ್ಕದ್ದಲ್ಲ.

(2) (1)ನೇ ಉಪಪ್ರಕರಣದಲ್ಲಿ ಏನೇ ಇದ್ದರೂ, ಅಂಥ ಯಾವುದೇ ಅಪರಾಧವನ್ನು ಕಂಪನಿಯು ಮಾಡಿರುವಲ್ಲಿ ಮತ್ತು ಆ ಅಪರಾಧವು ಕಂಪನಿಯ ಯಾವೊಬ್ಬ ನಿರ್ದೇಶಕನ, ವ್ಯವಸ್ಥಾಪಕನ, ಕಾರ್ಯದರ್ಶಿಯ ಅಥವಾ ಇತರ ಅಧಿಕಾರಿಯ ಸಮ್ಮತಿಯಿಂದ ನಡೆಯಿತೆಂದು ಅಥವಾ ನಿರ್ಲಕ್ಷತೆಯ ಕಾರಣದಿಂದ ನಡೆಯಿತೆಂದು ರುಜುವಾತು ಪಡಿಸಲಾದಲ್ಲಿ, ಅಂಥ ನಿರ್ದೇಶಕ, ವ್ಯವಸ್ಥಾಪಕ, ಕಾರ್ಯದರ್ಶಿ ಅಥವಾ ಇತರ ಅಧಿಕಾರಿಯನ್ನು ಆ ಅಪರಾಧದ ತಪ್ಪಿತಸ್ಥನೆಂದು ಭಾವಿಸತಕ್ಕದ್ದು ಮತ್ತು ತದನುಸಾರವಾಗಿ ಅವನು ವ್ಯವಹರಣೆಗೆ ಗುರಿಯಾಗತಕ್ಕದ್ದು ಮತ್ತು ದಂಡಿತನಾಗತಕ್ಕದ್ದು.

**ವಿವರಣೆ** :– ಈ ಪ್ರಕರಣದ ಉದ್ದೇಶಗಳಿಗಾಗಿ,–

(ಎ) "ಕಂಪನಿ, ನ್ಯಾಸ, ಫರ್ಮ್, ಸಂಘ" ಎಂದರೆ, ಅನುಕ್ರಮವಾಗಿ ಕಂಪನಿಗಳ ಅಧಿನಿಯಮ, 1956ರಡಿಯಲ್ಲಿ (1956ರ ಅಧಿನಿಯಮ ಸಂಖ್ಯೆ 1) ಪರಿಭಾಷಿಸಲಾದ ಒಂದು ಕಂಪನಿ, ಭಾರತೀಯ ನ್ಯಾಸ ಅಧಿನಿಯಮ, 1882 ರಡಿಯಲ್ಲಿ (1882ರ ಅಧಿನಿಯಮ ಸಂಖ್ಯೆ 2) ಪರಿಭಾಷಿಸಲಾದ ನ್ಯಾಸ, ಭಾರತೀಯ ಪಾಲುದಾರಿಕೆ ಅಧಿನಿಯಮ, 1932ರಲ್ಲಿ (1932ರ ಅಧಿನಿಯಮ ಸಂಖ್ಯೆ 9) ಪರಿಭಾಷಿಸಲಾದ ಫರ್ಮ್, ಕರ್ನಾಟಕ ಸಂಘಗಳ ನೋಂದಣಿ ಅಧಿನಿಯಮ, 1960ರಲ್ಲಿ (1960ರ ಕರ್ನಾಟಕ ಅಧಿನಿಯಮ 17) ಪರಿಭಾಷಿಸಲಾದ ಸಂಘ ಅಥವಾ ವ್ಯಕ್ತಿಗಳ ಇತರೆ ಸಂಘ; ಮತ್ತು

(ಬಿ) "ನಿರ್ದೇಶಕ" ಎಂದರೆ,–

(೧) ಕಂಪನಿಯ ಸಂಬಂಧದಲ್ಲಿ ಕಂಪನಿಗಳ ಅಧಿನಿಯಮ, 1956ರ 2ನೇ ಪ್ರಕರಣದ (13)ನೇ ಉಪಪ್ರಕರಣದಲ್ಲಿ ಪರಿಭಾಷಿಸಲಾದ ನಿರ್ದೇಶಕ ಮತ್ತು ಪಾಲುದಾರ ಎಂದರೆ ಫರ್ಮಿನ ಪಾಲುದಾರ ;

(೨) ಸಂಘ (ಸೊಸೈಟಿ), ನ್ಯಾಸ ಅಥವಾ ವ್ಯಕ್ತಿಗಳ ಇತರ ಸಂಘದ ಸಂಬಂಧದಲ್ಲಿ, ಅಧಿನಿಯಮದ ಸೂಕ್ತ ಉಪಬಂಧಗಳಡಿಯಲ್ಲಿ ಅಥವಾ ಸಂದರ್ಭಾನುಸಾರ, ಸಂಘದ (ಸೊಸೈಟಿ), ನ್ಯಾಸದ ಅಥವಾ ಇತರ ಸಂಘದ ನಿಯಮಗಳ ಅಡಿಯಲ್ಲಿ ಸಂಘ (ಸೊಸೈಟಿ), ನ್ಯಾಸ ಅಥವಾ ಇತರ ಸಂಘದ ಆಡಳಿತ ವ್ಯವಹಾರಗಳನ್ನು ವಹಿಸಲಾದ ಯಾವೊಬ್ಬ ವ್ಯಕ್ತಿ.

**7. ವಿಶೇಷ ನ್ಯಾಯಾಲಯಗಳ ರಚನೆ .–** (1) ಸರ್ಕಾರವು, ಭೂ ಕಬಳಿಕೆ ಎಂದು ಆಪಾದಿಸಲಾದ ಯಾವುದೇ ಕೃತ್ಯದ ಶೀಘ್ರ ವಿಚಾರಣೆಗೆ ಮತ್ತು ಕಬಳಿಸಲಾದ ಭೂಮಿಯ ಒಡೆತನ ಮತ್ತು ಹಕ್ಕು ಸ್ವಾಮ್ಯಕ್ಕೆ ಅಥವಾ ಕಾನೂನು ಸಮ್ಮತ ಸ್ವಾಧೀನತೆಗೆ ಸಂಬಂಧಪಟ್ಟ ಮೊಕದ್ದಮೆಗಳ ಮತ್ತು ಕರ್ನಾಟಕ ಭೂಕಂದಾಯ ಅಧಿನಿಯಮ, 1964ರ ಘಿಖಗಿ–ಎ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಲಾದಂಥ ಅಪರಾಧಗಳ ಅಧಿವಿಚಾರಣೆ ನಡೆಸುವುದಕ್ಕೆ ಉಪಬಂಧ ಕಲ್ಪಿಸಲು, ಅಧಿಸೂಚನೆಯ ಮೂಲಕ ಒಂದು ವಿಶೇಷ ನ್ಯಾಯಾಲಯವನ್ನು ರಚಿಸಬಹುದು.

(2) ವಿಶೇಷ ನ್ಯಾಯಾಲಯವು, ಪ್ರಾರಂಭದಲ್ಲಿ ಸರ್ಕಾರವು ನೇಮಕ ಮಾಡುವ ಒಬ್ಬರು ಅಧ್ಯಕ್ಷರನ್ನು ಮತ್ತು ನಾಲ್ವರು ಇತರ ಸದಸ್ಯರನ್ನು ಒಳಗೊಂಡಿರತಕ್ಕದ್ದು.

(3) ಅಧ್ಯಕ್ಷರು, ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿರುವ ಅಥವಾ ನ್ಯಾಯಾಧೀಶರಾಗಿದ್ದ ಒಬ್ಬ ವ್ಯಕ್ತಿಯಾಗಿರತಕ್ಕದ್ದು ಮತ್ತು ಉಳಿದ ನಾಲ್ವರು ಸದಸ್ಯರ ಪೈಕಿ ಇಬ್ಬರು, ಜಿಲ್ಲಾ ನ್ಯಾಯಾಧೀಶರಾಗಿರುವವರು ಅಥವಾ ಜಿಲ್ಲಾ ನ್ಯಾಯಾಧೀಶರಾಗಿದ್ದವರಾಗಿರತಕ್ಕದ್ದು (ಇದರಲ್ಲಿ ಇನ್ನು ಮುಂದೆ ನ್ಯಾಯಿಕ ಸದಸ್ಯರೆಂದು ಉಲ್ಲೇಖಿಸಲಾಗಿದೆ) ಮತ್ತು ಉಳಿದ ಇಬ್ಬರು ಸದಸ್ಯರು ಜಿಲ್ಲೆಯ ಜಿಲ್ಲಾಧಿಕಾರಿಗಳ ದರ್ಜೆಗೆ ಕಡಿಮೆ ಇಲ್ಲದ ದರ್ಜೆಯ ಹುದ್ದೆಯನ್ನು ಹೊಂದಿರುವವರು ಅಥವಾ ಹೊಂದಿದ್ದವರಾಗಿರತಕ್ಕದ್ದು (ಇದರಲ್ಲಿ ಇನ್ನು ಮುಂದೆ ಕಂದಾಯ ಸದಸ್ಯರೆಂದು ಉಲ್ಲೇಖಿಸಲಾಗಿದೆ) :

ಪರಂತು, ವಿಶೇಷ ,ನ್ಯಾಯಾಲಯದ ಅಧ್ಯಕ್ಷರಾಗಿ, ಉಚ್ಚ ನ್ಯಾಯಾಲಯದ ನ್ಯಾಯಾಧೀಶರಾಗಿದ್ದ ವ್ಯಕ್ತಿಯ ನೇಮಕಾತಿಯನ್ನು ಉಚ್ಚ ನ್ಯಾಯಾಲಯದ ಮುಖ್ಯ ನ್ಯಾಯಾಧೀಶರೊಂದಿಗೆ ಸಮಾಲೋಚಿಸಿದ ತರುವಾಯ ಮಾಡತಕ್ಕದ್ದು.

(4) ಸರ್ಕಾರವು, ಅಂಥ ಮೊಕದ್ದಮೆಗಳ ವಿಚಾರಣೆಗಾಗಿ ವಿಶೇಷ ನ್ಯಾಯಾಲಯದ ಹೆಚ್ಚುವರಿ ಪೀಠದ ಅವಶ್ಯಕತೆ ಇದೆ ಎಂದು ಅಭಿಪ್ರಾಯಪಟ್ಟಲ್ಲಿ, ಅದರಂತೆಯೇ ಅದು, ಅಧಿಸೂಚನೆಯ ಮೂಲಕ, ಅದರಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳಿಗೆ ಸಂಬಂಧಿಸಿದಂತೆ ವಿಶೇಷ ನ್ಯಾಯಾಲಯದ ಹೆಚ್ಚುವರಿ ಪೀಠವನ್ನು ರಚಿಸಬಹುದು.

(5) ಅಂಥ ಹೆಚ್ಚುವರಿ ಪೀಠವು, (3)ನೇ ಉಪಪ್ರಕರಣದಲ್ಲಿ ನಿರ್ದಿಷ್ಟಪಡಿಸಲಾದ ಅರ್ಹತೆ ಹೊಂದಿದ ಒಬ್ಬ ನ್ಯಾಯಿಕ ಸದಸ್ಯ ಮತ್ತು ಒಬ್ಬ ಕಂದಾಯ ಸದಸ್ಯನನ್ನು ಒಳಗೊಂಡಿರತಕ್ಕದ್ದು.

(6) ಸರ್ಕಾರವು, ಕಾಲಕಾಲಕ್ಕೆ ಅಧಿಸೂಚನೆಯ ಮೂಲಕ (1)ನೇ ಉಪಪ್ರಕರಣದ ಅಡಿಯಲ್ಲಿ ರಚಿಸಲಾದ ವಿಶೇಷ ನ್ಯಾಯಾಲಯವನ್ನು ಪುನಾರಚಿಸಬಹುದು.

(7) ಅಧ್ಯಕ್ಷರು ಅಥವಾ ಇತರ ಸದಸ್ಯರು, ಪದಧಾರಣ ಮಾಡಿದ ದಿನಾಂಕದಿಂದ ಮೂರು ವರ್ಷಗಳ ಅವಧಿಯವರೆಗೆ ಅಥವಾ ವಿಶೇಷ ನ್ಯಾಯಾಲಯವು ಪುನಾರಚನೆಯಾಗುವವರೆಗೆ ಇವುಗಳಲ್ಲಿ ಯಾವುದು ತರುವಾಯದ್ದೋ ಆವರೆಗೆ ಹಾಗೆ ಅಂಥ ಪದವನ್ನು ಧಾರಣ ಮಾಡತಕ್ಕದ್ದು.

(8) (ಎ) ಈ ಅಧಿನಿಯಮದ ಇತರ ಉಪಬಂಧಗಳಿಗೆ ಒಳಪಟ್ಟು, ವಿಶೇಷ ನ್ಯಾಯಾಲಯದ ಅಧಿಕಾರವ್ಯಾಪ್ತಿ, ಅಧಿಕಾರಗಳನ್ನು ಮತ್ತು ಪ್ರಾಧಿಕಾರವನ್ನು ಅದರ ವಿವಿಧ ಪೀಠಗಳು ಅಂದರೆ ಅಧ್ಯಕ್ಷರು, ಒಬ್ಬರು ನ್ಯಾಯಿಕ ಸದಸ್ಯರು ಮತ್ತು ಒಬ್ಬರು ಕಂದಾಯ ಸದಸ್ಯರನ್ನು ಒಳಗೊಂಡ ಒಂದು ಪೀಠ ಮತ್ತು ಒಬ್ಬರು ನ್ಯಾಯಿಕ ಸದಸ್ಯರು ಮತ್ತು ಒಬ್ಬರು ಕಂದಾಯ ಸದಸ್ಯರನ್ನು ಒಳಗೊಂಡ ಇನ್ನೊಂದು ಪೀಠವು ಚಲಾಯಿಸಬಹುದು.

(ಬಿ) ಅಧ್ಯಕ್ಷರನ್ನು ಒಳಗೊಂಡ ಪೀಠದ ಸಂಬಂಧದಲ್ಲಿ, ಅವರು ಅಂಥ ಪೀಠದ ಪೀಠಾಸೀನ ಅಧಿಕಾರಿಯಾಗಿರತಕ್ಕದ್ದು ಮತ್ತು ಪೀಠವು ಇಬ್ಬರು ಸದಸ್ಯರನ್ನು ಒಳಗೊಂಡಿದ್ದಲ್ಲಿ ನ್ಯಾಯಿಕ ಸದಸ್ಯರು ಪೀಠಾಸೀನ ಅಧಿಕಾರಿಯಾಗಿರತಕ್ಕದ್ದು.

(ಸಿ) ಅಧ್ಯಕ್ಷರು ತಾವಾಗಿಯೇ ಆಗಲಿ ಅಥವಾ ತಮಗೆ ಮಾಡಿದ ಉಲ್ಲೇಖದ ಮೇಲಾಗಲಿ ಇಬ್ಬರು ಸದಸ್ಯರನ್ನು ಒಳಗೊಂಡ ಪೀಠದ ಮುಂದೆ ಇತ್ಯರ್ಥದಲ್ಲಿರುವ ಯಾವುದೇ ಮೊಕದ್ದಮೆಯನ್ನು ಹಿಂತೆಗೆದುಕೊಂಡು ಅದನ್ನು ವಿಲೆ ಮಾಡುವುದಕ್ಕೆ ಅಥವಾ ಯಾವುದೇ ಪ್ರಕರಣವನ್ನು ಒಂದು ಪೀಠದಿಂದ ಇನ್ನೊಂದು ಪೀಠಕ್ಕೆ ವರ್ಗಾಯಿಸುವುದಕ್ಕೆ ಸಕ್ಷಮರಾಗಿರತಕ್ಕದ್ದು.

(ಡಿ) ಈ ಅಧಿನಿಯಮದ ಅಡಿಯಲ್ಲಿ ಒಂದು ಅಪರಾಧದ ಬಗ್ಗೆ ಆಪಾದಿತನಾದ ವ್ಯಕ್ತಿಯ ಸಿವಿಲ್ ಹೊಣೆಗಾರಿಕೆಯ ಬಗ್ಗೆ ವಿಚಾರಣೆಯು, ಸಾಕಷ್ಟು ಸಮಯವನ್ನು ತೆಗೆದುಕೊಳ್ಳುವ ಸಂಭವವಿದೆ ಎಂದು ವಿವೇಚನಾತ್ಮಕವಾಗಿ ಪೂರ್ವಭಾವನೆ ಮಾಡಲಾಗಿದ್ದಲ್ಲಿ, ಅಧ್ಯಕ್ಷರು, ಅಂಥ ಅಪರಾಧಿಯ ಕ್ರಿಮಿನಲ್ ಹೊಣೆಗಾರಿಕೆಯ ಬಗ್ಗೆ ವಿಚಾರಣೆಯನ್ನು ಮೊಕದ್ದಮೆಯ ಶೀಘ್ರ ವಿಲೆಯ ದೃಷ್ಟಿಯಿಂದ ಇನ್ನೊಂದು ಪೀಠಕ್ಕೆ ವಹಿಸಬಹುದು.

(ಇ) ಇಬ್ಬರು ಸದಸ್ಯರನ್ನೊಳಗೊಂಡ ಪೀಠವು ಈ ಅಧಿನಿಯಮದ ಅಡಿಯಲ್ಲಿಯ ಮೊಕದ್ದಮೆಯ ವಿಚಾರಣೆಯನ್ನು ನಡೆಸಿದ್ದರೆ ಮತ್ತು ಅದರ ಸದಸ್ಯರ ನಡುವೆ ಅಭಿಪ್ರಾಯ ಭೇದವಿದ್ದರೆ ಅವರ ಅಭಿಪ್ರಾಯಗಳೊಡನೆ ಮೊಕದ್ದಮೆಯನ್ನು ಇನ್ನೊಬ್ಬ ನ್ಯಾಯಿಕ ಸದಸ್ಯರ ಅಥವಾ ಅಧ್ಯಕ್ಷರ ಮುಂದೆ ಮಂಡಿಸತಕ್ಕದ್ದು ಮತ್ತು ಆ ಸದಸ್ಯರು ಅಥವಾ ಸಂದರ್ಭಾನುಸಾರ ಅಧ್ಯಕ್ಷರು, ತಾವು ಸೂಕ್ತವೆಂದು ಭಾವಿಸುವ ಅಂಥ ಅಹವಾಲನ್ನು ಕೇಳಿದ ತರುವಾಯ ತಮ್ಮ ಅಭಿಪ್ರಾಯವನ್ನು ತಿಳಿಸತಕ್ಕದ್ದು ಮತ್ತು ತೀರ್ಮಾನ ಅಥವಾ ಆದೇಶವು ಆ ಅಭಿಪ್ರಾಯಕ್ಕೆ ಅನುಸಾರವಾಗಿರತಕ್ಕದ್ದು.

(9) ವಿಶೇಷ ನ್ಯಾಯಾಲಯದ ಯಾವುದೇ ಪೀಠದ ಸಭೆಯ ಕೋರಂ ಎರಡು ಆಗಿರತಕ್ಕದ್ದು.

(10) ವಿಶೇಷ ನ್ಯಾಯಾಲಯದ ಯಾವುದೇ ಕಾರ್ಯ ಅಥವಾ ನಡೆವಳಿಕೆಯು, ಅದರ ಸದಸ್ಯರ ಯಾವುದಾದರೂ ಸ್ಥಾನವು ಖಾಲಿ ಇರುವ ಅಥವಾ ಅದರ ರಚನೆ ಅಥವಾ ಪುನಾರಚನೆಯಲ್ಲಿ ಯಾವುದೇ ದೋಷ ಇರುವ ಕಾರಣ ಮಾತ್ರದಿಂದಲೇ ಅನೂರ್ಜಿತವಾಗಿದೆಯೆಂದು ಭಾವಿಸತಕ್ಕದ್ದಲ್ಲ.

**8. ಅಧಿಕಾರಿಗಳಿಗೆ ಪ್ರಾಧಿಕಾರ ನೀಡುವುದು.–** ಸರ್ಕಾರವು, ಅಧಿಸೂಚನೆಯ ಮೂಲಕ ತಹಸೀಲ್ದಾರ್ ದರ್ಜೆಗೆ ಕಡಿಮೆಯಲ್ಲದ ಒಬ್ಬ ಸರ್ಕಾರಿ ಅಧಿಕಾರಿಗೆ, ಆಡಳಿತದ ಜವಾಬ್ದಾರಿಯುಳ್ಳ ಹಾಗೂ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮಕೈಗೊಳ್ಳುವ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳ ಸಂಬಂಧದಲ್ಲಿ ಅಂಥ ಅಧಿಕಾರಗಳನ್ನು ಚಲಾಯಿಸುವ ಹಾಗೂ ಅಂಥ ಪ್ರಕಾರ್ಯಗಳನ್ನು ನೆರವೇರಿಸುವ ಅಧಿಕಾರಿಯೆಂದು ಪ್ರಾಧಿಕಾರ ನೀಡಬಹುದು.

**9. ವಿಶೇಷ ನ್ಯಾಯಾಲಯಗಳ ಕಾರ್ಯವಿಧಾನ ಮತ್ತು ಅಧಿಕಾರಗಳು.–** (1) ವಿಶೇಷ ನ್ಯಾಯಾಲಯವು, ತಾನಾಗಿಯೇ ಆಗಲಿ ಅಥವಾ ಯಾವೊಬ್ಬ ವ್ಯಕ್ತಿ, ಅಧಿಕಾರಿ ಅಥವಾ ಪ್ರಾಧಿಕಾರವು ಸಲ್ಲಿಸಿದ ಅರ್ಜಿಯ ಮೇಲೆ ಆಗಲಿ, ಭೂ ಕಬಳಿಕೆ ಮಾಡಲಾಗಿದೆ ಎಂದು ಆರೋಪಿಸಲಾದ ಯಾವುದೇ ಕೃತ್ಯದ ಅಥವಾ ಕಬಳಿಸಲಾದ ಭೂಮಿಯ ಮಾಲೀಕತ್ವದ ಮತ್ತು ಸ್ವಾಮ್ಯದ ಸಂಬಂಧದಲ್ಲಿ, ಅಥವಾ ಕಾನೂನುಬದ್ಧ ಸ್ವಾಧೀನತ್ವದ ಸಂಬಂಧದಲ್ಲಿ ಉದ್ಭವಿಸುವ, ಅಥವಾ ಈ ಅಧಿನಿಯಮದ ಪ್ರಾರಂಭಕ್ಕೆ ಮೊದಲು ಅಥವಾ ನಂತರ ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಘಿಖಗಿ–ಎ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಿದ ಅಪರಾಧಗಳಿಂದ ಉದ್ಭವಿಸುವ ಪ್ರತಿಯೊಂದು ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಬಹುದು ಮತ್ತು ಅಧಿವಿಚಾರಣೆಯನ್ನು ನಡೆಸಬಹುದು ಮತ್ತು ಮಧ್ಯಂತರ ನಿರ್ದೇಶನಗಳ ಸ್ವರೂಪದಲ್ಲಿನ ಆದೇಶಗಳೂ ಒಳಗೊಂಡಂತೆ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶಗಳನ್ನು ಹೊರಡಿಸಬಹುದು.

(2) ವಿಶೇಷ ನ್ಯಾಯಾಲಯವು, ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಉದ್ದೇಶಕ್ಕಾಗಿ, ಭೂ ಕಬಳಿಕೆ ಮಾಡಲಾಗಿದೆಯೆಂದು ಆರೋಪಿಸಲಾದ ಭೂಮಿ ಇರುವ ಜಾಗ ಅಥವಾ ಅದರ ವಿಸ್ತೀರ್ಣ ಅಥವಾ ಮೌಲ್ಯವನ್ನು ಅಥವಾ ಒಳಗೊಂಡಿರುವ ಕೆಡಕಿನ ಗಹನತೆ ಅಥವಾ ಅಗತ್ಯವಿರುವ ನ್ಯಾಯೋದ್ದೇಶದ ದೃಷ್ಟಿಯನ್ನು ಅಥವಾ ಸಂಬಂಧಟ್ಟ ಯಾವುವೇ ಇತರ ವಿಷಯಗಳನ್ನು ಪರಿಗಣಿಸತಕ್ಕದ್ದು.

(3) ಆರೋಪಿತ ಭೂಕಬಳಿಕೆ ಕೃತ್ಯದ ಅಥವಾ ಈ ಅಧಿನಿಯಮದಡಿ, ಕಬಳಿಸಲಾದ ಯಾವುದೇ ಭೂಮಿಯ ಹಕ್ಕುಸ್ವಾಮ್ಯ, ಮಾಲೀಕತ್ವ ಅಥವಾ ಕಾನೂನುಬದ್ಧ ಸ್ವಾಧೀನದ ಪ್ರಶ್ನೆಯನ್ನು ನಿರ್ಧರಿಸುವ ಮತ್ತು ಕರ್ನಾಟಕ ಭೂ ಕಂದಾಯ ಅಧಿನಿಯಮ, 1964ರ ಭಾಗ-ಎ ಅಧ್ಯಾಯದಲ್ಲಿ ನಿರ್ದಿಷ್ಟಪಡಿಸಲಾದಂಥ ಅಪರಾಧಗಳ ಸಂಬಂಧದಲ್ಲಿ ಮೊಕದ್ದಮೆಯನ್ನು, ಕಬಳಿಸಲಾದ ಭೂಮಿ ಎಲ್ಲಿದೆಯೋ ಆ ಪ್ರದೇಶಕ್ಕಾಗಿ ರಚಿಸಲಾದ ವಿಶೇಷ ನ್ಯಾಯಾಲಯದಲ್ಲಿ ಮಾತ್ರವೇ ವಿಚಾರಣೆ ನಡೆಸತಕ್ಕದ್ದು ಮತ್ತು ಆ ವಿಶೇಷ ನ್ಯಾಯಾಲಯದ ನಿರ್ಧಾರವೇ ಅಂತಿಮವಾಗಿರತಕ್ಕದ್ದು :

ಪರಂತು, ವಿಶೇಷ ನ್ಯಾಯಾಲಯವು ತನ್ನ ಮುಂದೆ ಸಲ್ಲಿಸಲಾದ ಯಾವುದೇ ಅರ್ಜಿಯು ಮೇಲ್ನೋಟಕ್ಕೆ ಕ್ಷುಲ್ಲಕ ಅಥವಾ ಕಿರುಕುಳಕಾರಿಯಾಗಿದೆಯೆಂದು ಅಭಿಪ್ರಾಯಪಟ್ಟರೆ ಅದು, ಆ ಅರ್ಜಿಯನ್ನು ಯಾವುದೇ, ಹೆಚ್ಚಿನ ವಿಚಾರಣೆಯನ್ನು ನಡೆಸದೆ ತಿರಸ್ಕರಿಸತಕ್ಕದ್ದು.

(4) ವಿಶೇಷ ನ್ಯಾಯಾಲಯವು ಭೂ ಕಬಳಿಕೆದಾರನ ವಿರುದ್ಧ ಯಾವ ಕ್ರಮದಲ್ಲಿ ಸಿವಿಲ್ ಮತ್ತು ಕ್ರಿಮಿನಲ್ ಹೊಣೆಗಾರಿಕೆಯನ್ನು ಹೂಡಬೇಕು ಎಂಬುದನ್ನು ತೀರ್ಮಾನಿಸತಕ್ಕದ್ದು. ಸಿವಿಲ್ ಮತ್ತು ಕ್ರಿಮಿನಲ್ ಎರಡೂ ವ್ಯವಹರಣೆಗಳು ಮುಕ್ತಾಯವಾಗುವವರೆಗೆ ತನ್ನ ತೀರ್ಮಾನ ಅಥವಾ ಆದೇಶವನ್ನು ಹೊರಡಿಸಬೇಕೇ ಅಥವಾ ಬೇಡವೇ ಎಂಬುದು ವಿಶೇಷ ನ್ಯಾಯಾಲಯದ ವಿವೇಚನೆಗೆ ಸೇರಿದ್ದಾಗಿರತಕ್ಕದ್ದು. ಕ್ರಿಮಿನಲ್ ವ್ಯವಹರಣೆಗಳ ಸಂದರ್ಭದಲ್ಲಿ ಅಂಗೀಕರಿಸಿದ ಸಾಕ್ಷ್ಯಗಳನ್ನು ಸಿವಿಲ್ ಹೊಣೆಗಾರಿಕೆಯ ಅಧಿವಿಚಾರಣೆಯನ್ನು ನಡೆಸುವಾಗ ಉಪಯೋಗಿಸಿಕೊಳ್ಳಬಹುದು. ಆದರೆ ಸಿವಿಲ್ ವ್ಯವಹರಣೆಯಲ್ಲಿ ಯಾವುದಾದರೂ ಹೆಚ್ಚಿನ ಸಾಕ್ಷ್ಯಗಳನ್ನು ಒದಗಿಸಿದಲ್ಲಿ, ಕ್ರಿಮಿನಲ್ ಹೊಣೆಗಾರಿಕೆಯನ್ನು ನಿರ್ಧರಿಸುವಾಗ ವಿಶೇಷ ನ್ಯಾಯಾಲಯವು ಅದನ್ನು ಪರಿಗಣಿಸತಕ್ಕದ್ದಲ್ಲ. ಭೂ ಕಬಳಿಕೆ ಅಥವಾ ಅದಕ್ಕೆ ದುಷ್ಪ್ರೇರಣೆ ಮಾಡಿದವನೆಂದು ಆರೋಪಿತನಾದ ಯಾವೊಬ್ಬ ವ್ಯಕ್ತಿಯು ವಿಶೇಷ ನ್ಯಾಯಾಲಯದ ಮುಂದೆ ಪ್ರತಿವಾದಿಗಳಿಗೆ ಸಕ್ಷಮ ಸಾಕ್ಷಿಯಾಗಿರತಕ್ಕದ್ದು ಮತ್ತು ಕ್ರಿಮಿನಲ್ ವ್ಯವಹರಣೆಯಲ್ಲಿ ತನ್ನ ವಿರುದ್ಧ ಅಥವಾ ತನ್ನೊಡನೆ ಆರೋಪಿಸಲಾದ ಯಾವೊಬ್ಬ ವ್ಯಕ್ತಿಯ ವಿರುದ್ಧ ಮಾಡಲಾದ ಆರೋಪದ ನಿರಾಕರಣೆ ಮಾಡಲು ಮೌಖಿಕ ಸಾಕ್ಷ್ಯ ನೀಡಬಹುದು:

ಪರಂತು, ಆತನನ್ನು ಆತನ ಸ್ವಂತ ಲಿಖಿತ ಕೋರಿಕೆಯ ಮೇಲಲ್ಲದೆ ಸಾಕ್ಷಿಯೆಂದು ಕರೆಯತಕ್ಕದ್ದಲ್ಲ ಅಥವಾ ಆತನು ಸಾಕ್ಷ್ಯವನ್ನು ನೀಡಲು ತಪ್ಪಿದಲ್ಲಿ ಅದನ್ನು ಯಾವೊಬ್ಬ ಪಕ್ಷಕಾರನು ಅಥವಾ ವಿಶೇಷ ನ್ಯಾಯಾಲಯವು ಯಾವುದೇ ಟೀಕೆಗೆ ವಸ್ತು ವಿಷಯವಾಗಿ ಮಾಡಿಕೊಳ್ಳತಕ್ಕದ್ದಲ್ಲ ಅಥವಾ ಆತನ ವಿರುದ್ಧ ಅಥವಾ ಅದೇ ವ್ಯವಹರಣೆಯಲ್ಲಿ ಆತನ ಜೊತೆಯಲ್ಲಿ ಆರೋಪಿಸಲಾದ ಯಾವೊಬ್ಬ ವ್ಯಕ್ತಿಯ ವಿರುದ್ಧ ಯಾವುದೇ ಪೂರ್ವಭಾವನೆ ಮಾಡುವುದಕ್ಕೆ ಅವಕಾಶ ಮಾಡಿಕೊಡತಕ್ಕದ್ದಲ್ಲ.

(5) (ಎ) ವಿಶೇಷ ನ್ಯಾಯಾಲಯವು, ಒಬ್ಬ ವ್ಯಕ್ತಿಯ ಸಿವಿಲ್ ಹೊಣೆಗಾರಿಕೆಯನ್ನು ತೀರ್ಮಾನಿಸುವಾಗ, ಸಿವಿಲ್ ಪ್ರಕ್ರಿಯಾ ಸಂಹಿತೆ, 1908ರ ಉಪಬಂಧಗಳಿಗೆ ಅಸಂಗತವಾಗದಂತೆ ತನ್ನದೇ ಆದ ಕಾರ್ಯವಿಧಾನವನ್ನು ಅನುಸರಿಸತಕ್ಕದ್ದು.

(ಬಿ) ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಪ್ರತಿಯೊಂದು ಅಪರಾಧವನ್ನು ಕ್ಷಿಪ್ರವಾಗಿ ಅಧಿವಿಚಾರಣೆ ನಡೆಸತಕ್ಕದ್ದು.

(ಸಿ) ಆಪರಾಧಿಕ ಬಲ ಪ್ರಯೋಗಿಸಿ ಅಥವಾ ಬಲ ಪ್ರದರ್ಶಿಸಿ ಅಥವಾ ಆಪರಾಧಿಕ ಭಯೋತ್ಪಾದನೆಯ ಮೂಲಕ ಭೂ ಕಬಳಿಕೆ ಮಾಡಿದ ಅಪರಾಧಕ್ಕಾಗಿ ಒಬ್ಬ ವ್ಯಕ್ತಿಯು ನಿರ್ಣೀತ ಅಪರಾಧಿಯಾದಾಗ, ಮತ್ತು ಅಂಥ ಬಲಪ್ರಯೋಗ ಅಥವಾ ಬಲ ಪ್ರದರ್ಶನ ಅಥವಾ ಭಯೋತ್ಪಾದನೆಯ ಮೂಲಕ ಭೂ ಕಬಳಿಕೆ ಮಾಡಲಾಗಿದೆ ಎಂದು ವಿಶೇಷ ನ್ಯಾಯಾಲಯಕ್ಕೆ ಕಂಡುಬಂದರೆ ಆಗ ವಿಶೇಷ ನ್ಯಾಯಾಲಯವು ತಾನು ಸೂಕ್ತವೆಂದು ಭಾವಿಸಬಹುದಾದಂತೆ, ಅವಶ್ಯವಿದ್ದಲ್ಲಿ ಬಲಪ್ರಯೋಗವನ್ನು ಬಳಸಿ ಅವರನ್ನು ಹೊರದೂಡಿ, ಅದರ ಸ್ವಾಧೀನತೆಯನ್ನು ಮೊದಲಿನವರಿಗೇ ಕೊಡಿಸಿಕೊಡಬೇಕೆಂದು ಆದೇಶಿಸಬಹುದು.

(6) (1)ನೇ ಉಪಪ್ರಕರಣದಡಿಯ ಪ್ರತಿಯೊಂದು ಮೊಕದ್ದಮೆಯನ್ನು ವಿಶೇಷ ನ್ಯಾಯಾಲಯವು, ಸಾಧ್ಯವಾದಷ್ಟು ಮಟ್ಟಿಗೆ, ತನ್ನ ಮುಂದಿನ ಮೊಕದ್ದಮೆಯನ್ನು ಅದನ್ನು ಹೂಡಿದ ದಿನಾಂಕದಿಂದ ಆರು ತಿಂಗಳುಗಳೊಳಗಾಗಿ ಅಂತಿಮವಾಗಿ ಇತ್ಯರ್ಥಗೊಳಿಸತಕ್ಕದ್ದು.

(7) ಭೂ ಕಬಳಿಕೆ ಆರೋಪಿತ ಕೃತ್ಯದ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಪ್ರತಿಯೊಂದು ನಿರ್ಣಯವು ಭೂ ಕಬಳಿಕೆಯ ವಾಸ್ತವಾಂಶದ ಬಗ್ಗೆ ಮತ್ತು ಅಂಥ ಭೂ ಕಬಳಿಕೆಯನ್ನು ಮಾಡಿದ ವ್ಯಕ್ತಿಗಳ ಬಗ್ಗೆ ನಿರ್ಣಾಯಕ ರುಜುವಾತು ಆಗಿರತಕ್ಕದ್ದು ಹಾಗೂ ಭೂ ಕಬಳಿಕೆಗೊಳಗಾದ ಯಾವುದೇ ಭೂಮಿಯ ಹಕ್ಕುಸ್ವಾಮ್ಯ ಮತ್ತು ಮಾಲೀಕತ್ವದ ಅಥವಾ ಕಾನೂನುಬದ್ಧ ಸ್ವಾಧೀನತೆಯ ಸಂಬಂಧದಲ್ಲಿ ವಿಶೇಷ ನ್ಯಾಯಾಲಯದ ಪ್ರತಿಯೊಂದು ತೀರ್ಪು ಅಂಥ ಭೂಮಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಎಲ್ಲ ವ್ಯಕ್ತಿಗಳಿಗೆ ಬಂಧನಕಾರಿಯಾಗಿರತಕ್ಕದ್ದು :

ಪರಂತು, ವಿಶೇಷ ನ್ಯಾಯಾಲಯವು, ಈ ಅಧಿನಿಯಮದ ಅಡಿಯಲ್ಲಿ ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳುವ ಸಂಗತಿಯನ್ನು ಅಧಿಸೂಚಿಸುವ ಮೂಲಕ ನಿರ್ದಿಷ್ಟವಾಗಿ ತಿಳಿಸತಕ್ಕದ್ದು. ಅಂಥ ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಿದ ಅವಧಿಯೊಳಗೆ, ಖಾಲಿ ಮಾಡಿಸಬೇಕಾದ ಸ್ವತ್ತಿನ ಅಭಿರಕ್ಷೆ ಉಳ್ಳವನೂ ಸೇರಿದಂತೆ ಯಾವೊಬ್ಬ ವ್ಯಕ್ತಿಯಿಂದ ವಿಶೇಷ ನ್ಯಾಯಾಲಯವು ಸ್ವೀಕರಿಸಬಹುದಾದ ಯಾವುದೇ ಆಕ್ಷೇಪಣೆಯನ್ನು ಅದು ಪರಿಗಣಿಸುತ್ತದೆ ಎಂಬುದನ್ನು ತಿಳಿಸತಕ್ಕದ್ದು:

ಮತ್ತು ಪರಂತು, ಖಾಲಿ ಮಾಡಿಸಬೇಕಾದ ಸ್ವತ್ತಿನ ಅಭಿರಕ್ಷೆದಾರನು, ವಿಶೇಷ ನ್ಯಾಯಾಲಯವು ಮೊಕದ್ದಮೆಯ ಸಂಜ್ಞಾನ ತೆಗೆದುಕೊಳ್ಳುವುದನ್ನು ಆಕ್ಷೇಪಿಸಿದ್ದಲ್ಲಿ ವಿಶೇಷ ನ್ಯಾಯಾಲಯವು ಅಂಥ ಸ್ವತ್ತಿಗೆ ಸಂಬಂಧಿಸಿದಂತೆ ಮೊಕದ್ದಮೆಯನ್ನು ಮುಂದುವರೆಸತಕ್ಕದ್ದಲ್ಲ:

ಮತ್ತೂ ಪರಂತು, ಆ ಭೂಮಿಯಲ್ಲಿ ಹಿತಾಸಕ್ತಿಯನ್ನು ಹೊಂದಿರುವ ಸಾಧ್ಯತೆ ಇದೆ ಎನ್ನುವಂಥ ವ್ಯಕ್ತಿಗಳ ಬಗ್ಗೆ ವಿಶೇಷ ನ್ಯಾಯಾಲಯವು ಒಂದು ಕ್ಷಿಪ್ರ ವಿಚಾರಣೆ ನಡೆಸಿ ಮನದಟ್ಟು ಮಾಡಿಕೊಂಡ ಮೇಲೆ ಆ ಭೂಮಿಯಲ್ಲಿ ಹಿತಾಸಕ್ತಿ ಉಳ್ಳವನೆಂದು ಗೊತ್ತಾದ ಅಥವಾ ನಂಬಲಾದ ಯಾವುದೇ ವ್ಯಕ್ತಿಗೂ, ಅಧಿನಿಯಮದ ಅಡಿಯಲ್ಲಿ ಈ ಪ್ರಕರಣದ ಸಂಜ್ಞಾನವನ್ನು ತೆಗೆದುಕೊಳ್ಳುವ ಬಗ್ಗೆ ಒಂದು ನೋಟಿಸನ್ನು ಜಾರಿಮಾಡುವಂತೆ ಮಾಡತಕ್ಕದ್ದು.

(8) ವಿಶೇಷ ನ್ಯಾಯಾಲಯವು, ನ್ಯಾಯೋದ್ದೇಶಕ್ಕಾಗಿ ತಾನು ಸೂಕ್ತವೆಂದು ಭಾವಿಸಬಹುದಾದಂಥ ಆದೇಶವನ್ನು ಹೊರಡಿಸುವುದು ಕಾನೂನುಬದ್ಧವಾಗಿರತಕ್ಕದ್ದು. ಕಬಳಿಕೆ ಮಾಡಲಾದ ಭೂಮಿಯ ಅಕ್ರಮ ಸ್ವಾಧೀನತೆಯಲ್ಲಿದ್ದುದ್ದಕ್ಕಾಗಿ ಹಣದ ರೂಪದಲ್ಲಿ ಪರಿಹಾರವನ್ನು ನೀಡಬೇಕೆಂದು ಐತೀರ್ಪು ನೀಡಬಹುದು, ಅದು, ಆದೇಶದ ದಿನಾಂಕದಂದು ಇದ್ದಂತೆ ಕಬಳಿಕೆ ಮಾಡಲಾದ ಭೂಮಿಯ ಮಾರುಕಟ್ಟೆ ಬೆಲೆಗೆ ಸಮನಾದ ಮೊಬಲಗಿಗಿಂತ ಕಡಿಮೆಯಲ್ಲದ ಮೊಬಲಗಾಗಿರತಕ್ಕದ್ದು, ಹಾಗೂ ಭೂಮಿಯಿಂದ ಪ್ರಾಪ್ತವಾದ ಲಾಭವನ್ನು ಭೂ ಕಬಳಿಕೆ ಮಾಡಿದವನು ಕಬಳಿಕೆಯಾದ ಭೂಮಿಯ ಮಾಲೀಕನಿಗೆ ಸಂದಾಯಮಾಡತಕ್ಕದ್ದು ಮತ್ತು ಕಬಳಿಕೆ ಮಾಡಲಾಗಿದ್ದ ಭೂಮಿಯನ್ನು ಅದಕ್ಕೆ ಹಕ್ಕುಳ್ಳ ಮಾಲೀಕನಿಗೆ ಪುನಃ ಒಪ್ಪಿಸುವಂತೆ ನಿರ್ದೇಶಿಸಬಹುದು. ಹಾಗೆ ಐತೀರ್ಪು ನೀಡಿದ ಪರಿಹಾರದ ಮೊಬಲಗು ಹಾಗೂ ಲಾಭದ ಮೊಬಲಗು ಮತ್ತು ಪುನಃ ವಶಕ್ಕೆ ತಗಲುವ ವೆಚ್ಚಗಳು, ಯಾವುದಾದರೂ ಇದ್ದರೆ ಅವುಗಳನ್ನು, ಸರ್ಕಾರವು ಭೂ ಮಾಲೀಕನಾಗಿದ್ದ, ಸಂದರ್ಭದಲ್ಲಿ, ಭೂಕಂದಾಯದ ಬಾಕಿಯಂತೆ ವಸೂಲು ಮಾಡತಕ್ಕದ್ದು ಅಥವಾ ಯಾವುದೇ ಇತರ ಸಂದರ್ಭದಲ್ಲಿ, ವಿಶೇಷ ನ್ಯಾಯಾಲಯವು ಜಾರಿಗೊಳಿಸುವ ಸಿವಿಲ್ ನ್ಯಾಯಾಲಯದ ಡಿಕ್ರಿಯಂತೆ ವಸೂಲಿ ಮಾಡತಕ್ಕದ್ದು:

ಪರಂತು, ವಿಶೇಷ ನ್ಯಾಯಾಲಯವು ಈ ಉಪಪ್ರಕರಣದ ಅಡಿಯಲ್ಲಿ ಆದೇಶವನ್ನು ಹೊರಡಿಸುವ ಮೊದಲು ಭೂ ಕಬಳಿಕೆ ಮಾಡಿದವನಿಗೆ, ತನ್ನ ಮನವಿಯನ್ನು ಸಲ್ಲಿಸಲು ಅಥವಾ ಈ ಸಂಬಂಧದಲ್ಲಿ ಸಾಕ್ಷ್ಯವನ್ನು ಒದಗಿಸಲು ಒಂದು ಅವಕಾಶವನ್ನು ಕೊಡತಕ್ಕದ್ದು ಮತ್ತು ಅಂಥ ಪ್ರತಿಯೊಂದು ಮನವಿಯನ್ನು ಮತ್ತು ಸಾಕ್ಷ್ಯವನ್ನು ಪರಿಗಣಿಸತಕ್ಕದ್ದು.

**10. ವಿಶೇಷ ನ್ಯಾಯಾಲಯವು ಸಿವಿಲ್ ನ್ಯಾಯಾಲಯದ ಮತ್ತು ಸೆಷನ್ಸ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರುತ್ತದೆ.–** ಈ ಅಧಿನಿಯಮದಲ್ಲಿ ಸ್ಪಷ್ಟವಾಗಿ ಉಪಬಂಧಿಸಿದ್ದುದನ್ನುಳಿದು, ಈ ಅಧಿನಿಯಮದ ಉಪಬಂಧಗಳಿಗೆ ಅಸಂಗತವಾಗಿಲ್ಲದಿರುವಷ್ಟರ ಮಟ್ಟಿಗೆ ಸಿವಿಲ್ ಪ್ರಕ್ರಿಯಾ ಸಂಹಿತೆ, 1908 ಮತ್ತು ದಂಡ ಪ್ರಕ್ರಿಯಾ ಸಂಹಿತೆ, 1973ರ ಉಪಬಂಧಗಳು ವಿಶೇಷ ನ್ಯಾಯಾಲಯದ ಮುಂದಿರುವ ವ್ಯವಹರಣೆಗಳಿಗೆ ಅನ್ವಯವಾಗತಕ್ಕದ್ದು ಮತ್ತು ಸದರಿ ಅಧಿನಿಯಮಗಳ ಉಪಬಂಧಗಳ ಉದ್ದೇಶಗಳಿಗಾಗಿ, ವಿಶೇಷ ನ್ಯಾಯಾಲಯವನ್ನು ಸಿವಿಲ್ ನ್ಯಾಯಾಲಯವೆಂದು ಅಥವಾ ಸಂದರ್ಭಾನುಸಾರ, ಸೆಷನ್ಸ್ ನ್ಯಾಯಾಲಯವೆಂದು ಭಾವಿಸತಕ್ಕದ್ದು ಹಾಗೂ ಸಿವಿಲ್ ನ್ಯಾಯಾಲಯದ ಮತ್ತು ಸೆಷನ್ಸ್ ನ್ಯಾಯಾಲಯದ ಅಧಿಕಾರಗಳನ್ನು ಹೊಂದಿರತಕ್ಕದ್ದು ಮತ್ತು ವಿಶೇಷ ನ್ಯಾಯಾಲಯದ ಮುಂದೆ ಅಭಿಯೋಗವನ್ನು ನಡೆಸುವ ವ್ಯಕ್ತಿಯನ್ನು ಸರ್ಕಾರಿ ಅಭಿಯೋಜಕ ಎಂದು ಭಾವಿಸತಕ್ಕದ್ದು.

**11. ರುಜುವಾತಿನ ಭಾರ.–** ಈ ಅಧಿನಿಯಮದಡಿಯ ಯಾವುದೇ ವ್ಯವಹರಣೆಗಳಲ್ಲಿ ಭೂಮಿಯು ಸರ್ಕಾರದ ಒಡೆತನದ ಭೂಮಿ ಎಂದು ಮೇಲುನೋಟಕ್ಕೆ ರುಜುವಾತಾದಲ್ಲಿ, ಭೂಮಿಯನ್ನು ಕಬಳಿಸಲಾಗಿದೆಯೆಂದು ಆಪಾದಿಸಲಾದ ವ್ಯಕ್ತಿಯು ಭೂ ಕಬಳಿಕೆ ಮಾಡಿದ್ದಾನೆ ಎಂದು ವಿಶೇಷ ನ್ಯಾಯಾಲಯವು ಪೂರ್ವಭಾವನೆ ಮಾಡತಕ್ಕದ್ದು ಮತ್ತು ತಾನು ಭೂಕಬಳಿಕೆ ಮಾಡಿಲ್ಲವೆಂದು ರುಜುವಾತು ಮಾಡುವ ಭಾರವು ಅಂಥ ವ್ಯಕ್ತಿಯದೇ ಆಗಿರತಕ್ಕದ್ದು.

**12. ವಿಶೇಷ ನ್ಯಾಯಾಲಯದ ಸಿಬ್ಬಂದಿ.–** (1) ಈ ಅಧಿನಿಯಮದಡಿಯಲ್ಲಿ ವಿಶೇಷ ನ್ಯಾಯಾಲಯವು ತನ್ನ ಪ್ರಕಾರ್ಯಗಳನ್ನು ನೆರವೇರಿಸಲು ಸಹಾಯಕ್ಕಾಗಿ ಬೇಕಾಗುವ ಅಧಿಕಾರಿಗಳನ್ನು ಮತ್ತು ಇತರ ನೌಕರರನ್ನು ವಿಶೇಷ ನ್ಯಾಯಾಲಯದ ಅಧ್ಯಕ್ಷರು ನೇಮಿಸಿಕೊಳ್ಳಬಹುದು.

(2) (1)ನೇ ಉಪಪ್ರಕರಣದಡಿ ನೇಮಿಸಬಹುದಾದ ಅಧಿಕಾರಿಗಳು ಮತ್ತು ನೌಕರರ ಪ್ರವರ್ಗಗಳು, ಅವರ ಸಂಬಳಗಳು, ಭತ್ಯೆಗಳು, ನೇಮಕಾತಿ ವಿಧಾನ ಮತ್ತು ಇತರ ಸೇವಾ ಷರತ್ತುಗಳು ಮತ್ತು ವಿಶೇಷ ನ್ಯಾಯಾಲಯದ ಅಧ್ಯಕ್ಷರ ಆಡಳಿತಾಧಿಕಾರಗಳು, ಅಧ್ಯಕ್ಷರೊಡನೆ ಸಮಾಲೋಚಿಸಿದ ತರುವಾಯ, ನಿಯಮಿಸಬಹುದಾದಂಥವು ಆಗಿರತಕ್ಕದ್ದು.

**13. ಅಪರಾಧಗಳ ಅಧಿವಿಚಾರಣೆಯ ಅಧಿಕಾರಗಳು.–** ಈ ಅಧಿನಿಯಮದಡಿಯಲ್ಲಿ ದಂಡನೀಯವಾದ ಎಲ್ಲಾ ಅಪರಾಧಗಳು ಸಂಜ್ಞೇಯವಾಗಿರತಕ್ಕದ್ದು. ವಿಶೇಷ ನ್ಯಾಯಾಲಯವು ಸ್ಥಾಪನೆಯಾಗದೇ ಇರುವ ಸ್ಥಳಗಳಲ್ಲಿ, ರಾಜ್ಯಪತ್ರದಲ್ಲಿ ಅಧಿಸೂಚನೆಯ ಮೂಲಕ ಈ ಬಗ್ಗೆ ಸರ್ಕಾರವು, ನಿರ್ದಿಷ್ಟವಾಗಿ ಸಕ್ಷಮಗೊಳಿಸಿರುವ ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರು ಈ ಅಧಿನಿಯಮದಡಿಯಲ್ಲಿ ದಂಡನೀಯವಾದ ಪ್ರತಿಯೊಂದು ಅಪರಾಧವನ್ನು ಅಧಿವಿಚಾರಣೆ ಮಾಡತಕ್ಕದ್ದು.

**14. ಅಧಿನಿಯಮದಡಿ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳು ಸಾರ್ವಜನಿಕ ನೌಕರರಾಗಿರುವರು.–** ಈ ಅಧಿನಿಯಮದ ಉಪಬಂಧಗಳಡಿಯಲ್ಲಿ ಕಾರ್ಯನಿರ್ವಹಿಸುತ್ತಿರುವ ಪ್ರತಿಯೊಬ್ಬ ವ್ಯಕ್ತಿಯನ್ನು, ಭಾರತ ದಂಡ ಸಂಹಿತೆಯ 21ನೇ ಪ್ರಕರಣದ ಅರ್ಥವ್ಯಾಪ್ತಿಯೊಳಗೆ ಸಾರ್ವಜನಿಕ ನೌಕರನೆಂದು ಭಾವಿಸತಕ್ಕದ್ದು.

**15. ಸದ್ಭಾವನೆಯಿಂದ ಕಾರ್ಯನಿರ್ವಹಿಸುತ್ತಿರುವ ವ್ಯಕ್ತಿಗಳ ರಕ್ಷಣೆ.–** ಈ ಅಧಿನಿಯಮದ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಡಿಯಲ್ಲಿ ಸದ್ಭಾವನೆಯಿಂದ ಕೈಗೊಂಡ ಅಥವಾ ಕೈಗೊಳ್ಳಲು ಉದ್ದೇಶಿಸಲಾದ ಯಾವುದೇ ಕ್ರಮದ ಬಗ್ಗೆ ವಿಶೇಷ ನ್ಯಾಯಾಯಲದ ಯಾವೊಬ್ಬ ಅಧಿಕಾರಿ ಅಥವಾ ನೌಕರ ಅಥವಾ ಸರ್ಕಾರದ ಯಾವೊಬ್ಬ ಅಧಿಕಾರಿಯ ವಿರುದ್ಧ ಯಾವುದೇ ದಾವೆ, ಅಭಿಯೋಜನೆ ಅಥವಾ ಕಾನೂನು ವ್ಯವಹರಣೆಗಳನ್ನು ಹೂಡಲು ಅವಕಾಶವು ಇರತಕ್ಕದ್ದಲ್ಲ.

**16. ಇತರ ಕಾನೂನುಗಳ ಮೇಲೆ ಈ ಅಧಿನಿಯಮದ ಅಧ್ಯಾರೋಹಿ ಪರಿಣಾಮ.–** ಈ ಅಧಿನಿಯಮದ ಉಪಬಂಧಗಳು, ತತ್ಕಾಲದಲ್ಲಿ ಜಾರಿಯಲ್ಲಿರುವ ಇತರ ಯಾವುದೇ ಕಾನೂನಿನಲ್ಲಿ ಅಥವಾ ರೂಢಿ, ಆಚರಣೆ ಅಥವಾ ಒಪ್ಪಂದದಲ್ಲಿ ಅಥವಾ ನ್ಯಾಯಾಲಯದ ಅಥವಾ ಯಾವುದೇ ಇತರ ನ್ಯಾಯಾಧಿಕರಣ ಅಥವಾ ಪ್ರಾಧಿಕಾರದ ಡಿಕ್ರಿ ಅಥವಾ ಆದೇಶದಲ್ಲಿ ಅವುಗಳಿಗೆ ಅಸಂಗತವಾಗಿ ಏನೇ ಇದ್ದರೂ ಪರಿಣಾಮಕಾರಿಯಾಗಿರತಕ್ಕದ್ದು.

**17. ಪುನರೀಕ್ಷಣೆ.–** ವಿಶೇಷ ನ್ಯಾಯಾಲಯವು, ನ್ಯಾಯ ವಿಫಲತೆಯನ್ನು ತಡೆಗಟ್ಟಲು, 9ನೇ ಪ್ರಕರಣದಡಿಯಲ್ಲಿ ನೀಡಲಾದ ಆದೇಶ ಅಥವಾ ತನ್ನ ತೀರ್ಪನ್ನು ಪುನರೀಕ್ಷಿಸಬಹುದು. ಆದರೆ ದಾಖಲೆಯ ಮೇಲ್ನೋಟಕ್ಕೆ ಕಂಡುಬರುವಂತೆ ಅದನ್ನು ಸಂಗತಿಯ ತಪ್ಪುಗ್ರಹಿಕೆಯಿಂದ, ಯಾವುದೇ ಮುಖ್ಯ ಸಂಗತಿಯ ತಿಳುವಳಿಕೆಯಿಲ್ಲದಿರುವುದರಿಂದ ಅಥವಾ ಸ್ಪಷ್ಟವಾದ ತಪ್ಪಿನಿಂದ ನೀಡಲಾಗಿದೆ ಎಂಬ ಆಧಾರದ ಮೇಲೆ ಹೊರತು ಅಂಥ ಪುನರೀಕ್ಷಣೆಯನ್ನು ಪುರಸ್ಕರಿಸತಕ್ಕದ್ದಲ್ಲ:

ಪರಂತು, ವಿಶೇಷ ನ್ಯಾಯಾಲಯವು, ಅರ್ಜಿದಾರನ ಅಹವಾಲನ್ನು ಕೇಳದೇ, ಪರಿಚಲನೆಯಲ್ಲಿರುವ ಪುನರೀಕ್ಷಣಾ ಅರ್ಜಿಯನ್ನು ಅಂಗೀಕರಿಸುವುದು ಅಥವಾ ತಿರಸ್ಕರಿಸುವುದು ಕಾನೂನು ಬದ್ಧವಾಗಿರತಕ್ಕದ್ದು:

ಮತ್ತೂ ಪರಂತು, ವಿಶೇಷ ನ್ಯಾಯಾಲಯವು, ಬಾಧಿತ ಪಕ್ಷಕಾರರ ಅಹವಾಲನ್ನು ಕೇಳದೇ, ಯಾವುದೇ ಪುನರೀಕ್ಷಣೆ ಅರ್ಜಿಯನ್ನು ಅಂಗೀಕರಿಸತಕ್ಕದ್ದಲ್ಲ ಮತ್ತು ತನ್ನ ಹಿಂದಿನ ಆದೇಶ ಅಥವಾ ತೀರ್ಪನ್ನು ರದ್ದುಗೊಳಿಸತಕ್ಕದ್ದಲ್ಲ.

**18. ನಿಯಮಗಳ ರಚನಾಧಿಕಾರ.–** (1) ಸರ್ಕಾರವು, ಈ ಅಧಿನಿಯಮದ ಉದ್ದೇಶಗಳನ್ನು ನೆರವೇರಿಸುವುದಕ್ಕಾಗಿ, ಅಧಿಸೂಚನೆಯ ಮೂಲಕ ಪೂರ್ವ ಪ್ರಕಟಣೆ ನೀಡಿದ ತರುವಾಯ ನಿಯಮಗಳನ್ನು ರಚಿಸಬಹುದು.

(2) ಈ ಪ್ರಕರಣದ ಅಡಿಯಲ್ಲಿ ರಚಿಸಲಾದ ಪ್ರತಿಯೊಂದು ನಿಯಮವನ್ನು, ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೇ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ, ಅದು ಅಧಿವೇಶನದಲ್ಲಿರುವಾಗ ಮತ್ತು ಅದು ಅಧಿವೇಶನದಲ್ಲಿಲ್ಲದಿರುವಾಗ ನಿಕಟ ತರುವಾಯ ಬರುವ ಅಧಿವೇಶನದಲ್ಲಿ, ಒಂದು ಅಧಿವೇಶನ ಅಥವಾ ಎರಡು ನಿರಂತರ ಅಧಿವೇಶನಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳವರೆಗೆ ಮಂಡಿಸತಕ್ಕದ್ದು ಮತ್ತು ಅದನ್ನು ಹಾಗೆ ಮಂಡಿಸಿದ ಅಧಿವೇಶನ ಅಥವಾ ನಿಕಟೋತ್ತರ ಅಧಿವೇಶನಗಳು ಮುಕ್ತಾಯವಾಗುವ ಮೊದಲು, ವಿಧಾನಮಂಡಲದ ಉಭಯ ಸದನಗಳು ನಿಯಮದಲ್ಲಿ ಯಾವುದೇ ಮಾರ್ಪಾಡು ಮಾಡಬೇಕೆಂದು ಒಪ್ಪಿದರೆ ಅಥವಾ ನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ, ಆ ತರುವಾಯ ಅಂಥ ನಿಯಮವು ಸಂದರ್ಭಾನುಸಾರ ಹಾಗೆ ಮಾರ್ಪಾಟಾದ ರೀತಿಯಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಪರಿಣಾಮಕಾರಿಯಾಗಿರತಕ್ಕದ್ದಲ್ಲ. ಆದಾಗ್ಯೂ ಅಂಥ ಮಾರ್ಪಾಟು ಅಥವಾ ರದ್ಧತಿಯು ಆ ನಿಯಮದ ಅಡಿಯಲ್ಲಿ ಈ ಹಿಂದೆ ಮಾಡಿದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಬಾಧಕವಾಗತಕ್ಕದ್ದಲ್ಲ.

**19. ವಿನಿಯಮಗಳ ರಚನಾಧಿಕಾರ.–** (1) ವಿಶೇಷ ನ್ಯಾಯಾಲಯವು, ಸರ್ಕಾರದ ಸಹಮತಿಯೊಡನೆ ಅಧಿಸೂಚನೆಯ ಮೂಲಕ, ಮೊಕದ್ದಮೆಗಳನ್ನು ನಡೆಸುವಾಗ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ತೀರ್ಮಾನವನ್ನು ತೆಗೆದುಕೊಳ್ಳುವ ರೀತಿಯನ್ನು ನಿಯಂತ್ರಿಸುವ ಸಂಬಂಧದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರ ಅಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂತೆ ವಿನಿಯಮಗಳನ್ನು ರಚಿಸಬಹುದು.

(2) ಜನ ಸಾಮಾನ್ಯರ ತಿಳುವಳಿಕೆಗಾಗಿ, ವಿಶೇಷ ನ್ಯಾಯಾಲಯವು ಅಂಥ ವಿನಿಯಮಗಳ ಸಾರವನ್ನು ಸಾರ್ವಜನಿಕರ ಗಮನಕ್ಕೆ ಬರುವಂತೆ ಮಾಡಿಸತಕ್ಕದ್ದು.

(3) ಈ ಪ್ರಕರಣದ ಅಡಿಯಲ್ಲಿ ರಚಿಸಿದ ಪ್ರತಿಯೊಂದು ವಿನಿಯಮವನ್ನು ಅದನ್ನು ರಚಿಸಿದ ತರುವಾಯ ಸಾಧ್ಯವಾದಷ್ಟು ಬೇಗನೆ ರಾಜ್ಯ ವಿಧಾನಮಂಡಲದ ಪ್ರತಿಯೊಂದು ಸದನದ ಮುಂದೆ ಅದು ಅಧಿವೇಶನದಲ್ಲಿರುವಾಗ ಒಂದು ಅಧಿವೇಶನದಲ್ಲಿ ಅಥವಾ ಒಂದಾದ ಮೇಲೊಂದು ಬರುವ ಎರಡು ಅಥವಾ ಹೆಚ್ಚಿನ ಅನುಕ್ರಮ ಅಧಿವೇಶಗಳಲ್ಲಿ ಅಡಕವಾಗಬಹುದಾದ ಒಟ್ಟು ಹದಿನಾಲ್ಕು ದಿನಗಳ ಅವಧಿಯವರೆಗೆ ಮಂಡಿಸತಕ್ಕದ್ದು ಮತ್ತು ಹಾಗೆ ಮಂಡಿಸಲಾದ ಅಧಿವೇಶನವು ಅಥವಾ ನಿಕಟೋತ್ತರ

ಅಧಿವೇಶನವು ಮುಕ್ತಾಯವಾಗುವ ಮೊದಲು, ಈ ವಿನಿಯಮದಲ್ಲಿ ಯಾವುದೇ ಮಾರ್ಪಾಟು ಮಾಡಬೇಕೆಂದು ಎರಡೂ ಸದನಗಳು ಒಪ್ಪಿದರೆ ಅಥವಾ ಯಾವುದೇ ವಿನಿಯಮವನ್ನು ರಚಿಸಬಾರದೆಂದು ತೀರ್ಮಾನಿಸಿದರೆ ಅಂಥ ವಿನಿಯಮಗಳು, ಅಧಿಸೂಚನೆಯನ್ನು ಹೊರಡಿಸಿದ ದಿನಾಂಕದಿಂದ ಹಾಗೆ ಮಾರ್ಪಾಟಾದ ರೂಪದಲ್ಲಿ ಮಾತ್ರ ಪರಿಣಾಮಕಾರಿಯಾಗಿರತಕ್ಕದ್ದು ಅಥವಾ ಸಂದರ್ಭಾನುಸಾರ ಪರಿಣಾಮಕಾರಿಯಾಗತಕ್ಕದ್ದಲ್ಲ. ಆದಾಗ್ಯೂ ಅಂಥ ಯಾವುದೇ ಮಾರ್ಪಾಟು ಅಥವಾ ರದ್ಧತಿಯು ಆ ವಿನಿಯಮದ ಅಡಿಯಲ್ಲಿ ತತ್ಪೂರ್ವದಲ್ಲಿ ಮಾಡಲಾದ ಯಾವುದೇ ಕಾರ್ಯದ ಸಿಂಧುತ್ವಕ್ಕೆ ಪ್ರತಿಕೂಲ ಪರಿಣಾಮವನ್ನುಂಟು ಮಾಡತಕ್ಕದ್ದಲ್ಲ.

**20. ಇತ್ಯರ್ಥದಲ್ಲಿರುವ ಮೊಕದ್ದಮೆಗಳ ವರ್ಗಾವಣೆ.–** ವಿಶೇಷ ನ್ಯಾಯಾಲಯದ ರಚನೆಯ ನಿಕಟಪೂರ್ವದಲ್ಲಿ, ಯಾವುದೇ ನ್ಯಾಯಾಲಯದ ಅಥವಾ ಇತರೆ ಪ್ರಾಧಿಕಾರದ ಮುಂದೆ, ಅಂಥ ವಿಶೇಷ ನ್ಯಾಯಾಲಯದ ಅಧಿಕಾರವ್ಯಾಪ್ತಿಯೊಳಗೆ ಇರಬಹುದಾಗಿದ್ದ ಯಾವುದೇ ಮೊಕದ್ದಮೆಯು ಇತ್ಯರ್ಥದಲ್ಲಿದ್ದರೆ, ಆ ದಾವೆಯ ಅಥವಾ ವ್ಯವಹರಣೆಯ ವ್ಯಾಜ್ಯ ಕಾರಣವು ವಿಶೇಷ ನ್ಯಾಯಾಲಯದ ರಚನೆಯ ತರುವಾಯ ಉದ್ಭವಿಸಿದ್ದರೆ ಹೇಗೋ ಹಾಗೆ ಆ ದಾವೆ ಅಥವಾ ವ್ಯವಹರಣೆಯನ್ನು ವಿಶೇಷ ನ್ಯಾಯಾಲಯಕ್ಕೆ ವರ್ಗಾಯಿಸತಕ್ಕದ್ದು.

**21. ಕಬಳಿಸಲಾದ ಭೂಮಿಯ ಪರಭಾರೆಯ ನಿಷೇಧ.–** ಕಬಳಿಕೆ ಮಾಡಲಾದ ಭೂಮಿಯನ್ನು ಅಥವಾ ಅದರ ಯಾವುದೇ ಭಾಗವನ್ನು ಮಾರಾಟ, ಗುತ್ತಿಗೆ, ದಾನ, ವಿನಿಮಯ, ಒಪ್ಪಂದ, ಅಧ್ಯರ್ಪಣ, ಭೋಗ್ಯದ ಅಡಮಾನ ಅಥವಾ ಅನ್ಯಥಾ ರೂಪದಲ್ಲಿ ಪರಭಾರೆ ಮಾಡುವುದಕ್ಕೆ ಸಂಬಂಧಪಟ್ಟ ಯಾವುದೇ ವ್ಯವಹಾರವು ಅಥವಾ ಅಂಥ ಭೂಮಿಯ ಸಂಬಂಧದಲ್ಲಿ, ಮಾಡಿಕೊಳ್ಳಲಾದ ಆಸ್ತಿ ವಿಭಜನೆ ಅಥವಾ ರಚಿಸಲಾದ ಒಂದು ನ್ಯಾಸವು, ಅವುಗಳನ್ನು ಈ ಅಧಿನಿಯಮದ ಪ್ರಾರಂಭಕ್ಕೆ ಮುಂಚೆ ಮಾಡಿರಲಿ ಅಥವಾ ತರುವಾಯ ಮಾಡಿರಲಿ ವಿಶೇಷ ನ್ಯಾಯಾಲಯ ಆದೇಶಿಸುವಷ್ಟರ ಮಟ್ಟಿಗೆ ಹೊರತು ಉಳಿದಂತೆ ಅಕೃತ ಮತ್ತು ಶೂನ್ಯವಾಗಿರತಕ್ಕದ್ದು.

## ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆ

ಕರ್ನಾಟಕ ಭೂ ಕಬಳಿಕೆ ನಿಷೇಧ ವಿಧೇಯಕ 2007ನ್ನು ಈ ಮುಂದಿನ ಉದ್ದೇಶಗಳು ಮತ್ತು ಕಾರಣಗಳ ಹೇಳಿಕೆಯೊಂದಿಗೆ ಕರ್ನಾಟಕ ರಾಜ್ಯ ವಿಧಾನಮಂಡಲದ ಎರಡೂ ಸದನಗಳಿಂದ ಅಂಗೀಕರಿಸಲಾಗಿತ್ತು, ಎಂದರೆ:-

"ಸರ್ಕಾರಕ್ಕೆ, ಸ್ಥಳೀಯ ಪ್ರಾಧಿಕಾರಕ್ಕೆ, ವರ್ಕ್‌ಗಳೂ ಸೇರಿದಂತೆ ಒಂದು ಧಾರ್ಮಿಕ ಅಥವಾ ಧರ್ಮಾದಾಯ ಸಂಸ್ಥೆಗೆ ಅಥವಾ ದತ್ತಿಗೆ ಸೇರಿದ ಭೂಮಿಗಳನ್ನು ಕೆಲವು ಕಾನೂನು ವಿರೋಧಿ ವ್ಯಕ್ತಿಗಳು ಒಬ್ಬರೇ ಮತ್ತು ಗುಂಪುಗಳಲ್ಲಿ ಬಲಾತ್ಕಾರದಿಂದ ಅಥವಾ ಮೋಸದಿಂದ ಅಥವಾ ಇನ್ನಾವುದೇ ರೀತಿಯಿಂದ, ಕಬಳಿಸುವುದಕ್ಕೆ ಸಂಘಟಿತ ಪ್ರಯತ್ನ ನಡೆಸುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆ. ಈ ಭೂಕಬಳಿಕೆದಾರರು ನಕಲಿ ಗೃಹ ನಿರ್ಮಾಣ ಸಹಕಾರಿ ಸಂಘಗಳನ್ನು ರಚಿಸುತ್ತಿದ್ದಾರೆ ಅಥವಾ ಸುಳ್ಳು ಕ್ಲೇಮುಗಳನ್ನು ಸೃಷ್ಟಿಸುತ್ತಿದ್ದಾರೆ ಮತ್ತು ನೀತಿಗೆಟ್ಟ ಸ್ಥಿರಾಸ್ತಿ ವ್ಯಾಪಾರಿಗಳ ಮೂಲಕವಾಗಿ ಅಥವಾ ಅನ್ಯಥಾ ಅಂಥ ಭೂಮಿಗಳನ್ನು ಭಾರಿ ಪ್ರಮಾಣದಲ್ಲಿ ಹಾಗೂ ಹಿಂದೆಂದೂ ಇಲ್ಲದ ರೀತಿಯಲ್ಲಿ ಮೋಸದಿಂದ ಜನತೆಯ ಕೆಲವು ವರ್ಗಕ್ಕೆ ಮಾರಾಟ ಮಾಡುತ್ತಿದ್ದಾರೆ ಹಾಗೂ ಇದರಿಂದ ಈ ಭೂಕಬಳಿಕೆದಾರರ ಬಳಿ ಲೆಕ್ಕಕ್ಕೇ ಸಿಗದ ಸಂಪತ್ತು ಯಥೇಚ್ಛವಾಗಿ ಸಂಗ್ರಹವಾಗುತ್ತಿದೆ. ರಾಜ್ಯದಲ್ಲಿ ಭೂಕಬಳಿಕೆದಾರರ ಇಂಥ ಕಾನೂನುಬಾಹಿರ ಚಟುವಟಿಕೆಗಳಿಂದಾಗಿ, ಸಾರ್ವಜನಿಕ ಸುವ್ಯವಸ್ಥೆಯ ಮೇಲೆ, ಅದರಲ್ಲೂ ನಗರ ಮತ್ತು ನಗರೀಕರಣಕ್ಕೆ ಯೋಗ್ಯವಾದ ಭೂಮಿಗಳ ಮೇಲೆ, ದುಷ್ಪರಿಣಾಮ ಆಗುತ್ತಿರುವುದರಿಂದ, ರಾಜ್ಯ ಸರ್ಕಾರವು ಅಂಥ ಕಾನೂನು ಬಾಹಿರ ಚಟುವಟಿಕೆಗಳನ್ನು ತಡೆಗಟ್ಟಲು ಈ ಸಂಬಂಧದಲ್ಲಿ ಒಂದು ವಿಶೇಷ ಕಾನೂನನ್ನು ಕೂಡಲೇ ಜಾರಿಗೆ ತರುವುದು ಅವಶ್ಯಕವೆಂದು ಪರಿಗಣಿಸಿದೆ.

ಆದ್ದರಿಂದ, ಭೂ ಕಬಳಿಕೆಯ ಚಟುವಟಿಕೆಗಳನ್ನು ನಿಷೇಧಿಸಿ ಅದಕ್ಕೆ ಸಂಬಂಧಿಸಿದ ವಿಷಯಗಳಿಗೆ ಉಪಬಂಧವನ್ನು ಕಲ್ಪಿಸಲು ಕರ್ನಾಟಕ ರಾಜ್ಯ ಸರ್ಕಾರವು, ಕರ್ನಾಟಕ ಭೂ ಕಬಳಿಕೆ (ನಿಷೇಧ) ಅಧಿನಿಯಮವನ್ನು ಜಾರಿಗೆ ತರಲು ಉದ್ದೇಶಿಸಿದೆ. ಭೂ ಕಬಳಿಕೆಯನ್ನು ಕಾನೂನು ಬಾಹಿರವೆಂದು ಘೋಷಿಸುವುದಷ್ಟೆ ಅಲ್ಲದೆ ಅಂಥ ಭೂಕಬಳಿಕೆಯನ್ನು ನಿಷೇಧಿಸಲು ಸಹ ರಾಜ್ಯ ಸರ್ಕಾರವು ಉದ್ದೇಶಿಸಿದೆ. ಆದ್ದರಿಂದ ಈ ಅಧಿನಿಯಮವನ್ನು ಪರಿಣಾಮಕಾರಿಯಾಗಿ ಜಾರಿಗೊಳಿಸುವ ಉದ್ದೇಶದಿಂದ ಭೂ ಕಬಳಿಕೆಯ ಸಂಬಂಧದ ಅಪರಾಧಕ್ಕಾಗಿ ದಂಡವನ್ನು ವಿಧಿಸಲು ಹಾಗೂ ಆರೋಪಿತ ಭೂ ಕಬಳಿಕೆ ಕೃತ್ಯದ ಶೀಘ್ರ ವಿಚಾರಣೆ ನಡೆಸುವುದಕ್ಕಾಗಿ ಮತ್ತು ಕಬಳಿಕೆ ಮಾಡಲಾದ ಭೂಮಿಯ ಮಾಲೀಕತ್ವದ ಹಾಗೂ ಅದರ ಹಕ್ಕು ಮೂಲದ ಅಥವಾ ಕಾನೂನುಬದ್ಧ ಸ್ವಾಧೀನತೆಯ ಬಗ್ಗೆ ಮೊಕದ್ದಮೆಯ ಅಧಿವಿಚಾರಣೆಯನ್ನು ನಡೆಸಲು ವಿಶೇಷ ನ್ಯಾಯಾಲಯವನ್ನು ಅಧಿಸೂಚನೆಯ

ಮೂಲಕ ರಚಿಸುವುದಕ್ಕಾಗಿ ಉಪಬಂಧವನ್ನು ಕಲ್ಪಿಸಲು ಸಹ ಪ್ರಾಸ್ತಾವಿಸಲಾಗಿದೆ. ಪ್ರಾಸ್ತಾವಿತ ಶಾಸನವನ್ನು ಜಾರಿಗೊಳಿಸುವುದರಿಂದ ರಾಜ್ಯ ಸರ್ಕಾರಕ್ಕೆ ಅಕ್ರಮ ಭೂ ಕಬಳಿಕೆಯನ್ನು ತಡೆಹಿಡಿಯಲು ಸಾಧ್ಯವಾಗುವುದೆಂದು ಭಾವಿಸಲಾಗಿದೆ."

ತದನುಸಾರವಾಗಿ, ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007ನ್ನು ರಾಜ್ಯ ವಿಧಾನಮಂಡಲದ ಉಭಯ ಸದನಗಳಿಂದ ಅನುಮೋದಿತವಾದಂತೆ, ರಾಷ್ಟ್ರಪತಿಗಳ ಸಮ್ಮತಿಯನ್ನು ಪಡೆಯಲು ಭಾರತ ಸರ್ಕಾರಕ್ಕೆ ಕಳುಹಿಸಲಾಗಿತ್ತು.

ಭಾರತ ಸರ್ಕಾರವು, ತನ್ನ ಪತ್ರ ಸಂಖ್ಯೆ 17/20/2007-ಜೆಯುಡಿಎಲ್ ಮತ್ತು ಪಿಪಿ ದಿನಾಂಕ 16/20.08.2007ರಲ್ಲಿ ನಿಗಮಿತ ವ್ಯವಹಾರಗಳ ಮಂತ್ರಾಲಯವು ಮಾಡಿದ ಸಲಹೆಗಳನ್ನು ಕುರಿತಂತೆ, ಕರ್ನಾಟಕ ಭೂ ಕಬಳಿಕೆ (ನಿಷೇಧ) ವಿಧೇಯಕ, 2007ಕ್ಕೆ ಮಾರ್ಪಾಡುಗಳನ್ನು ಸೂಚಿಸಿತ್ತು. ತದನುಸಾರವಾಗಿ ವಿಧೇಯಕದ 6ನೇ ಖಂಡವನ್ನು ಕಂಪನಿ ಮತ್ತು ನಿರ್ದೇಶಕರು ಎಂಬ ಪದಾವಳಿಗೆ ವಿವರಣೆಯನ್ನು ಸೇರಿಸುವುದರ ಮೂಲಕ ಮಾರ್ಪಾಡುಗೊಳಿಸಲಾಗಿದೆ.

ಪತ್ರ ಸಂಖ್ಯೆ 17/20/2007-ಜೆಯುಡಿಎಲ್ ಮತ್ತು ಪಿಪಿ ದಿನಾಂಕ 18-06-2010ರ ಮೇರೆಗೆ ಭಾರತ ಸರ್ಕಾರವು, ಅಲ್ಪಸಂಖ್ಯಾತ ವ್ಯವಹಾರಗಳ ಮಂತ್ರಾಲಯವು ಮಾಡಿದ ಸಲಹೆಗಳನ್ನು ಕುರಿತಂತೆ, ವಿಧೇಯಕದ 2ನೇ ಖಂಡದ (2)ನೇ ಉಪಖಂಡಕ್ಕೆ ಅಲ್ಲದೆ, ಕಾನೂನು ವ್ಯವಹಾರಗಳ ಇಲಾಖೆಯಿಂದ ಮಾಡಿದ ಸಲಹೆಗಳನ್ನು ಕುರಿತಂತೆ ವಿಧೇಯಕದ 1ನೇ ಖಂಡದ (2)ನೇ ಉಪಖಂಡಕ್ಕೆ ಮಾರ್ಪಾಡುಗಳನ್ನು ಸೂಚಿಸಿತ್ತು. ತದನುಸಾರವಾಗಿ, ರಾಜ್ಯ ಸರ್ಕಾರವು ತನ್ನ ಪತ್ರ ಸಂಖ್ಯೆ ಡಿಪಿಎಎಲ್ 22 ಶಾಸನ 2007 ದಿನಾಂಕ 7-9-2010ರ ಮೇರೆಗೆ, ವಕ್ಫ್, ಹಿಂದೂ ಧಾರ್ಮಿಕ ಸಂಸ್ಥೆಗಳು ಮತ್ತು ಧರ್ಮಾದಾಯ ದತ್ತಿಗಳಿಗೆ ಸೇರಿದ ಭೂಮಿಗಳಿಗೆ ಉಪಬಂಧಗಳನ್ನು ವಿಸ್ತರಿಸುವ ಮೂಲಕ ವಿಧೇಯಕವನ್ನು ತಿದ್ದುಪಡಿ ಮಾಡುವ ಮೂಲಕ ಸದರಿ ಮಾರ್ಪಾಡುಗಳನ್ನು ಮಾಡುವುದಕ್ಕೆ ತನ್ನ ಒಪ್ಪಿಗೆಯನ್ನು ನೀಡಿ ಸದರಿ ವಿಧೇಯಕಕ್ಕೆ ರಾಷ್ಟ್ರಪತಿಗಳ ಸಮ್ಮತಿಯನ್ನು ಪಡೆಯಲು, ಅಲ್ಲದೆ, ಅಧ್ಯಾದೇಶದ ರೂಪದಲ್ಲಿ ಹೊರಡಿಸಬೇಕಾದ ಮಾರ್ಪಾಡುಗಳಿಗೆ ಪೂರ್ವ ಅನುದೇಶವನ್ನು ಪಡೆಯಲು ಕೋರಿಕೊಂಡಿತ್ತು.

ಭಾರತ ಸರ್ಕಾರವು ತನ್ನ ಪತ್ರ ಸಂಖ್ಯೆ 17/20/2007-ಜೆಯುಡಿಎಲ್ ಮತ್ತು ಪಿಪಿ ದಿನಾಂಕ: 03-03-2010/2011ರ ಮೇರೆಗೆ, ಹಾಲಿಯಿರುವ ವಿಧೇಯಕ (2007ರ ವಿಧಾನ ಸಭೆಯ ವಿಧೇಯಕ ಸಂಖ್ಯೆ 27) ನ್ನು ಹಿಂದಕ್ಕೆ ಪಡೆಯಲು ಪರ್ಯಾಲೋಚಿಸಿ, ಯಾವುದೇ ತಿದ್ದುಪಡಿ ಅಧ್ಯಾದೇಶದ ಸಮವರ್ತಿ ಸಮಾಪನೆಗಾಗಿ ಬದಲಾಗಿ ಮಾರ್ಪಾಟಾದ ವಿಧೇಯಕವನ್ನು ಸಲ್ಲಿಸಲು ನಿರ್ದೇಶಿಸಿದೆ.

ಆದ್ದರಿಂದ ಈ ವಿಧೇಯಕ.

# ಆರ್ಥಿಕ ಜ್ಞಾಪನ ಪತ್ರ

ಪ್ರಸ್ತಾವಿತ ಶಾಸನಾತ್ಮಕ ಕ್ರಮದಿಂದಾಗಿ ರಾಜ್ಯದ ಬೊಕ್ಕಸಕ್ಕೆ ಅಂದಾಜು, 1,69,07,452-00 ರೂಪಾಯಿಗಳ ವೆಚ್ಚವಾಗುವುದೆಂದು ಲೆಕ್ಕಹಾಕಲಾಗಿದೆ.

# ಪ್ರತ್ಯಾಯೋಜಿತ ಶಾಸನ ರಚನಾಧಿಕಾರ ಕುರಿತ ಜ್ಞಾಪನ ಪತ್ರ

| | |
|---|---|
| ಖಂಡ 7: | (1) ವಿಶೇಷ ನ್ಯಾಯಾಲಯವನ್ನು ಸ್ಥಾಪಿಸುವುದಕ್ಕೆ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ.<br>(2) ವಿಶೇಷ ನ್ಯಾಯಾಲಯದ ಹೆಚ್ಚುವರಿ ಪೀಠವನ್ನು ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 8: | ತಹಸೀಲ್ದಾರ್ ದರ್ಜೆಗೆ ಕಡಿಮೆಯಲ್ಲದ ಒಬ್ಬ ಸರ್ಕಾರಿ ಅಧಿಕಾರಿಗೆ, ಆಡಳಿತ ಜವಾಬ್ದಾರಿಯುಳ್ಳ ಹಾಗೂ ಈ ಅಧಿನಿಯಮದ ಉಪಬಂಧಗಳನ್ನು ಪರಿಣಾಮಕಾರಿಯಾಗಿ ಜಾರಿಗೆ ತರುವ, ಈ ಅಧಿನಿಯಮದ ಉಪಬಂಧಗಳನ್ನು ಉಲ್ಲಂಘಿಸುವ ವ್ಯಕ್ತಿಗಳ ವಿರುದ್ಧ ಕಾನೂನು ಕ್ರಮ ಕೈಗೊಳ್ಳುವ ಮತ್ತು ಅಧಿಸೂಚನೆಯಲ್ಲಿ ನಿರ್ದಿಷ್ಟಪಡಿಸಬಹುದಾದಂಥ ಪ್ರದೇಶಗಳ ಸಂಬಂಧದಲ್ಲಿ ಅಂಥ ಅಧಿಕಾರಗಳನ್ನು ಚಲಾಯಿಸುವ ಹಾಗೂ ಅಂಥ ಪ್ರಕಾರ್ಯಗಳನ್ನು ನೆರವೇರಿಸುವ ಅಧಿಕಾರಿಯೆಂದು ಪ್ರಾಧಿಕಾರ ನೀಡಲು ರಾಜ್ಯ ಸರ್ಕಾರಕ್ಕೆ ಅಧಿಕಾರ ನೀಡುತ್ತದೆ. |
| ಖಂಡ 9: | ಈ ಅಧಿನಿಯಮದ ಅಡಿಯಲ್ಲಿ ಮೊಕದ್ದಮೆಯನ್ನು ಸಂಜ್ಞಾನಕ್ಕೆ ತೆಗೆದುಕೊಂಡಿರುವ ಅಂಶವನ್ನು ನಿರ್ದಿಷ್ಟವಾಗಿ ತಿಳಿಸಲು ವಿಶೇಷ ನ್ಯಾಯಾಲಯಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 13: | ವಿಶೇಷ ನ್ಯಾಯಾಲಯವನ್ನು ರಚಿಸದಿರುವ ಕಡೆಯಲ್ಲಿ ಈ ಅಧಿನಿಯಮದ ಅಡಿಯಲ್ಲಿ ದಂಡನೀಯವಾದ ಎಲ್ಲ ಅಪರಾಧಗಳನ್ನು ಸಂಜ್ಞಾನಕ್ಕೆ ತೆಗೆದುಕೊಳ್ಳಲು ಪ್ರಥಮ ದರ್ಜೆ ಮ್ಯಾಜಿಸ್ಟ್ರೇಟರಿಗೆ ಅಧಿಕಾರ ನೀಡುವುದಕ್ಕಾಗಿ ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 18: | ಈ ಅಧಿನಿಯಮದ ಉದ್ದೇಶಗಳನ್ನು ಕಾರ್ಯಗತಗೊಳಿಸುವುದಕ್ಕಾಗಿ ನಿಯಮಗಳನ್ನು ಪೂರ್ವ ಪ್ರಕಟಣೆ ಮಾಡಿ ರಚಿಸಲು ರಾಜ್ಯ ಸರ್ಕಾರಕ್ಕೆ ಅಧಿಕಾರವನ್ನು ನೀಡುತ್ತದೆ. |
| ಖಂಡ 19: | ಮೊಕದ್ದಮೆಗಳನ್ನು ನಡೆಸುವಾಗ ಅನುಸರಿಸಬೇಕಾದ ಪ್ರಕ್ರಿಯೆಯನ್ನು ಮತ್ತು ತೀರ್ಮಾನಗಳನ್ನು ತೆಗೆದುಕೊಳ್ಳುವ ರೀತಿಯನ್ನು ನಿಯಂತ್ರಿಸುವ ಸಂಬಂಧದಲ್ಲಿ ಈ ಅಧಿನಿಯಮದ ಉಪಬಂಧಗಳಿಗೆ ಅಥವಾ ಅದರಡಿಯಲ್ಲಿ ರಚಿಸಲಾದ ನಿಯಮಗಳಿಗೆ ಅಸಂಗತವಾಗದಂತೆ, ಸರ್ಕಾರದ ಸಹಮತಿಯೊಡನೆ, ವಿನಿಯಮಗಳನ್ನು ರಚಿಸಲು ವಿಶೇಷ ನ್ಯಾಯಾಲಯಕ್ಕೆ ಅಧಿಕಾರ ನಿಡುತ್ತದೆ.<br>ಪ್ರಸ್ತಾವಿತ ಶಾಸನ ರಚನಾಧಿಕಾರದ ಪ್ರತ್ಯಾಯೋಜನೆಯು ಸಾಮಾನ್ಯ ಸ್ವರೂಪದ್ದಾಗಿದೆ. |

**ಡಿ.ವಿ. ಸದಾನಂದ ಗೌಡ**
ಮುಖ್ಯಮಂತ್ರಿಗಳು

**ವಿ. ಶ್ರೀಶ್**
ಕಾರ್ಯದರ್ಶಿ
ಕರ್ನಾಟಕ ವಿಧಾನ ಪರಿಷತ್ತು

## ಅನುಬಂಧ – X

## (ಕರ್ನಾಟಕ ವಿಧಾನ ಸಭೆಯ ಕಾರ್ಯವಿಧಾನ ಮತ್ತು ನಡವಳಿಕೆಯ ನಿಯಮಗಳು 324 ರಿಂದ 351ರ ಉದ್ಧೃತ ಭಾಗ)

### ಸದಸ್ಯರು ಪಾಲಿಸಬೇಕಾದ ನಿಯಮಗಳು

**324. ಸದನದಲ್ಲಿ ಉಪಸ್ಥಿತರಿದ್ದಾಗ ಸದಸ್ಯರು ಪಾಲಿಸಬೇಕಾದ ನಿಯಮಗಳು:**

**ಸಭೆಯ ಉಪವೇಶನದಲ್ಲಿ ಸದಸ್ಯನು:**

(1) ಸದನದ ಕಾರ್ಯಕಲಾಪಕ್ಕೆ ಸಂಬಂಧಿಸಿರುವುದನ್ನು ಹೊರತು, ಯಾವುದೇ ಪುಸ್ತಕ, ವಾರ್ತಾ ಪತ್ರಿಕೆ ಅಥವಾ ಕಾಗದವನ್ನು ಓದತಕ್ಕದ್ದಲ್ಲ.

(2) ಯಾವನೇ ಸದಸ್ಯನು ಮಾತನಾಡುತ್ತಿರುವಾಗ ಅವನಿಗೆ ದುರ್ವಚನೆಗಳಿಂದ ಅಥವಾ ಏರುಸ್ವರದಿಂದ ಅಥವಾ ಇತರ ಯಾವುದೇ ಕ್ರಮಬಾಹಿರ ರೀತಿಯಲ್ಲಿ ತೊಂದರೆಯುಂಟು ಮಾಡತಕ್ಕದ್ದಲ್ಲ.

(3) ಸದನವನ್ನು ಪ್ರವೇಶಿಸುವಾಗ ಅಥವಾ ಅಲ್ಲಿಂದ ನಿರ್ಗಮಿಸುವಾಗ ಮತ್ತು ತಮ್ಮ ಜಾಗದಲ್ಲಿ ಕುಳಿತುಕೊಳ್ಳುವಾಗ ಅಥವಾ ಜಾಗವನ್ನು ಬಿಡುವಾಗ ಅಧ್ಯಕ್ಷರಿಗೆ ವಂದಿಸತಕ್ಕದ್ದು.

(4) ಅಧ್ಯಕ್ಷರ ಮತ್ತು ಮಾತನಾಡುತ್ತಿರುವ ಸದಸ್ಯರ ಮಧ್ಯೆ ಹಾದು ಹೋಗತಕ್ಕದ್ದಲ್ಲ.

(5) ಅಧ್ಯಕ್ಷರು ಸಭೆಯನ್ನು ಉದ್ದೇಶಿಸಿ ಭಾಷಣ ಮಾಡುತ್ತಿರುವಾಗ ಸದನವನ್ನು ತ್ಯಜಿಸತಕ್ಕದ್ದಲ್ಲ.

(6) ಯಾವಾಗಲೂ ಅಧ್ಯಕ್ಷರನ್ನು ಸಂಬೋಧಿಸಿ ಮಾತನಾಡತಕ್ಕದ್ದು.

(7) ಸಭೆಯನ್ನು ಉದ್ದೇಶಿಸಿ ಮಾತನಾಡುವಾಗ ತನ್ನ ಸ್ಥಾನದಲ್ಲಿರತಕ್ಕದ್ದು.

(8) ಸದನದಲ್ಲಿ ಮಾತನಾಡದೇ ಇರುವ ಸಮಯದಲ್ಲಿ ನಿಶ್ಯಬ್ಧವಾಗಿರತಕ್ಕದ್ದು.

(9) ಸಭೆಯ ಕಾರ್ಯವಿಧಿಗೆ ತಡೆ ಅಥವಾ ವಿಘ್ನವನ್ನು ತರತಕ್ಕದ್ದಲ್ಲ ಮತ್ತು ಸದನದಲ್ಲಿ ಭಾಷಣವಾಗುತ್ತಿರುವಾಗ ವೀಕ್ಷಕ ವಿವರಣೆಯನ್ನು ಮಾಡತಕ್ಕದ್ದಲ್ಲ.

(10) ಯಾವುದೇ ಉಪ್ಪರಿಗೆಯ ಮೊಗಸಾಲೆಯನ್ನು (ಗ್ಯಾಲರಿಯನ್ನು) ಒಬ್ಬ ಅಪರಿಚಿತನು ಪ್ರವೇಶಿಸಿದಾಗ ಚಪ್ಪಾಳೆ ಹೊಡೆಯತಕ್ಕದ್ದಲ್ಲ.

(11) ಮಾತನಾಡುತ್ತಿರುವಾಗ, ಯಾವುದೇ ಉಪ್ಪರಿಗೆಯ ಮೊಗಸಾಲೆಯಲ್ಲಿರುವ (ಗ್ಯಾಲರಿಯಲ್ಲಿ) ಅಪರಿಚಿತರನ್ನು ಕುರಿತು ಮಾತನಾಡತಕ್ಕದ್ದಲ್ಲ.

(12) ಸದನದಲ್ಲಿ ಘೋಷಣೆಯನ್ನು ಕೂಗತಕ್ಕದ್ದಲ್ಲ;

(13) ಪೀಠಕ್ಕೆ ಬೆನ್ನು ತೋರಿಸುವಂತೆ ಕುಳಿತುಕೊಳ್ಳತಕ್ಕದ್ದಲ್ಲ ಅಥವಾ ನಿಲ್ಲತಕ್ಕದ್ದಲ್ಲ.

(14) ಸದನದಲ್ಲಿ ಪೀಠದ ಬಳಿ ಖುದ್ದಾಗಿ ಹೋಗತಕ್ಕದ್ದಲ್ಲ ಅವಶ್ಯಕತೆಯುಂಟಾದರೆ ಅವರು ವಿಧಾನ ಮಂಡಲದ ಮುಂದೆ ಅಧಿಕಾರಿಗಳಿಗೆ ಚೀಟಿ ನೀಡಬಹುದು.

(15) ಸದನದಲ್ಲಿ ಬ್ಯಾಡ್ಜುಗಳು ಅಥವಾ ಯಾವುದೇ ವಸ್ತುವನ್ನು ಧರಿಸತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ.

(16) ಸದನದಲ್ಲಿ ಶಸ್ತ್ರಗಳನ್ನು ತರತಕ್ಕದ್ದಲ್ಲ ಅಥವಾ ಪ್ರದರ್ಶಿಸತಕ್ಕದ್ದಲ್ಲ.

(17) ಸದನದಲ್ಲಿ ಬಾವುಟಗಳು, ಲಾಂಛನಗಳು ಅಥವಾ ಯಾವುದೇ ನಿಶಾನೆಗಳನ್ನು ಪ್ರದರ್ಶಿಸತಕ್ಕದ್ದಲ್ಲ.

(18) ತನ್ನ ಭಾಷಣವಾದ ತರುವಾಯ, ಕೂಡಲೇ ಸದನವನ್ನು ಬಿಟ್ಟು ಹೋಗತಕ್ಕದ್ದಲ್ಲ.

(19) ಸದನದ ವ್ಯವಹಾರಗಳಿಗೆ ಸಂಬಂಧಪಡದ ಯಾವುದೇ ಬರವಣಿಗೆ, ಪ್ರಶ್ನಾವಳಿ, ಕರಪತ್ರಗಳು ಪತ್ರಿಕಾ ಹೇಳಿಕೆಗಳು, ಕಾಗದದ ಹಾಳೆಗಳು, ಮೊದಲಾದುವನ್ನು ಸದನದ ಆವರಣದೊಳಗೆ ಹಂಚತಕ್ಕದ್ದಲ್ಲ.

(20) ಸದನದಲ್ಲಿ ಡೆಸ್ಕ್ ಮೇಲೆ ತನ್ನ ಟೋಪಿಯನ್ನು ಇಡತಕ್ಕದ್ದಲ್ಲ, ಕಡತಗಳನ್ನು ಇಡಲು ಅಥವಾ ಬರೆಯುವ ಉದ್ದೇಶಕ್ಕಾಗಿ ರಟ್ಟನ್ನು ತರತಕ್ಕದ್ದಲ್ಲ, ಧೂಮಪಾನ ಮಾಡತಕ್ಕದ್ದಲ್ಲ ಅಥವಾ ಕೋಟನ್ನು ಕೈನಲ್ಲಿ ಹಿಡಿದು ಸದನವನ್ನು ಪ್ರವೇಶಿಸಿತಕ್ಕದ್ದಲ್ಲ.

(21) ಆರೋಗ್ಯದ ಕಾರಣಗಳ ಮೇಲೆ ವಿಧಾನ ಸಭ್ಯಾಧ್ಯಕ್ಷರ ಅನುಮತಿ ಪಡೆಯದೆ ಊರುಗೋಲನ್ನು ತರತಕ್ಕದ್ದಲ್ಲ.

(22) ಸದನದಲ್ಲಿ ಪ್ರತಿಭಟನೆ ಸೂಚಿಸಿ ಕಾಗದ ಪತ್ರಗಳನ್ನು ಹರಿದುಹಾಕತಕ್ಕದ್ದಲ್ಲ;

(23) ಸದನದಲ್ಲಿ ಕ್ಯಾಸೆಟ್ ಅಥವಾ ಟೇಪ್ ರೆಕಾರ್ಡರ್‌ಗಳನ್ನು ತರತಕ್ಕದ್ದಲ್ಲ ಮತ್ತು ಹಾಕತಕ್ಕುದಲ್ಲ

ಮತ್ತು

(24) ಸದನಕ್ಕೆ ಜೋರಾಗಿ ಕೇಳಿಸುವಂತೆ ಮೊಗಸಾಲೆಯಲ್ಲಿ ಮಾತನಾಡತಕ್ಕುದಲ್ಲ ಅಥವಾ ನಗತಕ್ಕದಲ್ಲ.

**325. ಅಧ್ಯಕ್ಷರಿಂದ ಕರೆಬಂದಾಗ ಸದಸ್ಯರು ಮಾತನಾಡುವುದು:** ಒಬ್ಬ ಸದಸ್ಯನು ಮಾತನಾಡಲು ಎದ್ದುನಿಂತರೆ, ಅಧ್ಯಕ್ಷರು ಅವರ ಹೆಸರನ್ನು ಕರೆಯತಕ್ಕದ್ದು. ಒಬ್ಬರಿಗಿಂತ ಹೆಚ್ಚು ಸದಸ್ಯರು ಏಕಕಾಲದಲ್ಲಿ ಎದ್ದು ನಿಂತರೆ, ಅಧ್ಯಕ್ಷರು ಹೆಸರು ಕರೆದಿರುವ ಸದಸ್ಯರಿಗೆ ಮಾತನಾಡಲು ಹಕ್ಕಿರುವುದು.

**326. ಸದನವನ್ನು ಉದ್ದೇಶಿಸಿ ಮಾತನಾಡುವ ರೀತಿ :** ಸದನದಲ್ಲಿ ಯಾವುದೇ ವಿಷಯದ ಬಗ್ಗೆ ಒಬ್ಬ ಸದಸ್ಯನು ಯಾವುದೇ ಅಭಿಪ್ರಾಯವನ್ನು ವ್ಯಕ್ತಗೊಳಿಸಲಿಚ್ಛಿಸಿದರೆ, ತನ್ನ ಸ್ಥಳದಿಂದಲೇ ಎದ್ದುನಿಂತು ಅಧ್ಯಕ್ಷರನ್ನು ಸಂಬೋಧಿಸಿ ಮಾತನಾಡತಕ್ಕದ್ದು, ಪರಂತು, ಕಾಯಿಲೆ ಅಥವಾ ದುರ್ಬಲತೆಯಿಂದ ನಿಶ್ಯಕ್ತರಾಗಿರುವವರನ್ನು ಕುಳಿತುಕೊಂಡೆ ಮಾತನಾಡಲು ಅನುಮತಿಸಬಹುದು.

**327. ಮಾತನಾಡುವಾಗ ಪಾಲಿಸಬೇಕಾದ ನಿಯಮಗಳು :**

**ಸದಸ್ಯರು ಮಾತನಾಡುವಾಗ;–**

(1) ನ್ಯಾಯಾಲಯದಲ್ಲಿ ಇತ್ಯರ್ಥದಲ್ಲಿದ್ದು ತೀರ್ಪು ನೀಡಿರದ ಯಾವುದೇ ಸಂಗತಿಯನ್ನು ಕುರಿತು ಮಾತನಾಡತಕ್ಕದ್ದಲ್ಲ.

(2) ಸದಸ್ಯರೊಬ್ಬರ ಮೇಲೆ ವೈಯಕ್ತಿಕ ದೋಷಾರೋಪಣೆ ಮಾಡತಕ್ಕದ್ದಲ್ಲ.

(3) ಸಂಸತ್ತು ಅಥವಾ ಯಾವುದೇ ರಾಜ್ಯ ವಿಧಾನ ಮಂಡಲದ ವ್ಯವಹರಣೆಗಳು ಮತ್ತು ನಡವಳಿಕೆಗಳನ್ನು ಕುರಿತು ಹೀನಾಯವಾಗಿ ಮಾತನಾಡತಕ್ಕದ್ದಲ್ಲ.

(4) ಸದನದ ಯಾವುದೇ ತೀರ್ಮಾನವನ್ನು ಕುರಿತು ಅದನ್ನು ರದ್ದುಪಡಿಸಲು ಪ್ರಸ್ತಾವ ಮಂಡಿಸುವಾಗ ಹೊರತು ಇನ್ನಾವುದೇ ಆರೋಪಣೆ ಮಾಡತಕ್ಕದ್ದಲ್ಲ.

(5) ಸರಿಯಾದ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಚರ್ಚೆ ನಡೆಸಿದ್ದ ಹೊರತು ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳ ನಡವಳಿಕೆ ಕುರಿತು ಆರೋಪಿಸತಕ್ಕದ್ದಲ್ಲ.

**ವಿವರಣೆ:** ಉನ್ನತಾಧಿಕಾರದಲ್ಲಿರುವ ವ್ಯಕ್ತಿಗಳು ಎಂದರೆ ಭಾರತ ಸಂವಿಧಾನದ ಮೇರೆಗೆ ಯಾವ ನಡವಳಿಕೆಯನ್ನು ಸರಿಯಾದ ವಾಕ್ಯಗಳಲ್ಲಿ ರಚಿಸಿದ ಆಧಾರಸಹಿತ ಪ್ರಸ್ತಾವಗಳ ಮೇಲೆ ಮಾತ್ರವೇ ಚರ್ಚೆ ನಡೆಸಬಹುದೋ ಆ ವ್ಯಕ್ತಿಗಳು ಅಥವಾ ಯಾರ ನಡವಳಿಕೆಯನ್ನು ತಾವು ಒಪ್ಪುವಂತಹ ವಾಕ್ಯಗಳಲ್ಲಿ ರಚಿಸಲಾದ ಆಧಾರಸಹಿತ ಪ್ರಸ್ತಾವದ ಮೇಲೆ ಮಾತ್ರವೇ ಚರ್ಚಿಸತಕ್ಕದ್ದು ಎಂದು ಅಧ್ಯಕ್ಷರು ಅಭಿಪ್ರಾಯಪಡುತ್ತಾರೋ ಆ ವ್ಯಕ್ತಿಗಳು ;

(6) ಚರ್ಚೆಯ ಮೇಲೆ ಪ್ರಭಾವ ಬೀರುವುದಕ್ಕಾಗಿ ರಾಜ್ಯಪಾಲರ ಹೆಸರನ್ನು ಉಪಯೋಗಿಸತಕ್ಕದ್ದಲ್ಲ;

(7) ರಾಷ್ಟ್ರದ್ರೋಹ, ರಾಷ್ಟ್ರವಿರೋಧಿ ಅಥವಾ ಅಪಮಾನಕರವಾದ ಮಾತುಗಳನ್ನು ಆಡತಕ್ಕದ್ದಲ್ಲ.

(8) ಸದನದ ಕಾರ್ಯಕಲಾಪಗಳನ್ನು ಅಡ್ಡಿಪಡಿಸುವುದಕ್ಕಾಗಿ ತಮ್ಮ ವಾಕ್ ಸ್ವಾತಂತ್ರವನ್ನು ಬಳಸಬಾರದು.

(9) ವಿಧಾನ ಸಭಾಧ್ಯಕ್ಷರ ಪರ ಅಥವಾ ವಿಧಾನಮಂಡಲ ಕಾರ್ಯಾಲಯದ ಯಾವುದೇ ಉದ್ದೇಶವನ್ನು ಕುರಿತು ಆರೋಪಿಸತಕ್ಕದ್ದಲ್ಲ.

(10) ರಾಷ್ಟ್ರಾಧ್ಯಕ್ಷರು ಅಥವಾ ರಾಜ್ಯಪಾಲರ ಅಥವಾ ಯಾವುದೇ ನ್ಯಾಯಾಲಯದ ನಡವಳಿಯನ್ನು ಕುರಿತು ಆರೋಪಿಸತಕ್ಕದ್ದಲ್ಲ ಅಥವಾ ಚರ್ಚೆಯನ್ನು ಪರಿಣಾಮಕಾರಿಯಾಗಿ ಮಾಡುವ ಉದ್ದೇಶಕ್ಕಾಗಿ ರಾಜ್ಯಪಾಲರ ಅಥವಾ ರಾಷ್ಟ್ರಾಧ್ಯಕ್ಷರ ಹೆಸರನ್ನು ಬಳಸತಕ್ಕದ್ದಲ್ಲ ;

(11) ಯಾವುದೇ ಗ್ಯಾಲರಿಯಲ್ಲಿರುವ ಅಪರಿಚಿತರ ಬಗ್ಗೆ ಯಾವುದೇ ಉಲ್ಲೇಖ ಮಾಡತಕ್ಕದ್ದಲ್ಲ;

(12) ಸರ್ಕಾರಿ ಅಧಿಕಾರಿಗಳನ್ನು ಹೆಸರು ಹಿಡಿದು ಕರೆಯತಕ್ಕದ್ದಲ್ಲ; ಮತ್ತು

(13) ಪೀಠದ ಪೂರ್ವಾನುಮತಿಯ ಹೊರತು ಬರವಣಿಗೆಯಲ್ಲಿರುವ ಭಾಷಣವನ್ನು ಓದತಕ್ಕದ್ದಲ್ಲ;

**328. ಒಬ್ಬ ವ್ಯಕ್ತಿಯನ್ನು ಕುರಿತು ಆಪಾದನೆಯ ಬಗ್ಗೆ ಕೈಗೊಳ್ಳಬೇಕಾದ ಕಾರ್ಯವಿಧಾನ:** ಸದಸ್ಯರು ಅಧ್ಯಕ್ಷರಿಗೆ ಮತ್ತು ಸಂಬಂಧಪಟ್ಟ ಮಂತ್ರಿಗಳಿಗೆ, ಮಂತ್ರಿಗಳು ಉತ್ತರ ನೀಡುವ ಉದ್ದೇಶಕ್ಕಾಗಿ ತನಿಖೆ ನಡೆಸಲು ಸಾಧ್ಯವಾಗುವಂತೆ ಪೂರ್ವ ಮಾಹಿತಿಯನ್ನು ಕೊಟ್ಟಿದ್ದ ಹೊರತು, ಯಾವ ಸದಸ್ಯರು ಯಾವ ವ್ಯಕ್ತಿಯನ್ನು ಕುರಿತು ಅಪಮಾನಕರವಾದ ಅಥವಾ ಅಪರಾಧದ ಆಪಾದನೆ ಮಾಡುವ ಯಾವ ಆರೋಪವನ್ನು ಮಾಡತಕ್ಕುದಲ್ಲ, ಅಲ್ಲದೆ ಅಧ್ಯಕ್ಷರು ಅಂಥ ಆರೋಪವು ಸದನದ ಮರ್ಯಾದೆಗೆ ಕುಂದು ತರುವಂತಹದು ಅಥವಾ ಅದರಿಂದ ಯಾವುದೇ ಸಾರ್ವಜನಿಕ ಹಿತಾಸಕ್ತಿ ಸಾಧಿತವಾಗುವುದಿಲ್ಲ ಎಂದು ಅಭಿಪ್ರಾಯ ಪಡುವುದಾದರೆ, ಯಾವುದೇ ಸಂದರ್ಭದಲ್ಲಿ ಯಾರೇ ಸದಸ್ಯರು ಅಂಥ ಯಾವುದೇ ಆರೋಪ ಮಾಡುವುದನ್ನು ನಿಷೇಧಿಸಬಹುದು.

**329. ಪರಿಷತ್ತಿನಲ್ಲಿ ಮಾಡಲಾದ ಭಾಷಣಗಳನ್ನು ಉದ್ಧರಿಸುವುದಕ್ಕೆ ಪ್ರತಿಬಂಧ :** ಪರಿಷತ್ತಿನಲ್ಲಿ ಮಾಡಲಾದ ಯಾವುದೇ ಭಾಷಣವನ್ನು ಅದು ಒಂದು ಕಾರ್ಯನೀತಿಯ ಬಗ್ಗೆ ಸಚಿವರ ಸ್ಪಷ್ಟ ಹೇಳಿಕೆಯಾಗಿದ್ದ ಹೊರತು ಸದನದಲ್ಲಿ ಉದ್ಧರಿಸತಕ್ಕದ್ದಲ್ಲ.

ಆದರೂ, ಅಧ್ಯಕ್ಷರು ತಮಗೆ ಮುಂಚಿತವಾಗಿ ಸಲ್ಲಿಸಿದ ಕೋರಿಕೆಯ ಮೇಲೆ ಯಾರೇ ಸದಸ್ಯರಿಗೆ ಪರಿಷತ್ತಿನಲ್ಲಿನ ಭಾಷಣಗಳನ್ನು ಉದ್ಧರಿಸಲು ಅಥವಾ ಅಲ್ಲಿನ ಕಾರ್ಯವಿಧಾನವನ್ನು ಕುರಿತು ಉಲ್ಲೇಖಿಸಲು, ಹಾಗೆ ಮಾಡುವುದು ಆ ಸದಸ್ಯರು ಹಕ್ಕು ಬಾಧ್ಯತೆಯ ಅಥವಾ ಕಾರ್ಯವಿಧಾನದ ಅಂಶವೊಂದನ್ನು ವಿಶದೀಕರಿಸಲು ಅವಶ್ಯವೆಂದು ಅಧ್ಯಕ್ಷರು ಯೋಚಿಸಿದಲ್ಲಿ, ಅನುಮತಿ ನೀಡಬಹುದು.

**330. ಪ್ರಶ್ನೆಗಳನ್ನು ಅಧ್ಯಕ್ಷರ ಮುಖಾಂತರವಾಗಿ ಕೇಳತಕ್ಕದ್ದು:** ಚರ್ಚೆ ನಡೆಯುತ್ತಿರುವಾಗ ವಿವರಣೆ ಉದ್ದೇಶಗಳಿಗಾಗಿ ಅಥವಾ ಇನ್ನಾವುದೇ ಸಾಕಷ್ಟು ಕಾರಣಗಳಿಗಾಗಿ ಸದನದಲ್ಲಿ ಆಗ ಪರ್ಯಾಲೋಚನೆಯಲ್ಲಿರುವ ಯಾವುದೇ ವಿಷಯದ ಸಂಬಂಧದಲ್ಲಿ ಯಾವುದೇ ಸದಸ್ಯರು ಇನ್ನೊಬ್ಬ ಸದಸ್ಯರಿಗೆ ಪ್ರಶ್ನೆಯನ್ನು ಕೇಳುವ ಅಗತ್ಯವುಂಟಾದರೆ, ಅವರು ತಮ್ಮ ಪ್ರಶ್ನೆಯನ್ನು ಅಧ್ಯಕ್ಷರ ಮೂಲಕ

ಕೇಳತಕ್ಕದ್ದು.

**331. ಅಸಂಬಂಧಿತ ಅಥವಾ ಪುನರುಕ್ತಿ :** ಅಸಂಬಂಧ ವಿಷಯಗಳನ್ನು ಪ್ರಸ್ತಾಪಿಸುವ ಅಥವಾ ತನ್ನ ವಾದವನ್ನು ಅಥವಾ ಸದಸ್ಯರ ವಾದಗಳನ್ನು ಬೇಸರ ಮಾಡುವಷ್ಟು ಪುನಃ ಪುನಃ ಹೇಳುತ್ತಲೇ ಇರುವ ಸದಸ್ಯರೊಬ್ಬರ ವರ್ತನೆಯನ್ನು ಸದನದ ಗಮನಕ್ಕೆ ತಂದನಂತರ ಅಧ್ಯಕ್ಷರು ಆ ಸದಸ್ಯರನ್ನು ತಮ್ಮ ಭಾಷಣವನ್ನು ನಿಲ್ಲಿಸಬೇಕೆಂದು ನಿರ್ದೇಶಿಸಬಹುದು.

**332. ವೈಯಕ್ತಿಕ ವಿವರಣೆಗಳು:** ಸದಸ್ಯರು ಅಧ್ಯಕ್ಷರ ಅನುಮತಿ ಪಡೆದು ಒಂದು ವಿಷಯವು ಸದನದ ಮುಂದೆ ಚರ್ಚೆಗೆ ಬಂದಿರದಿದ್ದರೂ ಆ ಬಗ್ಗೆ ತಮ್ಮ ವೈಯಕ್ತಿಕ ವಿವರಣೆಯನ್ನು ನೀಡಬಹುದು, ಆದರೆ ಹಾಗೆ ಮಾಡುವಾಗ ಯಾವುದೇ ಚರ್ಚಾಸ್ಪದ ಅಂಶವನ್ನು ತರತಕ್ಕದ್ದಲ್ಲ ಮತ್ತು ಆ ಬಗ್ಗೆ ಯಾವ ಚರ್ಚೆಗೂ ಅವಕಾಶ ನೀಡತಕ್ಕದ್ದಲ್ಲ.

**333. ಭಾಷಣಗಳ ಅನುಕ್ರಮ ಮತ್ತು ಉತ್ತರ ನೀಡಲು ಹಕ್ಕು:** (1) ಪ್ರಸ್ತಾವವನ್ನು ಸಭೆಯಲ್ಲಿ ಮಂಡಿಸಿದ ಸದಸ್ಯರು ಮಾತನಾಡಿದ ನಂತರ ಇತರ ಸದಸ್ಯರು ಅಧ್ಯಕ್ಷರು ಅವರ ಹೆಸರನ್ನು ಅನುಕ್ರಮದಲ್ಲಿಯೇ ಆ ಪ್ರಸ್ತಾವವನ್ನು ಕುರಿತು ಮಾತನಾಡತಕ್ಕದ್ದು. ಯಾರೇ ಸದಸ್ಯರು ಅಧ್ಯಕ್ಷರು ಕರೆದಾಗ ಮಾತನಾಡದಿದ್ದಲ್ಲಿ ಚರ್ಚೆ ಮುಂದುವರೆದಾಗ, ಅಧ್ಯಕ್ಷರ ಅನುಮತಿಯ ಮೇರೆಗೆ ಹೊರತು ಮಾತನಾಡಲು ಹಕ್ಕುಳ್ಳವರಾಗತಕ್ಕದ್ದಲ್ಲ.

(2) ಉತ್ತರ ಹೇಳುವ ತಮ್ಮ ಹಕ್ಕನ್ನು ಚಲಾಯಿಸುವಾಗ, ಹೊರತು ಅಥವಾ ಈ ನಿಯಮಗಳ ಮೂಲಕ ಅನ್ಯಥಾ ಉಪಬಂಧವಿರುವಂತೆ ಹೊರತು ಅಧ್ಯಕ್ಷರ ಅನುಮತಿ ಪಡೆದಲ್ಲದೆ ಯಾವ ಸದಸ್ಯರೂ ಒಂದು ಪ್ರಸ್ತಾವದ ಮೇಲೆ ಒಂದು ಸಲಕ್ಕಿಂತ ಹೆಚ್ಚು ಬಾರಿ ಮಾತನಾಡತಕ್ಕದ್ದಲ್ಲ.

(3) ಒಂದು ಪ್ರಸ್ತಾವವನ್ನು ಮಂಡಿಸಿದ ಸದಸ್ಯರು ಉತ್ತರ ಹೇಳುವ ಸಲುವಾಗಿ ಮತ್ತೊಮ್ಮೆ ಮಾತನಾಡಬಹುದು ಮತ್ತು ಪ್ರಸ್ತಾವವನ್ನು ಖಾಸಗಿ ಸದಸ್ಯರೊಬ್ಬರು ಮಂಡಿಸಿದ್ದರೆ, ಸಂಬಂಧಪಟ್ಟ ಸಚಿವರು ಅಧ್ಯಕ್ಷರ ಅನುಮತಿ ಪಡೆದು (ಅವರು ಚರ್ಚೆಯಲ್ಲಿ ಈ ಹಿಂದೆ ಮಾತನಾಡಿರಲಿ, ಇಲ್ಲದಿರಲಿ) ಪ್ರಸ್ತಾವ ಮಂಡಿಸಿದ ಸದಸ್ಯರು ಉತ್ತರ ನೀಡಿದನಂತರ ಮಾತನಾಡಬಹುದು.

ಆದರೂ, ಈ ಉಪನಿಯಮದಲ್ಲಿರುವುದು ಯಾವುದೂ ಒಂದು ವಿಧೇಯಕಕ್ಕೆ ತಿದ್ದುಪಡಿಯನ್ನು ಅಥವಾ ಒಂದು ನಿರ್ಣಯವನ್ನು ಪ್ರಸ್ತಾವಿಸಿ ಮಂಡಿಸುವ ಯಾವ ವ್ಯಕ್ತಿಗೂ ಅಧ್ಯಕ್ಷರ ಅನುಮತಿ ಪಡೆದಲ್ಲದೆ ಉತ್ತರ ನೀಡಲು ಯಾವುದೇ ಹಕ್ಕನ್ನು ನೀಡುತ್ತದೆ ಎಂದು ಭಾವಿಸತಕ್ಕದ್ದಲ್ಲ.

**334. ಪ್ರಸ್ತಾವ ಮಂಡಿಸಿದವರ ಉತ್ತರದೊಂದಿಗೆ ಚರ್ಚೆಯ ಸಮಾಪ್ತಿ :** 333ನೇ ನಿಯಮದ (3ನೇ) ಉಪನಿಯಮದ ಉಪಬಂಧಗಳಿಗೆ ಒಳಪಟ್ಟು ಮೂಲ ಪ್ರಸ್ತಾವವನ್ನು ಮಂಡಿಸಿದ ವ್ಯಕ್ತಿಯ ಉತ್ತರದೊಂದಿಗೆ ಎಲ್ಲಾ ಸಂದರ್ಭಗಳಲ್ಲಿಯೂ ಚರ್ಚೆಯು ಮಕ್ತಾಯವಾಗತಕ್ಕದ್ದು.

**335. ಭಾಷಣಗಳ ಕಾಲಾವಧಿ :** ಅಧ್ಯಕ್ಷರು ನಿಯಮಗಳಲ್ಲಿ ನಿರ್ದಿಷ್ಟ ಉಪಬಂಧಗಳನ್ನು ಕಲ್ಪಿಸಿದರೆ ಸಂದರ್ಭಗಳಲ್ಲಿ ಮತ್ತು ಸದನದ ಕಾರ್ಯಕಲಾಪಗಳ ಪರಿಸ್ಥಿತಿಯನ್ನು ಮತ್ತು ಪ್ರಸ್ತಾವದ ಸ್ವರೂಪವನ್ನು ಗಮನದಲ್ಲಿರಿಸಿಕೊಂಡು ಪ್ರಸ್ತಾವವನ್ನು ಕುರಿತು ಭಾಷಣಗಳಿಗೆ ಕಾಲಮಿತಿಯನ್ನು ನಿಗದಿಪಡಿಸಬಹುದು.

**336. ಅಧ್ಯಕ್ಷರ ಭಾಷಣ :** ಅಧ್ಯಕ್ಷರು ಯಾವುದೇ ಸಮಯದಲ್ಲಿ ತಾವಾಗಿಯೇ ಅಥವಾ ಸದಸ್ಯರು ಯಾವುದೇ ಒಂದು ಅಂಶವನ್ನು ಎತ್ತಿದಾಗ ಅಥವಾ ಸದಸ್ಯರೊಬ್ಬರು ಮಾಡಿದ ವಿನಂತಿಯ ಮೇಲೆ, ಸದನದ ಮುಂದೆ ಪರ್ಯಾಲೋಚನೆಯಲ್ಲಿರುವ ವಿಷಯದ ಮೇಲೆ ಸದಸ್ಯರ ಚರ್ಚೆಗೆ ನೆರವು ನೀಡುವ ಉದ್ದೇಶದಿಂದ ಸಭೆಯನ್ನು ಉದ್ದೇಶಿಸಿ ಮಾತನಾಡಬಹುದು ಮತ್ತು ಹಾಗೆ ಅವರು ತಿಳಿಸಿದ ತಮ್ಮ ಅಭಿಪ್ರಾಯಗಳನ್ನು ಒಂದು ತೀರ್ಪು ಎಂದು ಪರಿಗಣಿಸತಕ್ಕದ್ದಲ್ಲ.

**337. ಅಧ್ಯಕ್ಷರು ಎದ್ದುನಿಂತಾಗ ಅನುಸರಿಸಬೇಕಾದ ಕಾರ್ಯವಿಧಾನ:** (1) ಅಧ್ಯಕ್ಷರು ಮಾತನಾಡಲು ಎದ್ದುನಿಂತುಕೊಂಡಾಗಲೆಲ್ಲ ಸದಸ್ಯರು ಮೌನದಿಂದಿದ್ದು ಅವರ ಮಾತುಗಳನ್ನು ಆಲಿಸಬೇಕು ಮತ್ತು ಆ ಸಮಯದಲ್ಲಿ ಮಾತನಾಡುತ್ತಿದ್ದ ಅಥವಾ ಮಾತನಾಡಲು ಆರಂಭಿಸಲಿದ್ದ ಸದಸ್ಯರು ಕೂಡಲೇ ತಮ್ಮ ಸ್ಥಾನದಲ್ಲಿ ಕುಳಿತುಕೊಳ್ಳತಕ್ಕದ್ದು.

(2) ಅಧ್ಯಕ್ಷರು ಸಭೆಯನ್ನುದ್ದೇಶಿಸಿ ಮಾತನಾಡುತ್ತಿರುವಾಗ ಯಾವ ಸದಸ್ಯರು ತಮ್ಮ ಸ್ಥಾನದಿಂದ ಎದ್ದುಹೋಗತಕ್ಕದ್ದಲ್ಲ.

**338. ಮುಕ್ತಾಯ:** (1) ಪ್ರಸ್ತಾವವನ್ನು ಮಂಡಿಸಿದ ಅನಂತರ ಯಾವುದೇ ಸಮಯದಲ್ಲಿ ಯಾರೇ ಸದಸ್ಯರು "ಈಗ ಸಭೆಯ ಅಭಿಮತಕ್ಕೆ ಹಾಕಬೇಕು". ಎಂದು ಪ್ರಸ್ತಾವವನ್ನು ಮಂಡಿಸಬಹುದು ಮತ್ತು ಈ ಪ್ರಸ್ತಾವವು ಈ ನಿಯಮಾವಳಿಯ ದುರುಪಯೋಗ ಅಥವಾ ಸಮಂಜಸ ಚರ್ಚೆಗೆ ಇರುವ ಹಕ್ಕನ್ನು ಕುಂಠಿತಗೊಳಿಸುತ್ತದೆ ಎಂದು ಅಧ್ಯಕ್ಷರಿಗೆ ತೋರಿದ ಹೊರತು ಅಧ್ಯಕ್ಷರು "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವವನ್ನು ಮಂಡಿಸತಕ್ಕದ್ದು.

(2) "ಈಗ ಪ್ರಶ್ನೆಯನ್ನು ಕೇಳಬಹುದು" ಎಂಬ ಪ್ರಸ್ತಾವಕ್ಕೆ ಸಭೆಯ ಅನುಮೋದನೆ ದೊರೆತಲ್ಲಿ ಅದಕ್ಕೆ ಅನುಷಂಗಿಕವಾದ ಪ್ರಶ್ನೆಯನ್ನು ಅಥವಾ ಪ್ರಶ್ನೆಗಳನ್ನು ಹೆಚ್ಚಿನ ಚರ್ಚೆ ಇಲ್ಲದೆ ಕೂಡಲೇ ಕೇಳತಕ್ಕದ್ದು. ಆದಾಗ್ಯೂ ಅಧ್ಯಕ್ಷರು ಯಾರೇ ಸದಸ್ಯರಿಗೆ ಈ ನಿಯಮದ ಮೇರೆಗೆ ಅವರಿಗಿರುವ ಉತ್ತರ ನೀಡುವ ಹಕ್ಕನ್ನು ಚಲಾಯಿಸಲು ಅವಕಾಶ ನೀಡಬಹುದು.

**339. ಚರ್ಚೆಯ ಪರಿಮಿತಿ :** (1) ಒಂದು ವಿಧೇಯಕಕ್ಕೆ ಸಂಬಂಧಿಸಿದ ಯಾವುದೇ ಪ್ರಸ್ತಾವದ ಮೇಲಿನ ಚರ್ಚೆಯು ಅಥವಾ ಯಾವುದೇ ಇತರ ಪ್ರಸ್ತಾವದ ಮೇಲಿನ ಚರ್ಚೆಯೂ ವೇಳೆ ಮೀರಿ ಮುಂದುವರಿಯುತ್ತಾ ಹೋದಾಗಲೆಲ್ಲ ಅಧ್ಯಕ್ಷರು ಸಭೆಯ ಒಟ್ಟು ಅಭಿಪ್ರಾಯವನ್ನು ತಿಳಿದುಕೊಂಡು

ಸಂದರ್ಭಾನುಸಾರ ವಿಧೇಯಕದ ಯಾವುದೇ ಹಂತ ಅಥವಾ ಎಲ್ಲಾ ಹಂತಗಳ ಮೇಲಿನ ಚರ್ಚೆಗಳನ್ನು ಅಥವಾ ಆ ಪ್ರಸ್ತಾವದ ಮೇಲಿನ ಚರ್ಚೆಗಳನ್ನು ಮುಕ್ತಾಯಗೊಳಿಸಲು ಕಾಲ ಪರಿಮಿತಿಯನ್ನು ನಿಗದಿಪಡಿಸತಕ್ಕದ್ದು.

(2) ಯಾವುದೇ ವಿಧೇಯಕ ಅಥವಾ ಪ್ರಸ್ತಾವದ ಒಂದು ನಿರ್ದಿಷ್ಟ ಹಂತವನ್ನು ಪೂರೈಸುವುದಕ್ಕಾಗಿ ಗೊತ್ತುಪಡಿಸಲಾದ ಸಮಯಮಿತಿಗೆ ಅನುಸಾರವಾಗಿ, ಗೊತ್ತಾದ ವೇಳೆಯಲ್ಲಿ ಅಧ್ಯಕ್ಷರು, ಚರ್ಚೆ ಅದಕ್ಕಿಂತ ಮುಂಚಿತವಾಗಿಯೇ ಮುಕ್ತಾಯವಾದ ಹೊರತು ವಿಧೇಯಕ ಅಥವಾ ಪ್ರಸ್ತಾವದ ಆ ಹಂತದ ಸಂಬಂಧದಲ್ಲಿ ಉಳಿದಿರುವ ಎಲ್ಲ ಪ್ರಮುಖ ಅಂಶಗಳನ್ನು ಇತ್ಯರ್ಥಗೊಳಿಸಲು ಅಗತ್ಯವಾದ ಪ್ರತಿಯೊಂದು ಪ್ರಶ್ನೆಯನ್ನು ಕೂಡಲೇ ಹಾಕತಕ್ಕದ್ದು.

(3) ಇತ್ಯರ್ಥಕ್ಕಾಗಿ ಪ್ರಶ್ನೆ

**340. ಸದನದ ನಿರ್ಣಯವನ್ನು ಪಡೆಯಲು ಅನುಸರಿಸಬೇಕಾದ ಕಾರ್ಯ ವಿಧಾನ:** ಸದನದ ನಿರ್ಣಯವನ್ನು ಪಡೆಯಬೇಕಾಗಿರುವ ಯಾವುದೇ ವಿಷಯವು ಯಾವೊಬ್ಬ ಸದಸ್ಯರು ಮಾಡಿದ ಪ್ರಸ್ತಾವದ ಆಧಾರದ ಮೇಲೆ ಅಧ್ಯಕ್ಷರು ಕೇಳುವ ಪ್ರಶ್ನೆಯ ಮೂಲಕ ನಿರ್ಧರಿಸತಕ್ಕದ್ದು.

**341. ಪ್ರಸ್ತಾವ ಮತ್ತು ಇತ್ಯರ್ಥಕ್ಕಾಗಿ ಪ್ರಶ್ನೆಯನ್ನು ಹಾಕುವುದು:** ಒಂದು ಪ್ರಸ್ತಾವವನ್ನು ಸೂಚಿಸಿದಾಗ ಅಧ್ಯಕ್ಷರು ಅದರ ಪರವಾಗಿ ಮತ್ತು ಅದಕ್ಕೆ ವಿರೋಧವಾಗಿ, ಸದಸ್ಯರ ಮತಗಳನ್ನು ಕೇಳುವ ಪ್ರಶ್ನೆಯನ್ನು ಹಾಕಿ ಅದಕ್ಕೆ ಅದನ್ನು ಸಭೆಯ ತೀರ್ಮಾನಕ್ಕೆ ಬಿಡತಕ್ಕದ್ದು. ಒಂದು ಪ್ರಸ್ತಾವದಲ್ಲಿ ಎರಡು ಅಥವಾ ಅದಕ್ಕಿಂತ ಹೆಚ್ಚು ಸಂಖ್ಯೆಯ ಪ್ರತ್ಯೇಕವಾದ ವಿಚಾರಗಳು ಅಡಕವಾಗಿದ್ದ ಪಕ್ಷದಲ್ಲಿ, ಅವುಗಳಲ್ಲಿ ಒಂದೊಂದರ ವಿಷಯವಾಗಿಯೂ ಸದನದ ಅಭಿಪ್ರಾಯವನ್ನು ನಿರ್ಧರಿಸಲು ಅಧ್ಯಕ್ಷರು ಪ್ರತ್ಯೇಕವಾದ ಪ್ರಶ್ನೆಯನ್ನು ಹಾಕಬಹುದು.

**342. ಮತವನ್ನು ಗ್ರಹಿಸಿದ ಮೇಲೆ ಸದಸ್ಯರು ಆ ವಿಷಯದ ಮೇಲೆ ಮಾತನಾಡಕೂಡದು:** ಅಧ್ಯಕ್ಷರು ಒಂದು ವಿಷಯದ ಮೇಲೆ ಅದರ ಪರವಾಗಿರುವ ಮತ್ತು ಅದಕ್ಕೆ ವಿರೋಧವಾಗಿರುವ ಸದಸ್ಯರ "ಹೌದು ಅಥವಾ ಅಲ್ಲ" ಎಂಬ ಅಭಿಮತವನ್ನು ಪಡೆದ ತರುವಾಯ ಆ ವಿಷಯದ ಮೇಲೆ ಯಾವ ಸದಸ್ಯರೂ ಪುನಃ ಮಾತನಾಡತಕ್ಕದ್ದಲ್ಲ.

**343. ಪ್ರಸ್ತಾಪಿಸಲ್ಪಟ್ಟ ಕಾಗದ ಪತ್ರಗಳನ್ನು ಸಭೆಯ ಮುಂದೆ ಇಡುವುದು :** ಒಬ್ಬ ಸಚಿವರು ಸದನದ ಮುಂದೆ ಹಾಜರುಪಡಿಸಿದ ಒಂದು ಕಾಗದವನ್ನು ಅಥವಾ ರಾಜ್ಯದ ಇತರ ಪತ್ರವನ್ನು ಸದನದಲ್ಲಿ ಪ್ರಸ್ತಾಪಿಸಿದ ಪಕ್ಷದಲ್ಲಿ ಅವರು ಸಂಬಂಧಪಟ್ಟ ಆ ಪತ್ರವನ್ನು ಸಭೆಯ ಮುಂದೆ ಇಡತಕ್ಕದ್ದು.

ಆದರೆ, ಈ ನಿಯಮವು ಕಾಗದಪತ್ರಗಳನ್ನು ಹಾಜರುಪಡಿಸುವುದರಿಂದ ಸಾರ್ವಜನಿಕ ಹಿತಸಾಧನೆಗೆ ಅಸಂಗತವಾದ ಸ್ವಭಾವದವುಗಳಾಗಿರುತ್ತವೆಂಬುದಾಗಿ ಸಚಿವರಿಂದ ತಿಳಿಸಲಾಗುವಂಥ

ಕಾಗದ ಪತ್ರಗಳಿಗೆ ಅನ್ವಯಿಸತಕ್ಕದ್ದಲ್ಲ.

ಅಷ್ಟೇ ಅಲ್ಲದೆ, ಅಂಥ, ಕಾಗದದ ಅಥವಾ ರಾಜ್ಯಪತ್ರದ ಸಾರಾಂಶ ಅಥವಾ ಮುಖ್ಯಾಂಶಗಳನ್ನು ಒಬ್ಬ ಸಚಿವರು ತಮ್ಮ ಸ್ವಂತ ಮಾತುಗಳಲ್ಲಿ ತಿಳಿಸಿದಾಗ ಸಂಬಂಧಪಟ್ಟ ಕಾಗದ ಪತ್ರವನ್ನು ಸಭೆಯ ಮುಂದಿಡುವುದು ಅವಶ್ಯಕವಾಗಿರತಕ್ಕದ್ದಲ್ಲ.

**344. ಸಭೆಯ ಮುಂದಿಟ್ಟ ಕಾಗದ ಪತ್ರಗಳ ಬಗೆಗಿನ ವ್ಯವಹಾರ :** 1) ಸಭೆಯ ಮುಂದಿಟ್ಟ ಒಂದು ಕಾಗದ ಅಥವಾ ದಸ್ತಾವೇಜನ್ನು ಅದನ್ನು ಮಂಡಿಸುವ ಸದಸ್ಯರಿಂದ ಕ್ರಮವಾಗಿ ಅಧಿಕೃತಗೊಳಿಸತಕ್ಕದ್ದು.

(2) ಸಭೆಯ ಮುಂದಿಟ್ಟ ಎಲ್ಲ ಕಾಗದಗಳೂ ಮತ್ತು ದಸ್ತಾವೇಜುಗಳೂ ಸಾರ್ವಜನಿಕವಾದುದೆಂದು ಭಾವಿಸತಕ್ಕದ್ದು.

**345. ಮಂತ್ರಿಗಳಿಂದ ಹೇಳಿಕೆ:** ವಿಧಾನ ಸಭಾಧ್ಯಕ್ಷರ ಅನುಮತಿ ಪಡೆದು ಸಾರ್ವಜನಿಕ ಮಹತ್ವದ ವಿಷಯದ ಮೇಲೆ ಹೇಳಿಕೆ ನೀಡಬಹುದು. ಅಂತಹ ಹೇಳಿಕೆಯ ಮೇಲೆ ಯಾವುದೇ ಚರ್ಚೆಗೆ ಅವಕಾಶವಿರತಕ್ಕದ್ದಲ್ಲ. ಆದರೆ, ರಾಜ್ಯಕ್ಕೆ ಸಂಬಂಧಿಸಿದಂತೆ ಹೆಚ್ಚಿನ ಮಾಹಿತಿ ಪಡೆಯುವ ಉದ್ದೇಶಕ್ಕಾಗಿ ಪ್ರಶ್ನೆಗಳನ್ನು ಕೇಳಲು ಸದಸ್ಯರಿಗೆ ಅನುಮತಿ ನೀಡಬಹುದು.

**346. ಮತಗಳ ಎಣಿಕೆ:** (1) ಒಂದು ಚರ್ಚೆಯು ಮುಕ್ತಾಯವಾದ ಮೇಲೆ ಅಧ್ಯಕ್ಷರು ಚರ್ಚೆಯ ವಿಷಯವನ್ನು ಸಭೆಯ ಮುಂದೆ ಮಂಡಿಸತಕ್ಕದ್ದು ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು, "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂದಾಗಿಯೂ ತಿಳಿಸಬೇಕು.

(2) ಅಧ್ಯಕ್ಷರು, ಅನಂತರ, ತೀರ್ಮಾನವು "ಹೌದು" ಎಂದು ಹೇಳುವವರಿಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎಂದು ಹೇಳುವವರಿಗೆ) ಅನುಕೂಲವಾಗಿದೆಯೆಂದು ನನಗೆ ತೋರುತ್ತದೆ ಎಂದು ತಿಳಿಯತಕ್ಕದ್ದು, ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸದಿದ್ದಲ್ಲಿ ಅವರ ತೀರ್ಮಾನವು "ಹೌದು" ಎನ್ನುವವರೆಗೆ (ಅಥವಾ ಆಯಾ ಸಂದರ್ಭಾನುಸಾರವಾಗಿ "ಇಲ್ಲ" ಎನ್ನುವವರೆಗೆ) ಅನುಕೂಲವಾಗಿದೆ ಎಂದು ಎರಡು ಸಲ ಹೇಳತಕ್ಕದ್ದು ಮತ್ತು ಸದನದ ಮುಂದೆ ತೀರ್ಮಾನಕ್ಕೆ ಬಂದಿರುವ ವಿಚಾರವನ್ನು ಅದಕ್ಕೆ ತಕ್ಕಂತೆ ತೀರ್ಮಾನಿಸತಕ್ಕದ್ದು.

(3) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪ್ರತಿಭಟಿಸಿದ್ದಲ್ಲಿ ಮತದ ಎಣಿಕೆ ಗಂಟೆಯನ್ನು ಎರಡು ನಿಮಿಷಗಳವರೆಗೆ ಬಾರಿಸುವಂತೆ ವ್ಯವಸ್ಥೆ ಮಾಡತಕ್ಕದ್ದು.

(4) ಆ ಎರಡು ನಿಮಿಷಗಳು ಮುಗಿದ ಮೇಲೆ ಬಾಗಿಲುಗಳನ್ನು ಮುಚ್ಚಿ ಬಿಡುವಂತೆ ಹೇಳತಕ್ಕದ್ದು ಮತ್ತು ಪ್ರಶ್ನೆಯನ್ನು ಎರಡನೆಯ ಸಲ ಹಾಕಬೇಕು. ಮತ್ತು ಪ್ರಸ್ತಾವಕ್ಕೆ ಒಪ್ಪಿಗೆಯುಳ್ಳವರು "ಹೌದು" ಎಂದು ಹೇಳಬೇಕೆಂಬುದಾಗಿಯೂ ಮತ್ತು ಅದಕ್ಕೆ ವಿರೋಧವಾಗಿರುವವರು "ಇಲ್ಲ" ಎಂದು ಹೇಳಬೇಕೆಂಬುದಾಗಿಯೂ ತಿಳಿಸತಕ್ಕದ್ದು.

(5) ಒಂದು ಪ್ರಶ್ನೆಯ ತೀರ್ಮಾನದ ಸಂಬಂಧದಲ್ಲಿ ಅಧ್ಯಕ್ಷರ ಅಭಿಪ್ರಾಯವನ್ನು ಪುನಃ ಪ್ರತಿಭಟಿಸಿದರೆ, ಅವರು ತಾವು ಯುಕ್ತವೆಂದು ಭಾವಿಸಿದರೆ "ಹೌದು" ಎನ್ನುವ ಅಭಿಪ್ರಾಯವುಳ್ಳ ಮತ್ತು "ಇಲ್ಲ" ಎನ್ನುವ ಅಭಿಪ್ರಾಯವುಳ್ಳ ಸದಸ್ಯರು ಕ್ರಮವಾಗಿ ತಮ್ಮ ತಮ್ಮ ಸ್ಥಳಗಳಲ್ಲಿ ಎದ್ದು ಸಭೆಯ ತೀರ್ಮಾನವನ್ನು ಪ್ರಕಟಿಸಬಹುದು. ಅಂಥ ಸಂದರ್ಭಗಳಲ್ಲಿ ಮತಗಳನ್ನು ಕೊಟ್ಟವರ ಹೆಸರುಗಳನ್ನು ದಾಖಲು ಮಾಡತಕ್ಕದ್ದಲ್ಲ.

(6) ಮೇಲಿನ (3)ನೆಯ ಉಪನಿಯಮದಲ್ಲಿ ವಿಧೇಯಕ ಮಾಡಿರುವಂಥ ಕಾರ್ಯ ವಿಧಾನವನ್ನು ಅಧ್ಯಕ್ಷರು ಅನುಸರಿಸದಿದ್ದಲ್ಲಿ, ಅವರು ತಾವು ತೀರ್ಮಾನಿಸಬಹುದಾದಂಥ ಇತರ ಯಾವುದೇ ವಿಧಾನದಲ್ಲಿ ವಿಷಯದ ಪರವಾಗಿಯೂ ಮತ್ತು ವಿಷಯಕ್ಕೆ ವಿರುದ್ಧವಾಗಿಯೂ ಎಷ್ಟು ಮಂದಿ ಮತವುಳ್ಳವರಾಗಿದ್ದಾರೆಂಬುದನ್ನು ತಿಳಿಯಬೇಕೆಂದು ಆದೇಶಿಸತಕ್ಕದ್ದು.

ಸದಸ್ಯರುಗಳನ್ನು ಸಭೆಯಿಂದ ಹೊರಕ್ಕೆ ಕಳುಹಿಸುವುದು ಮತ್ತು ಕೆಲಕಾಲ ಸಭೆಗೆ ಬರದಂತೆ ಆಜ್ಞೆ ಮಾಡುವುದು.

**347. ಸದಸ್ಯರು ಸಭೆಯಿಂದ ಹೊರಕ್ಕೆ ಹೋಗಬೇಕೆಂದು ಆದೇಶ ಮಾಡುವುದು:** ಅಧ್ಯಕ್ಷರು ಯಾವ ಸದಸ್ಯರ ನಡವಳಿಕೆಯು ತುಂಬಾ ಅಸಭ್ಯವಾಗಿದೆಯೆಂದು ಭಾವಿಸುತ್ತಾರೋ, ಅಂಥ ಸದಸ್ಯರಿಗೆ ಸದನದಿಂದ ಕೂಡಲೇ ಹೊರಗೆ ಹೋಗುವಂತೆ ಆದೇಶಿಸಬಹುದು ಮತ್ತು ಆ ರೀತಿ ಹೋಗಬೇಕೆಂದು ಆದೇಶ ಮಾಡಿದ ಯಾರೇ ಸದಸ್ಯರು ಕೂಡಲೇ ಸಭೆಯಿಂದ ಹೊರಗೆ ಹೋಗಬೇಕು ಮತ್ತು ಆ ದಿನದ ಉಪವೇಶನದ ಉಳಿದ ಸಮಯದಲ್ಲಿ ಅವರು ಗೈರುಹಾಜರಾಗತಕ್ಕದ್ದು.

**348. ಸದಸ್ಯರನ್ನು ಕೆಲಕಾಲ ಸಭೆಗೆ ಬರದಂತೆ ತಡೆ ಹಿಡಿಯುವುದು :** (1) ಅಧ್ಯಕ್ಷರು ತಾವು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ ಯಾವ ಸದಸ್ಯರು ಅಧ್ಯಕ್ಷರ ಅಧಿಕಾರದ ವಿಷಯದಲ್ಲಿ ಲಕ್ಷ್ಯವಿಲ್ಲದೆ ತಿರಸ್ಕಾರ ಮಾಡುತ್ತಾರೋ ಅಥವಾ ಸದನದ ಕಾರ್ಯಕಲಾಪಗಳಿಗೆ ಒಂದೇ ಸಮನಾಗಿ ಮತ್ತು ಉದ್ದೇಶಪೂರ್ವಕವಾಗಿ ಅಡಚಣೆಯನ್ನುಂಟು ಮಾಡುವುದರ ಮೂಲಕ ಸದನದ ನಿಯಮಗಳಿಗೆ ವಿರೋಧವಾಗಿ ವರ್ತಿಸುತ್ತಾರೋ ಆ ಸದಸ್ಯರ ಹೆಸರೆತ್ತಿ ಸದನಕ್ಕೆ ತಿಳಿಸಬಹುದು.

(2) ಆ ರೀತಿ, ಅಧ್ಯಕ್ಷರು ಒಬ್ಬ ಸದಸ್ಯರ ಹೆಸರೆತ್ತಿ ತಿಳಿಸಿದ ಪಕ್ಷದಲ್ಲಿ ಆ ಕೂಡಲೇ ಅವರು ಹೆಸರೆತ್ತಿ ತಿಳಿಸಿದ ಸದಸ್ಯರು ಅಧಿವೇಶನದ ಉಳಿದ ಕಾಲದಲ್ಲಿ (ಅಥವಾ ಅಧ್ಯಕ್ಷರು ನಿರ್ದಿಷ್ಟಗೊಳಿಸಬಹುದಾದಂಥ ಅಧಿವೇಶನದ ಒಂದು ಭಾಗದವರೆಗೆ) ಸದನಕ್ಕೆ ಬರಬಾರದಂತೆ ಪ್ರಸ್ತಾವವನ್ನು ಮಂಡಿಸಬೇಕು.

ಆದರೆ, ಸದನವು ಯಾವ ಕಾಲದಲ್ಲಾದರೂ, ಒಂದು ಪ್ರಸ್ತಾವವನ್ನು ಸೂಚಿಸಿದ ಮೇಲೆ ಅಂಥ ನಿಷೇಧವನ್ನು ಮುಕ್ತಾಯಗೊಳಿಸಬೇಕೆಂದು ನಿರ್ಣಯ ಮಾಡಬಹುದು.

(3) ಈ ನಿಯಮದ ಮೇರೆಗೆ ಸದನಕ್ಕೆ ಬರದಂತೆ ನಿಷೇಧಿಸಲ್ಪಟ್ಟ ಸದಸ್ಯರು, ಆ ಕೂಡಲೇ ಸದನದ ಆವರಣವನ್ನು ಬಿಟ್ಟು ಹೊರಟುಹೋಗತಕ್ಕದ್ದು.

**349. ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದಕ್ಕೆ ಅಥವಾ ಉಪವೇಶನವು ಕೆಲಕಾಲ ನಡೆಯದಂತೆ ಆದೇಶ ಮಾಡುವುದಕ್ಕೆ ಅಧ್ಯಕ್ಷರ ಅಧಿಕಾರ:** ಸದನದಲ್ಲಿ ಭಾರಿ ಗೊಂದಲವಿದ್ದ ಪಕ್ಷದಲ್ಲಿ ಅಧ್ಯಕ್ಷರು ಸದನವು ಕೆಲಕಾಲ ನಡೆಯದಂತೆ ಮುಂದಕ್ಕೆ ಹಾಕುವುದು ಅಥವಾ ಉಪವೇಶನವು ಕೊಂಚ ಕಾಲ ನಡೆಯದಂತೆ ತಡೆಹಿಡಿಯುವುದು ಅವಶ್ಯವೆಂದು ಭಾವಿಸಿದ ಪಕ್ಷದಲ್ಲಿ, ಆ ರೀತಿ ಸದನವನ್ನು ಮುಂದಕ್ಕೆ ಹಾಕಬಹುದು ಅಥವಾ ಉಪವೇಶನವನ್ನು ಕೆಲಕಾಲ ನಡೆಯದಂತೆ ಮಾಡಬಹುದು.

**350. ಕ್ರಿಯಾಲೋಪಗಳು ಮತ್ತು ಅವುಗಳ ಬಗ್ಗೆ ನಿರ್ಣಯಗಳು:** (1) ಒಂದು ಕ್ರಿಯಾಲೋಪವು ಈ ನಿಯಮಗಳ ಅರ್ಥಾನ್ವಯಕ್ಕೆ ಅಥವಾ ಈ ನಿಯಮಗಳನ್ನು ಜಾರಿಗೆ ತರುವುದಕ್ಕೆ ಇಲ್ಲವೇ ವಿಧಾನಸಭೆಯ ಕಾರ್ಯಕಲಾಪಗಳನ್ನು ಕ್ರಮಪಡಿಸುವುದಕ್ಕಿರುವಂತೆ ಸಂವಿಧಾನದ ಅನುಚ್ಛೇದಗಳ ಅರ್ಥಾನ್ವಯಕ್ಕೆ ಅಥವಾ ಅನುಚ್ಛೇದಗಳನ್ನು ಜಾರಿಗೆ ತರುವುದಕ್ಕೆ ಸಂಬಂಧಪಟ್ಟಿರತಕ್ಕದ್ದು ಮತ್ತು ಅಧ್ಯಕ್ಷರು ಗಮನಕ್ಕೆ ತೆಗೆದುಕೊಳ್ಳುವುದಕ್ಕೆ ಸಾಧ್ಯವಿರುವಂಥ ವಿಷಯವನ್ನು ಸದನದ ಗಮನಕ್ಕೆ ತರತಕ್ಕದ್ದು.

(2) ಸದನದ ಮುಂದೆ ತತ್ಕಾಲದಲ್ಲಿ ಬಂದಿರುವ ಕಾರ್ಯಕಲಾಪದ ಸಂಬಂಧದಲ್ಲಿ ಒಂದು ಕ್ರಿಯಾಲೋಪವನ್ನು ತರಬಹುದು.

ಆದರೆ, ಒಂದು ಕ್ರಿಯಾಲೋಪವು ಸದನದ ಶಿಸ್ತುಪಾಲನೆಯನ್ನು ಮಾಡುವುದಕ್ಕಾಗಲಿ ಅಥವಾ ಸದನದ ಮುಂದೆ ಬಂದಿರುವ ಕಾರ್ಯಕಲಾಪಗಳನ್ನು ವ್ಯವಸ್ಥೆಗೊಳಿಸುವುದಕ್ಕಾಗಲಿ ಸಂಬಂಧಪಟ್ಟಿದ್ದರೆ ಕಾರ್ಯಕಲಾಪಗಳ ಪೈಕಿ ಒಂದು ಬಾಬು ಮುಗಿದು ಇನ್ನೊಂದು ಬಾಬು ಪ್ರಾರಂಭವಾಗುವುದಕ್ಕೆ ಮುಂಚಿತವಾಗಿ ಬರುವ ಮಧ್ಯ ಕಾಲಾವಧಿಯಲ್ಲಿ ಒಬ್ಬರು ಸದಸ್ಯರು ಒಂದು ಕ್ರಿಯಾಲೋಪವನ್ನೆತ್ತುವುದಕ್ಕೆ ಅಧ್ಯಕ್ಷರು ಅನುಮತಿ ಕೊಡಬಹುದು.

(3) ಮೇಲಿನ (1)ನೆಯ ಮತ್ತು (2)ನೆಯ ಉಪನಿಯಮಗಳಲ್ಲಿ ತಿಳಿಸಿರುವಂಥ ಷರತ್ತುಗಳಿಗೊಳಪಟ್ಟು ಒಬ್ಬ ಸದಸ್ಯರು ಒಂದು ಕ್ರಿಯಾಲೋಪವನ್ನು ರಚಿಸಿ ಮಂಡಿಸಬಹುದು. ಹಾಗೆ ಮಂಡಿಸಿರುವುದು ಕ್ರಿಯಾಲೋಪ ಹೌದೇ ಎಂಬುದನ್ನು ಅಧ್ಯಕ್ಷರು ತೀರ್ಮಾನಿಸತಕ್ಕದ್ದು ಮತ್ತು ಅದು ಕ್ರಿಯಾಲೋಪವಾಗಿದ್ದರೆ ಅದರ ವಿಷಯದಲ್ಲಿ ತಮ್ಮ ನಿರ್ಣಯವನ್ನು ಕೊಡತಕ್ಕದ್ದು, ಅಂಥ ನಿರ್ಣಯ ಅಂತಿಮವಾಗಿರತಕ್ಕದ್ದು.

(4) ಕ್ರಿಯಾಲೋಪದ ಮೇಲೆ ಯಾವ ಚರ್ಚೆಗೂ ಅವಕಾಶಕೊಡತಕ್ಕುದಲ್ಲ ಆದರೆ ಅಧ್ಯಕ್ಷರು, ತಮಗೆ ಯುಕ್ತವೆಂದು ಕಂಡುಬಂದರೆ, ತಮ್ಮ ನಿರ್ಣಯವನ್ನು ಕೊಡುವುದಕ್ಕಿಂತ ಮುಂಚಿತವಾಗಿ ಸದಸ್ಯರುಗಳ ಹೇಳಿಕೆಗಳನ್ನು ಕೇಳಬಹುದು.

(5) ಕ್ರಿಯಾಲೋಪವು ಹಕ್ಕುಬಾಧ್ಯತೆಗಳಿಗೆ ಸಂಬಂಧಪಟ್ಟ ಸೂಚನೆಯಾಗುವುದಿಲ್ಲ.

(6) ಒಬ್ಬ ಸದಸ್ಯರು ಈ ಕೆಳಕಂಡ ವಿಷಯಗಳಿಗೆ ಸಂಬಂಧಪಟ್ಟಂತೆ ಕ್ರಿಯಾಲೋಪವನ್ನು ಎತ್ತಕೂಡದು.

(ಎ) ಮಾಹಿತಿಯನ್ನು ಕೇಳುವುದಕ್ಕಾಗಲಿ, ಅಥವಾ

(ಬಿ) ತಮ್ಮ ಅಭಿಪ್ರಾಯವನ್ನು ವಿವರಿಸುವುದಕ್ಕಾಗಲಿ, ಅಥವಾ

(ಸಿ) ಯಾವ ಪ್ರಸ್ತಾವದ ಮೇಲೆ ಆಗಲಿ ಬಂದಿರುವ ಒಂದು ಪ್ರಶ್ನೆಯು ವಿಧಾನಸಭೆಯ ಮುಂದೆ ಮಂಡಿಸುತ್ತಿರುವಾಗ ಆಗಲಿ, ಅಥವಾ

(ಡಿ) ಕೇವಲ ಊಹೆಗೆ ಸಂಬಂಧಪಟ್ಟಂತೆ ಅಥವಾ

(ಇ) ಮತಗಳ ಎಣಿಕೆಯಾಗುವುದೆಂದು ಸೂಚಿಸುವ ಗಂಟೆಗಳ ಶಬ್ದವಾಗಲಿಲ್ಲವೆಂದು ಅಥವಾ ಆ ಶಬ್ದಗಳು ಕೇಳಿಸಲಿಲ್ಲವೆಂದು ಒಂದು ಕ್ರಿಯಾಲೋಪವನ್ನು ಎತ್ತಕೂಡದು.

**351. ಕ್ರಿಯಾಲೋಪವಲ್ಲದ ಒಂದು ವಿಚಾರವನ್ನೆತ್ತುವುದು :** ಒಂದು ಕ್ರಿಯಾ ಲೋಪವಲ್ಲದಂಥ ಯಾವ ವಿಷಯವನ್ನಾಗಲಿ ವಿಧಾನಸಭೆಯು ಗಮನಕ್ಕೆ ತರಬೇಕೆಂದು ಇಚ್ಛಿಸುವ ಸದಸ್ಯರು ವಿಧಾನಸಭೆಯಲ್ಲಿ ತಾವು ಎತ್ತಬೇಕೆಂದಿರುವ ವಿಷಯವನ್ನು, ಅದನ್ನು ಸೂಚಿಸಬೇಕೆಂದಿರುವ ಕಾರಣಗಳೊಡನೆ ಸಂಕ್ಷೇಪವಾಗಿ ತಿಳಿಸಿ ಲಿಖಿತ ಮೂಲಕವಾಗಿ ಕಾರ್ಯದರ್ಶಿಯವರಿಗೆ "ಸೂಚನಾಪತ್ರ" ವನ್ನು ಕೊಡಬೇಕು ಅಧ್ಯಕ್ಷರು ಅನುಮತಿ ಕೊಟ್ಟಮೇಲೆ ಮಾತ್ರವೇ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು ಮತ್ತು ಅಧ್ಯಕ್ಷರು ಗೊತ್ತುಮಾಡಬಹುದಾದ ಕಾಲದಲ್ಲಿ ಮತ್ತು ಆ ದಿನ ಮಾತ್ರ ಅವರು ಅದನ್ನು ಸೂಚಿಸುವುದಕ್ಕೆ ಅವರಿಗೆ ಅನುಮತಿ ದೊರೆಯಬೇಕು.

*****

# ತೀರ್ಪುಗಾರರ ಮಾದರಿ ಅಂಕಪಟ್ಟಿ

## ದಿನಾಂಕ . . . . 2014-15 ರ ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಯ ಅಂಕಪಟ್ಟಿ

| ಕ್ರಮ ಸಂಖ್ಯೆ | ಜಿಲ್ಲೆಯ ಹೆಸರು | ವಿದ್ಯಾರ್ಥಿ ಹಾಗೂ ಶಾಲೆಯ ಹೆಸರು ಹಾಗೂ ತರಗತಿ | ಶಿಸ್ತು ಮತ್ತು ಸಭ್ಯತೆ (ಗರಿಷ್ಠ 10 ಅಂಕಗಳು) | ಸಂಸದೀಯ ಕಾರ್ಯ ವಿಧಾನದ ಪಾಲನೆ (ಗರಿಷ್ಠ 20 ಅಂಕಗಳು) | ಪ್ರಶ್ನೆಗಳಿಗಾಗಿ ವಿಷಯಗಳ ಆಯ್ಕೆ ಹಾಗೂ ಅವುಗಳಿಗೆ ನೀಡಿದ ಉತ್ತರಗಳ ಗುಣಮಟ್ಟ (ಗರಿಷ್ಠ 20 ಅಂಕಗಳು) | ಚರ್ಚೆಗಳಿಗೆ ವಿಷಯಗಳ ಆಯ್ಕೆ (ಗರಿಷ್ಠ 10 ಅಂಕಗಳು) | ಮಾಡಿದ ಭಾಷಣದ ಶೈಲಿ ಅಥವಾ ಮೌಲ್ಯ ಚರ್ಚೆಗಳ ಗುಣಮಟ್ಟ (ಗರಿಷ್ಠ 30 ಅಂಕಗಳು) | ಒಟ್ಟಾರೆ ಸಾಧನೆಯ ಸಾಮಾನ್ಯ ಮೌಲ್ಯ ಮಾಪನ (ಗರಿಷ್ಠ 10 ಅಂಕಗಳು) | ಒಟ್ಟು 100 ಅಂಕಗಳು |
|---|---|---|---|---|---|---|---|---|---|
| 1 | | | | | | | | | |
| 2 | | | | | | | | | |

# ಜಿಲ್ಲಾ ಮಟ್ಟದ ಯುವ ಸಂಸತ್ ಸ್ಪರ್ಧೆಗಳ ಪಟ್ಟಿ

| ಕ್ರಮ ಸಂಖ್ಯೆ<br>ಶಾಲೆಯ ಹೆಸರು | ಜಿಲ್ಲೆಯ ಹೆಸರು | ಭಾಗವಹಿಸಿದ ಸ್ಪರ್ಧಾರ್ಥಿಗಳ<br>ಹೆಸರು |
|---|---|---|
| 1 | | |
| 2 | | |
| 3 | | |
| 4 | | |
| 5 | | |
| ಶಾಲೆಗಳ ಒಟ್ಟು ಸಂಖ್ಯೆ | | |
| ವಿದ್ಯಾರ್ಥಿಗಳ ಒಟ್ಟು ಸಂಖ್ಯೆ | | |

ಜಿಲ್ಲೆಗಳ ವಿವರ

| ಸ್ಪರ್ಧೆಯಲ್ಲಿ ವೈಯಕ್ತಿಕ ಬಹುಮಾನ ಪಡೆದವರ ಸಂಖ್ಯೆ | ಸ್ಪರ್ಧೆಯಲ್ಲಿ ಮೊದಲ ಐದು ಸ್ಥಾನ ಗಳಿಸಿದ ವಿದ್ಯಾರ್ಥಿಗಳ ಹೆಸರು | ಪಡೆದ ಅಂಕಗಳು | ಶಾಲೆಯ ಹೆಸರು |
|---|---|---|---|
| | | | |
| | | | |
| | | | |
| | | | |
| | | | |